Mr. SPEAKER.—I understand.

Sri D. PARAMESHWARAPPA.—It is a matter of urgent public importance. I hope such matters will be placed on the Agenda as early as possible.

Mr. SPEAKER.—The Hon'ble member is perfectly right. But, he forgets that all cannot be taken up on the same day. Responsibility also makes one wait for its inclusion in the Agenda.

Sri D. PARAMESHWARAPPA.—Since a number of cattle are dying every day and the Department has not taken any action, I wanted the information to be furnished early.

BUDGET ESTIMATES FOR 1967-68—DEMANDS FOR GRANTS
Demand Nos. 12, 13, 26 and 41A

Sri M. V. RAMA RAO (Minister for Home and Labour).—Sir, on the recommendation of the Governor, I beg to move :

> "That a sum not exceeding Rs. 66,93,000 be granted to the Government to defray the charges which will come in course of payment during the financial year for the period ending 31st day of March 1968, in respect of 'Jails'."

Mr. SPEAKER.—Motion moved :

> "That a sum of Rs. 66,93,000 be granted to the Government to defray the charges which will come in course of payment during the financial year for the period ending 31st day of March 1968, in respect of 'Jails'."

The other Demands Nos. 13, 26 and 41 (A) are also before the House for Debate **

2-00 P.M.

Sri H. SIDDAVEERAPPA.—Sir, I oppose the demands that are just now moved by the Home Minister. First, I take up demand No. 13—Police. Sir, under this demand the Minister desires that this House should vote for a sum of Rs. 7·50 crores to defray the expenditure. As we know there are two Departments of the Government which have a vital connection with the people. Those two Departments are the Police and the Revenue. So far as the Police Department is concerned, the efficiency of an administration and the ability of the administrators or the Executive Government are measured in a very large way according to the opinion of the public held about the working of these Departments. Therefore, I would like to refer to one or two passages from the Report of Royal Commission, 1962—Final Report in U. K. Some sentiments have been expressed which are worthy of emulation by any Government. They say "It is equally to the public good that Police power should be controlled and confined so as not to interfere arbitrarily with personal freedom. The result is compromise.

**Moved upon the recommendation of the Governor.

(SRI H. SIDDAVEERAPPA)

The Police should be powerful but not oppressive; they should be efficient but not officious; they should form an impartial force in the body politic and yet to be subject to a degree of control by persons who are not required to be impartial and who are themselves liable to police supervision'', There is another passage which I would like to read and it is like this :

> "The Survey of relations between the Police and the Public carried out by the Government Social Survey :
>
> The view of the Public : The findings of the Survey constitute an overwhelming vote of confidence in the police and a striking indication of the good sense and discrimination of the bulk of the population in their assessment of the tasks that policemen have to carry out. It is clear that such change as there has been in public opinion in recent years has been mainly in favour of the Police. We thereforc assert confidently, on the basis of this survey, that relations between the police and the public are on the whole very good, and, we have no reason to suppose that they have ever, in recent times, been otherwise. This is a finding which we believe will give great satisfaction to Your Majesty, to the Police, and to the public''.

This is the thing which a democratic country will have to fallow. Of course there are different kinds of things in different countries. But in another country the name of which I do not want to mention, the conditions are more or less similar to what we find here. It is stated thus :

> " Of the specific reasons, the greatest handicaps to good police work are political patronage and partisan politics. There are many towns in which some of the most influential elements simply do not want an upright and efficient police service. In these and other places there have been, and are, many instances of police and politicians exchanging 'good services' with each other. These influential men, politicians and others, want to be able, as Bruece Smith says, to 'fix' matters when they go wrong. Indeed, in many places, there is actual opposition, mostly passive, but sometimes active, to the police. Again, all too often, the repeated and well advised 'cleaning up campaigns' are no more than window dressing, designed to pacify the responsible, public spirited sections of the population when these become restless. On the other hand there have been many examples of the actual weakening of police powers in response to public clamour, and particularly, to the demands of organized labour ''.

I may say, Sir, in Mysore State these observations refer practically in all fours. What has happened to the Police Department here today ?

I should like to mention by and large, in a very large measure, the officers left to themselves can give a good account of themselves. I have no doubt about it. I was at the helm of affairs of the Police Department for some time and I know, as a class, we cannot brand them all as bad. But who makes them bad? It is the politician. Now in the present context, the politician means the Ruling Party.

Sri K. V. SHANKARA GOWDA (Minister for Education).—Not the Opposition? It is in fact they go there and they will be seen every day in police stations.

Sri H. SIDDAVEERAPPA.—Not at all; unless you ask the police men to take them everyday and keep them there. Is that the idea? What has happened is this; so far as the Police Department is concerned, they are not allowed to function freely; they are not allowed to function according to law. I can quote plethora of instances where these friends sitting on the Opposite side want to make use of the Police as a hand-maid, as an engine of oppression to put down those whom they do not like or to make use of them to satisfy their own ends Sir, I can give one or two instances. It may not be out of place. I know cases where during recent elections how the police machinery was sought to be made use of. Willingly or unwillingly some of the police people obey the behests of some of these people. It is a pernicious thing in a democracy. We should never interfere with the working of the officers or officials of the Government. If you do so, tomorrow like a boomerang it may recoil on those who now utilise them. I can give instances. After all, there is a hierarchy of officers. If the Government want to give any instructions on a policy matter, they can see the Superintendent of Police when they go to a District and give him any instructions they like. But what do we find? Some of these Ministers call even a Sub-Inspector or Daffedar if they want to give local instructions to some of the people there with a view to put down all those who belong to a different political party. If there is a police officer who wants to do his duty efficiently and honestly, he is not given any respect. Almost within the twinkling of an eye they get rid of him from that place. The now-comers, those who come from IAS cadre, are feeling for it. They try to utilise them to such an extent that they know the Government of the day do not give them any respect. I may quote a recent instance of what happened in Bangalore when it was under the terrible grip of fear last month on 26th; every citizen has to hung his head in shame for what happened. I know there were some Police Officers twitting their eyes and smiling within themselves because they know that it will please their masters to bring their whole caravan of officers and force and try to put them as they were on a raid. Is that the way you should try to control the situation? That shows utter bankruptcy in administration. They do not know how to handle the situation. is it because, you were in the grip of fear? Is it because you do not know how to manage things? I said the other day that if there is a Minister who could understand the position, he could have handled th

(SRI H. SIDDAVEERAPPA)

situation with effortless ease, with a strength of 50 police. On the other hand, what did you do? I found the other day that for the first time, the Home Guards being utilised for this ignoble end and purpose. I asked out of curiosity; Is it for the first time that you have been brought into this? And who are those people after all? They are working in the factory—in the H.A.L and H.M.T. Consider the loss of man-power by bringing these people and putting them to this work. That itself shows that you have no time to think whether it is decoity or whether it is a simple question of mantenance of Law and Order. Or, now that we have the food problem—you have no time to apply yourselves to problems of that nature. The Home Minister does not move about. He does not move out so much as some of our other friends. Whenever we go out on the national highway, we meet half-a-dozen Ministers going about here and there. The Home Minister does not move about so much. This is one of the redeeming features in a way. But I do not approve of it. The Hon'ble Minister should go out and see how things are going about. In fact it is the duty of the Home Minister to go and find out for himself.

Sir, there is the Police Act, passed in the year 1963 and that Act came into force on the 1st January 1964. It is a matter of shame that although the Act is in force for the last three years, these gentlemen have not been able to frame rules. No rules have been framed. As a matter of fact, there are certain relevant sections which I may bring to the notice of the Minister under section 16, the Superintendent of Police who is the head of the Department in the district,—very advisedly it has been put here that the District Magistrate must have certain supervisory control over him. It is assumed that the District Magistrate will look to the public welfare and see if anything goes wrong, he has to set right and give proper guidance. It is said that in exercise of such control, the district magistrate shall subject to the rules and orders as Government may make in this behalf. No rules have been framed. It is a dead section The district magistrate has no control. And some other sections which I may bring to your notice, under section 163, there is power to make rules for various provisions namely, village police, etc. We have got police here in Bangalore and other big places. What is to happen in the villages? It is under nobody's care. The patel is no more. There is nobody else. Supposing there is a heinous offence committed; there are occasions, for days and weeks such things have not been reported. Rules are expected to be framed to regulate these things, but no rules have been framed under section 163, although the Act is in force for more than nearly three years. This is clearly an instance where nobody has opened his eyes and tried to find out in a vital matter like this, where the Act is brought into force in its entirety, they have not cared to look into it.

Then Sir, formerly, there was a procedure under which we used to have the annual Administration Report of the Department. The

last one we have is for the year 1958 and that seems to have been published in the year 1961. I do not know whether this practice has been discontinued. I asked the Librarian attached to this Assembly. He told me that this is the latest Administration Report we have on the subject. While these people have published all their photos spending a lot of money on every page that we come across—they have got their photos printed on fine glazed paper—they have published reports on several industries and other things—is it not a vital matter that they should tell us how the Department is being run and what are they doing? What are you doing? What is the crime position? What is the percentage of detection and how things are going on. These are matters in which we are blissfully kept ignorant, I think, for reasons best known to the hon. Minister. The original practice was to publish the Annul Administration Report on the working of this Department in the Gazette. I do not know whether that practice has also been discontinued. I feel it is a very serious lacuna. We do not know what is happening in the Department except what is doled out to the Members off and on.

There is another matter about which I wish to say a word. We will have to examine the transfers ordered in the Police Department. Indiscriminate transfers are being made from time to time. I can quote some instances where, to suit the needs of some local Congressmen, some Police officials are kept in the same place for a period of ten years. If at all they transfer them, they transfer them from Station A to Station B, and after one or two years they are again retransferred from Station B to Station A, because we know the officer receives instructions from local Congress bosses if anything has to be done there; even where arrests are made the local Congress bosses have a voice. Is this the way the administration should be run? Some Ministers tort out such instructions though not all. All this clearly shows the popularity of this Government; it is at its lowest ebb. It is very funny and some times even ludicrous to see how the Chief Minister moves about. After all, we are responsible to see that our Chief Minister is properly safeguarded and our Chief Minister is given all the respect that is due to his office. One Police Van goes in front, then the Chief Minister's car, and then another Police Van goes behind his car as though the Police are taking him has a prisoner. That shows the reputation of the Government and how they are held in public esteem. Their reputation is at its lowest ebb. In order to examine it, I am suggesting one thing. Let them arrange a public meeting in Bangalore. Let the Chief Minister address that public meeting. Our friend Mr. Vatal Nagaraj will also address a public meeting. We shall see how many people will attend the meeting to be addressed by our Chief Minister. We give you gurantee to see that there is no public disorder or anything of the sort.

I find that one item of expenditure is going up and that is Secret Service expenditure in the year 1966-67. They have spent Rs. 3 lakhs when it was budgeted for hardly Rs. 1 lakh.

(SRI H. SIDDAVEERAPPA)

Lastly, I would like to mention that the Government should not follow the practice of Madras, namely, when the previous Ministry in Madras went out of office, many of the important documents were burnt and reduced to ashes. Please do not do it when your turn of going out of office, comes. Let the records be kept intact as they are.

Mr. SPEAKER.—It may not be right to criticise Madras on the floor of this House.

Sri H. SIDDAVEERAPPA.—I am not bringing the instance of Madras. Let me say as has been done elsewhere.

Then, Sir, I should say that judges make comments about police administration when cases are brought under trial. It is very essential that they should be taken note of by the concerned department and action should be taken if anything goes wrong.

2-30 P.M.

I do not propose to refer to Home Guards because the time at my disposal is too short. I have one word about the labour position. There is a lot of educated unemployment in the country. It is high time the Government should scratch up their brains and see that something is done in this regard. It is a sad sight to see that some of our highly qualified boys move from door to door. Government should examine this question early. For want of time, I conclude and oppose these Demands.

†Sri D. PARAMESHWARAPPA.—Mr. Speaker, Sir, I would confine my remarks only to Demands 12,13 and 41A. At the outset I would like to refer to the Jails Demand No. 12. Looking to the cut motions that have been sent by so many friends, I feel that certain reforms have got to be made so far as administration of "Jails" is concerned. One thing that I have felt is about the treatment of the prisoners in the jail. We have to admit that the treatment meted out to certain prisoners is something inhuman. Therefore, on this occasion I personally appeal to the Minister in charge of Jails to effect some reforms in this connection. Sir, no doubt we expect a better treatment to the prisoners in jails. There are so many convicts in the jails and if we take into consideration the number of prisoners in all the jails, they may come to thousands in this State.

So, personally I feel that their services could be utilised for nation building activities; I have always thought of this problem. Instead of idling away their time in jails, there services can be utilised for construction of roads, construction of buildings and various other such works. I think, Government could save expenditure in the field of Public Works and other nation building activities. This is the one suggestion that I would like to make on this occasion.

Coming to Police Department, my elderly friend Sri Siddaveerappa levelled criticisms against the working of this department. Sir, this is an essential department which is very vital in safeguarding the lives and property of the people and in preventing crimes and in maintaining law and order in the State. Therefore, considering the importance of the department, I feel that the administration has got to be reoriented. Certain members have levelled criticisms against this department that there is corruption, there is too much of interference at every stage in the administration of the department and there is favouritism also. I am not going into the details of all these things. But one thing is, I admit that there is inefficiency in the Police Department and we have to find out the root cause for this inefficiency. In my opinion, the root cause for the inefficiency in the police administration is due to inadequate pay that is given to the Constables and lower officials of the department. Though the cost of living has risen by leaps and bounds, the pay scales of the constables and other officials remain the same. Therefore, if you expect efficiency in the department, it is very necessary that they are paid sumptuously and also other facilities be given to them.

SRI M. S. KRISHNAN (Malleswaram).—Efficiency to break the heads and legs of the people, is it?

SRI D. PARAMESHWARAPPA.—It is your opinion. Sir, to increase efficiency in the Police Department, the salaries of the Constables who stand from morning till evening who maintain law and order and who are out to prevent crimes, must be raised I am making this suggestion to the Home Minister to consider in all its perspective. Then, there are no quarters for the police officials even in some taluk headquarters. They must be provided with quarters where there are none at present.

Coming to the expenditure connected with National Emergency, we all know that this situation of National Emergency arose on the outbreak of hostilities on our borders by our neighbouring countries, China and Pakistan. Many of my friends are not for continuance of National Emergency because they contend that this situation has already gone since the hostilities have ended. But, we are hearing in newspapers everyday that some trouble or the other is created by China in the borders on the one hand and by Pakistan on the other. Therefore, under such circumstances, it is very necessary to constitute some machinery to maintain the internal peace and the Government, with a view to maintain law and order and for the purpose of civil defence, have constituted what is called Home Guards on the analogy of Red Guards in China. I shall again refer to the Police Department for making a last suggestion of mine. My hon'ble friend Sri H. Siddaveerappa was referring to the relations between the public and the Police Department and said that they are not watched properly. It is a good suggestion and for that purpose I suggest a committee be constituted at the State level to watch the relations of the public and the Police and to report to the Government time and again about the relationship that exist. With these words I thank you.

ಶ್ರೀ ಎಂ. ಎಂ. ಜಾಲಿಶಟಗಿ (ಭಟ್ಕಲ್).—ಮಾನ್ಯ ಅಧ್ಯಕ್ಷರೇ, ಈ ಡಿಮ್ಯಾಂಡ್ 13ರನ್ನು ವಿರೋಧಿಸುತ್ತಾ ಕೆಲವು ಸೂಕ್ತ ಸಲಹೆಗಳನ್ನು ಮಾಡಬಯಸುತ್ತೇನೆ.

1957-58ನೇ ಸಾಲಿನಲ್ಲಿ ಈ ಇಲಾಖೆಯ ಬೇಡಿಕೆ 3 ಕೋಟಿ ಚಿಲ್ಲರೆ ರೂಪಾಯಿಗಳಿತ್ತು. ಆದರೆ ಈ ಬೇಡಿಕೆ 1967-68ಕ್ಕೆ 7 ಕೋಟಿ ಚಿಲ್ಲರೆ ರೂಪಾಯಿಗಳಿಗೇರಿದೆ. ಚೆರೋ ಆಡಳಿತ ವಿದ್ದಿದ್ದರೆ ಇಷ್ಟು ಖರ್ಚಾಗುವುದಕ್ಕೆ ನಾವು ಯಾರೂ ವ್ಯಸನಪಡುತ್ತಿರಲಿಲ್ಲ. ಈ ಇಲಾಖೆಯ ಆಡಳಿತ ಚೆರೋ ಇದ್ದಿದ್ದರೆ ನಾವು ಬಹಳ ಸಂತೋಷಪಡುತ್ತಿದ್ದೆವು. ಆದರೆ ಅದಕ್ಕೆ ಅವಕಾಶವಿಲ್ಲ. ಇಂಥಾ ಒಂದು ದೊಡ್ಡ ಮಹಾನಗರದಲ್ಲಿ—ಬೆಂಗಳೂರಲ್ಲಿ ಅದೂ ಹಾಡುಹಗಲಲ್ಲಿ ಕೆಲವು ದಿನಗಳ ಹಿಂದೆ ಆದ ಖೂನಿ ಕೇಸು ಇನ್ನೂ ಪತ್ತೆಯಾಗಿಲ್ಲ. ಇಂಥಾ ನಿದರ್ಶನಗಳು ಬಹಳ ಅವೆ. ನಮ್ಮ ಹೊನ್ನಾವರ್ ತಾಲ್ಲೂಕದಲ್ಲಿ ಚಿಕ್ಕನಗೌಡ ಅನ್ನುವ ಗ್ರಾಮದಲ್ಲಿ ಆಲೂರ ಪಟೇಲರನ್ನು ಹಾಡುಹಗಲಲ್ಲಿ ಬಂದು ಕರೆದುಕೊಂಡು ಹೋದರು. ಆದರೆ ಅವರು ಇಲ್ಲಿಯವರೆಗೂ ಏನಾದರೆಂಬುದು ಪತ್ತೆಯಿಲ್ಲ. ಅವರ ಒಂದು ವಸ್ತ್ರ, ಎಲುಬು ಮತ್ತು ಡಾಗಿನೆ ಎಲ್ಲಾ ಸಿಕ್ಕವು. ಆದರೆ ಆರೋಪಿ ಯಾರು ಎಂಬುದಿನ್ನೂ ಪತ್ತೆಯಾಗಿಲ್ಲ. ಹೀಗೆ ಉತ್ತರ ಕರ್ಣಾಟಕದ ಹಿಲ್ಲೂರು ಅಚವೆ ಎಂಬ ಗ್ರಾಮಗಳಲ್ಲಿ ಹಾಡುಹಗಲೇ ದರೋಡೆಗಳೂ, ಖೂನಿಗಳು ಆಗವೆ. ಅಲ್ಲಿ ಆ ಬಗ್ಗೆ ಖಟ್ಲೆಗಳನ್ನೇ ಇನ್ನೂ ಹಾಕಿರುವುದಿಲ್ಲ. ಅಂದಮೇಲೆ ಯಾವ ರೀತಿ ಆಡಳಿತದಲ್ಲಿ ದಕ್ಷತೆ, ಬಿಗಿ ಇದೆಯೆಂಬುದು ಇದರಿಂದಲೇ ವೇದ್ಯವಾಗುತ್ತದೆ. ಪೋಲೀಸಿನವರು ಈ ಕೇಸುಗಳ ಬಗ್ಗೆ ಹಿಂದಿನ ಹಾಗೆ ಈಗ ಆಸಕ್ತಿ ವಹಿಸುತ್ತಿಲ್ಲ ಅನ್ನುವುದು ಎಲ್ಲರಿಗೂ ಕಂಡುಬರುತ್ತಿದೆ.

ಹೇಳಬೇಕೆಂದರೆ ಉದಾಹರಣೆಗಳು ಬೇಕಷ್ಟು ಅವೆ. 1962ರಲ್ಲಿ ಗೋವಿಂದ, ಬೀರಣ್ಣ ನಾಯ್ಕ ಹಾಡುಹಗಲಲ್ಲೇ............

ಅಧ್ಯಕ್ಷರು.—1962 ಎಂದರೆ ಅದು ಬಹಳ ಹಳೆಯದಾಯಿತು..............

ಶ್ರೀ ಎಂ. ಎಂ. ಜಾಲಿಶಟಗಿ.—ಅವರ ಮನೆಗೆ ನುಗ್ಗಿ ಅವರ ಹೆಂಡತಿಯ ಬಾಯಿಗೆ ಅರಿವೆ ಗಂಟನ್ನು ತುರುಕಿ, ಆಕೆಯ ಮಾನಭಂಗಮಾಡಿ, ವಡವೆ ವಸ್ತ್ರಗಳನ್ನು ಅಪಹರಿಸಿದರು. ತಾವು 1962ರ ವಿಷಯ ಬಹಳ ಹಳೆಯದಾಯಿತು ಅನ್ನುವುದಾದರೆ—1963ರ ವಿಚಾರ ಹೇಳುತ್ತೇನೆ. ನಾಗಪ್ಪ ಹೆಗಡೆ ಎಂಬುವವರು ಅಡಕೆ ಮಾರಿ ಮಧ್ಯೆ ದಾರಿಯಲ್ಲಿ ಬರುತ್ತಿದ್ದಾಗ ಅವರ ಹಣ ಕಸಿದುಕೊಂಡು ಹೋದರು. ಇದೇ ರೀತಿಯಾಗಿ 1965ರಲ್ಲಿ ಸೀತಾಬಾಯಿ ಎಂಬುವವರ ಮನೆಗೆ ಕಳ್ಳರು ನುಗ್ಗಿ ಅವರ ಮನೆಯಲ್ಲಿದ್ದ ತಾಮ್ರದ ಹಂಡೆ ಮತ್ತು ನಗದು 300 ರೂಪಾಯಿಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ. 1966ರಲ್ಲಿ ವಿಷ್ಣುಮಹಾಬಲೇಶ್ವರ, ಹಿಲ್ಲೂರ್, ನಾರಾಯಣ ಹರಿಹರ ಹೆಗ್ಗಡೆ ಹಿಲ್ಲೂರ್ ಇವರ ಮನೆಗಳಿಗೆ ನುಗ್ಗಿ ಅವರ ಬಚ್ಚಲುಮನೆಗಳಲ್ಲಿದ್ದ ಹಂಡೆಗಳನ್ನು ತೆಗೆದುಕೊಂಡು ಹೋಗಿದ್ದಾರೆ. 1966ರಲ್ಲಿ ಹಿಬ್ಬೂರ್ ಹೆಂಚಿನಗೆರೆ ರಾಮೇಗೌಡ ಕುರುಬನ ಗೌಡ ಇವರ ಮನೆಗೆ ನುಗ್ಗಿ ಪೋಲೀಸ್ ಅಧಿಕಾರಿಗಳ ವೇಷ ಹಾಕಿಕೊಂಡು, ಅವರಿಂದ ಸತ್ಕಾರ ವನ್ನು ಪಡೆದು, ಅನಂತರ ಅವರನ್ನು ಬಿಗಿದು ಬಂಧಿಸಿ ಅವರ ಮನೆಯಲ್ಲಿದ್ದ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದಾರೆ. 1967ರಲ್ಲಿ ಶಿವಸುಬ್ರಾಯ ಭಟ್ಟ, ಹಜ್ಜೆ ಇವರ ಮನೆಗೆ ರಾತ್ರಿ ವೇಳೆಯಲ್ಲಿ ಸಶಸ್ತ್ರಪಾಣಿಗಳಾಗಿ ನುಗ್ಗಿ 5 ಜನರು ತಮ್ಮ ರೂಪವನ್ನು ಬದಲಾಯಿಸಿಕೊಂಡು ನಿಮ್ಮಲ್ಲಿರತಕ್ಕ ಹಣವನ್ನು ಕೊಡುತ್ತೀರೋ ಇಲ್ಲವೇ ನಿಮ್ಮನ್ನು ಖೂನಿ ಮಾಡಬೇಕೋ ಎಂದು ಹೆದರಿಸಿ ಅವರಲ್ಲಿದ್ದ ಹಣವನ್ನು ದರೋಡೆ ಮಾಡಿಕೊಂಡು ಹೋಗಿದ್ದಾರೆ. 1967ರಲ್ಲಿ ಹೀಗೆ ಮತ್ತೊಂದು ಕೃತ್ಯ ನಡೆದಿದೆ. ಕಲ್ಯಾಣಿ ಕೋಂ ವಿಷ್ಣು ಹೆಗ್ಗಡೆ ಇವರನ್ನು ಹಿಡಿದು ಅವರ ಮೈ ಮೇಲಿದ್ದ ಆಭರಣಗಳನ್ನು ಸುಲಿಗೆ ಮಾಡಿಕೊಂಡು ಹೋಗಿದ್ದಾರೆ; ಅರಿವೆ ಒಡವೆಗಳನ್ನೂ ತೆಗೆದು ಕೊಂಡು ಹೋಗಿದ್ದಾರೆ. ಹೀಗೆ 1967ರಲ್ಲಿ ವೆಂಕಟರಮಣಪ್ಪ ಹೊಸಕರಿವೆ ಎನ್ನತಕ್ಕವರು ತಮ್ಮ ಉಪಜೀವನಕ್ಕೆ ಇಟ್ಟುಕೊಂಡಿದ್ದ ಸಾಮಾನುಗಳನ್ನು ಕದ್ದುಕೊಂಡು ಹೋಗಿದ್ದಾರೆ. ಹೀಗೆ ಹೇಳಬೇಕೆಂದರೆ ಬಹಳಷ್ಟಿವೆ. ಒಂದು ವೇಳೆ ಪೋಲೀಸರು ಕೇಸುಗಳನ್ನು ಪತ್ತೆಹಚ್ಚಿ ಕೋರ್ಟಿಗೆ ಛಾರ್ಜ್‌ಷೀಟನ್ನು ಹಾಕಿದಮೇಲೆ ಅವು ಕೋರ್ಟಿನಲ್ಲಿ ನಿಲ್ಲುವುದಿಲ್ಲ. ಖಟ್ಲೆ ಅಲ್ಲಿ ಬಿಟ್ಟುಹೋಗುತ್ತವೆ. ಕಾರಣ ಪೋಲೀಸ್ ಅಧಿಕಾರಿಗಳಿಗೆ ಸರಿಯಾಗಿ ಸಾಕಷ್ಟು ಪರಿಜ್ಞಾನ ಇರುವುದಿಲ್ಲ. ಅವರಿಗೆ ಇನ್‌ವೆಸ್ಟಿಗೇಷನ್ನಿನಲ್ಲಿ ಸಾಕಷ್ಟು ಪರಿಜ್ಞಾನ ಇರುವುದಿಲ್ಲ. ಅವರಿಗೆ ಸರಿಯಾಗಿ ಪಂಚನಾಮು ಮಾಡುವುದಕ್ಕೆ ಬರುವುದಿಲ್ಲ. ಒಂದೊಂದು ತಾಲ್ಲೂಕಿನಲ್ಲಿ ಪೋಲೀಸ್ ಪ್ರಾಸಿಕ್ಯೂಟರರು ಇರುತ್ತಾರೆ. ಅವರಿಗೆ ತಿಂಗಳುಗಟ್ಟಲೆ ಕೆಲಸವಿರುವುದಿಲ್ಲ. ಆದುದರಿಂದ ಅವರಿಗೆ ಒಂದು ವಾರದಲ್ಲಿ ಒಂದು ತಾಸಾದರೂ ಈ ವಿಚಾರದಲ್ಲಿ ಟ್ರೈನಿಂಗನ್ನು ಕೊಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಇಂಥಾ ಒಂದು ಶಿಕ್ಷಣವನ್ನು ಕೊಡತಕ್ಕ ಬಗ್ಗೆ ಹುಕುಂ ಆಗಬೇಕೆಂದು ಹೇಳುತ್ತೇನೆ. ಇನ್ನು ಇದರ ಜೊತೆಗೆ ಪೋಲೀಸ್ ಸಿಬ್ಬಂದಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳತಕ್ಕ ವೇಳೆಯಲ್ಲಿ ಅವರಿಗೆ ಕನಿಷ್ಠ

ಪಕ್ಷ ಒಂದು ಎಸ್.ಎಸ್.ಎಲ್.ಸಿ. ಪರೀಕ್ಷೆಯಾದರೂ ಪಾಸಾಗಿರಬೇಕೆಂದು ಒತ್ತಾಯ ಮಾಡಬೇಕು. ಇವೆರಡೂ ಬಹಳ ಅಗತ್ಯವೆಂದು ನನಗನಿಸುತ್ತದೆ.

ಈ ದಿವಸ ನಾವು ಇಂಗ್ಲೆಂಡಿನಲ್ಲಿರತಕ್ಕ ಪಾರ್ಲಿಯಮೆಂಟರಿ ಡೆಮಾಕ್ರಸಿ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ. ಆದುದರಿಂದ ಅಲ್ಲಿ ಈ ಪೋಲೀಸಿನ ವ್ಯವಸ್ಥೆ ಹೇಗೆ ಇರುತ್ತದೆಯೋ ಅದರಂತೆ ಮಾಡುವುದು ಅತ್ಯಗತ್ಯ ಎಂದು ಹೇಳುತ್ತೇನೆ. ಅಲ್ಲಿಯ ಹಾಗೆ ಇಲ್ಲಿನ ಪೋಲೀಸ್ ಸಿಪಾಯಿಗೆ ಪೋಲೀಸ್ ಕಮೀಷನರವರೆಗೆ ಹುದ್ದೆ ಸಿಗುವ ಅವಕಾಶ ಇರಬೇಕು.

ಇನ್ನು ಪೋಲೀಸ್ ಅಧಿಕಾರಿಗಳು ಕೋರ್ಟಿಗೆ ಛಾರ್ಜ್‌ಷೀಟನ್ನು ಹಾಕಿದ ಮೇಲೆ ಅವರು ಆ ಕೇಸುಗಳ ಕಡೆಗೆ ತಮ್ಮ ಲಕ್ಷ್ಯವನ್ನೇ ಕೊಡುವುದಿಲ್ಲ. ಅಂಥವರ ಮೇಲೆ ಮೇಲಧಿಕಾರಿಗಳ ಬಿಗಿಯೂ ಇಲ್ಲ, ಮಧ್ಯೆ ಮಧ್ಯೆ ಇವರು ವರ್ಗವಾಗುತ್ತಿರುತ್ತಾರೆ, ಒಬ್ಬರು ಹಾಕಿದ ಕೇಸಿನ ಮೇಲೆ ವರ್ಗವಾಗಿ ಬಂದವರು ಸಾಕಷ್ಟು ನಿಗಾ ತೆಗೆದುಕೊಳ್ಳುತ್ತಿಲ್ಲ. ಹೀಗಾಗಿ ಕೋರ್ಟಿನಲ್ಲಿ ಖಟ್ಲೆಗಳು ಬಿದ್ದು ಹೋಗುತ್ತಿವೆ. ಹೀಗಾಗದಂತೆ ಮೇಲಧಿಕಾರಿಗಳು, ಕೆಳಮಟ್ಟದಲ್ಲಿರುವ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುವಂತೆ ಮಾಡಬೇಕು.

ಮತ್ತೊಂದು ವಿಷಯ. ಈ ಪೋಲೀಸ್ ಅಧಿಕಾರಿಗಳು ತಮ್ಮ ಘನತೆ ಗೌರವಗಳನ್ನು ಇಟ್ಟುಕೊಳ್ಳುವುದಿಲ್ಲ. ಇವರು ಅನೇಕ ಸಾರಿ ಕುಡಿದು ಗಟಾರಿನಲ್ಲಿ ಬಿದ್ದಿದ್ದಾರೆ. ಇದರಿಂದ ಇವರ ಗೌರವ ಸಾರ್ವಜನಿಕರಲ್ಲಿ ಎಷ್ಟು ಇರಬಹುದೆಂಬುದನ್ನು ತಾವು ವಿಚಾರ ಮಾಡಬಹುದು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಗೃಹಮಂತ್ರಿಗಳು ಮಂಡಿಸಿರತಕ್ಕ, ಪೋಲೀಸ್, ಜೈಲ್, ಕಾರ್ಮಿಕ ಹಾಗೂ ಉದ್ಯೋಗ ಮತ್ತು ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗಾಗಲೇ ಮಾತನಾಡಿದಂತಹ ಮಾನ್ಯ ಸದಸ್ಯರು ಹಾಗೂ ಮಾಜಿ ಮಂತ್ರಿಯಾಗಿದ್ದಂತಹ ಶ್ರೀಮಾನ್ ಸಿದ್ಧವೀರಪ್ಪನವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಸಲಹೆಗಳನ್ನು ಕೊಡುವ ಕಾಲಕ್ಕೆ ಉತ್ಪ್ರೇಕ್ಷೆಯಾಗಿ ಕೊಟ್ಟಿದ್ದಾರೆಂದು ಹೇಳಬಹುದು. ಈ ಸಭೆಯಲ್ಲಿ ಪೋಲೀಸ್ ಸಂಬಂಧಪಟ್ಟ ಬೇಡಿಕೆಗಳು ಬಂದಾಗ, ಅದರ ವಿಷಯದಲ್ಲಿ ಹೇಳತಕ್ಕ ಟೀಕೆ, ಸರ್ವಸಾಮಾನ್ಯವಾಗಿ ದೆಯೆಂದು ನನ್ನ ಅಭಿಪ್ರಾಯ. ನಾವು ನಿನ್ನೆ ಮತ್ತು ಮೊನ್ನೆ ಚರ್ಚೆಮಾಡುವ ಕಾಲದಲ್ಲಿ, ಪಾನ ನಿರೋಧ ಕಾನೂನುಗಳನ್ನು ಜಾರಿಗೆ ತರುವ ಕಾಲದಲ್ಲಿ ಪೋಲೀಸಿನವರು ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರದೆ, ಅವರಿಗೆ ಸಹಕಾರಿಯಾಗಿ ರಕ್ಷಣೆ ಕೊಡುತ್ತಿದ್ದಾರೆಂದು. ಆದರೆ ಕೆಲವರು ಅತೀಯ ವಾಗಿ ಅನೇಕ ಟೀಕೆಗಳನ್ನು ಮಾಡುವುದು ಸರ್ವಸಾಮಾನ್ಯವಾದ ವಿಚಾರ. ದೇಶದಲ್ಲಿ ಇನ್‌ಎಫಿಶಿ ಯನ್ಸಿ ಇಲ್ಲವೆಂದು ಹೇಳುವುದಿಲ್ಲ. ಇದೆ. ಮುಖ್ಯವಾಗಿ ಸಮಾಜದಲ್ಲಿ ಹೇಗೆ ಸುಧಾರಣೆಯಾಗುತ್ತದೆ, ಅದೇ ರೀತಿಯಲ್ಲಿ ಒಬ್ಬ ಕಾನ್‌ಸ್ಟೇಬಲ್ ವಿಷಯದಲ್ಲಿ ಹೇಳುವುದಾದರೆ, ಅತನಿಗೆ ಕೇವಲ 60-70 ರೂಪಾಯಿಯಲ್ಲಿ ಜೀವನ ಮಾಡತಕ್ಕಂತಹ ವಿಚಾರ ಬಹಳ ಕಷ್ಟಕರವಾದುದು. ಜೀವನ ಮಟ್ಟ ಹೆಚ್ಚಾಗುತ್ತಿರುವಂತೆ, ಅವನು ಮಾಡುತ್ತಿರುವುದು ತಪ್ಪು ಎಂದು ಹೇಳಿದರೆ, ಅದನ್ನು ಯೋಚನೆ ಮಾಡಿದರೆ, ಅಷ್ಟೇನೂ ತಪ್ಪಾಗಲಾರದು. ಆದರೆ ಕಾನೂನು ರೀತಿಯಲ್ಲಿ ಅದು ತಪ್ಪು. ಆದ್ದರಿಂದ ಅವರುಗಳಿಗೆ ಈಗ ಒಂದು ಪ್ರೈಮರಿ ಶಾಲೆಯಲ್ಲಿ ಇದ್ದವರಿಗೆ ಹೇಗೆ ಗೌರವ ಕೊಡುತ್ತಾರೋ, ಅದೇ ರೀತಿ ಇವರಿಗೂ ಸಮಾಜದಲ್ಲಿ ಗಣ್ಯ ವ್ಯಕ್ತಿಯ ಹಾಗೆ ಸಂಬಳಸಾರಿಗೆಗಳನ್ನು ಕೊಡಬೇಕು. ಆಗ ಅವರು ಏನಾದರೂ ತಪ್ಪು ಮಾಡಿದರೆ, ಅವರಿಗೆ ಶಿಕ್ಷೆ ಕೊಡಬೇಕು, ಅಥವಾ ಕಠಿಣತರವಾದ ಶಿಕ್ಷೆಗೆ ಒಳಪಡಿಸ ಬಹುದು. ಈ ಮಾತು ಹೇಳುವ ಕಾಲದಲ್ಲಿ ಸರ್ಕಾರದ ವತಿಯಿಂದ ಅಥವಾ ಸಂಬಂಧಪಟ್ಟ ಇಲಾಖೆ ಯವರು ಅದಕ್ಕೆ ಗಮನಕೊಡಬೇಕಾದುದು ಮುಖ್ಯ. ಮುಖ್ಯವಾಗಿ ಸಮಾಜದಲ್ಲಿ ಈಚೆಗೆ ಹುಟ್ಟಿ ಕೊಂಡಿರತಕ್ಕ ಈ ಕಳ್ಳಭಟ್ಟಿ ಸಾರಾಯಿ ಮತ್ತು ಸಮಾಜ ದ್ರೋಹ ಮಾಡತಕ್ಕ ಗೂಂಡಾಗಳು, ಇವು ಗಳನ್ನೆಲ್ಲಾ ಇವತ್ತು ತಡೆಗಟ್ಟುವುದು ಬಹಳ ಕಷ್ಟವಾಗಿದೆ. ಕೆಲವು ಸ್ಥಳೀಯ ಅಧಿಕಾರಿಗಳು ಬಹಳ ತೊಂದರೆ ಕೊಡುತ್ತಿದ್ದಾರೆ. ಅಂಥವರು ಎಂದರೆ, ಸಬ್ ಇನ್‌ಸ್ಪೆಕ್ಟರು ಮತ್ತು ಅವರ ಕೆಳಗಿನವರು, ನನ್ನ ತಾಲೂಕಿನಲ್ಲಿ ಕೆಲವು ಕೃತ್ಯಗಳು ನಡೆದಿವೆ. ಅವುಗಳನ್ನು ಸಂಬಂದಪಟ್ಟ, ಎಸ್. ಪಿ., ಡಿ. ಐ. ಜಿ. ಮತ್ತು ಐ.ಜಿ.ಗೂ ಕೂಡ ನಾನು ವಿಧಾನ ಸಭಾ ಸದಸ್ಯನಾದ ಮೇಲೆ 3-4 ಸಲ ಹೇಳಿದ್ದೇನೆ. ಅದಕ್ಕೆ ಡಿ. ಐ. ಜಿ. ಹೇಳುತ್ತಾರೆ—ಅವರು ಬಂದು ಕೇವಲ ಒಂದು ವರ್ಷವಾಗಿದೆಯಷ್ಟೆ. ಒಬ್ಬೊಬ್ಬ ಸಬ್ ಇನ್‌ಸ್ಪೆಕ್ಟರ್ ಒಂದೊಂದು ಸ್ಥಳದಲ್ಲಿ 20 ವರ್ಷದ ವರೆಗೂ ಇದ್ದವರೂ ಇದ್ದಾರೆ. ನನ್ನ ತಾಲ್ಲೂಕಿನಲ್ಲಿ ಎರಡು ಸಾರಿ ಅಲ್ಲಿಯೇ ಇರತಕ್ಕ ಪರಿಸ್ಥಿತಿ ಬಂದಿದೆ. ಅದನ್ನು ಐ. ಜಿ. ಪಿ. ಯವರ ಗಮನಕ್ಕೂ

(ಶ್ರೀ ಎನ್. ಚಿಕ್ಕೇಗೌಡ)

ತಂದಿದ್ದೇನೆ. ಅಂಥವರು ಅಪರಾಧಿಗಳ ಹಣ ತಿಂದು ಕೆಲವರಿಗೆ ತೊಂದರೆ ಕೊಡತಕ್ಕ ಉಗ್ರ ಪರಿಸ್ಥಿತಿ ಬಂದಿದೆ. ಆದ್ದರಿಂದ ಅದಕ್ಕೆಲ್ಲಾ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಅರಿಕೆ ಮಾಡಿ ಕೊಳ್ಳುತ್ತೇನೆ. ಮತ್ತು ದೂರುಗಳನ್ನು ಕೊಟ್ಟರೆ, ಆ ಅಂಶವನ್ನು ಕೆಲವರು ಸಣ್ಣ ಪುಟ್ಟ ಅಧಿಕಾರಿ ಗಳು ಅಪರಾಧಿಗಳಿಗೆ ತಿಳಿಸಿ ಕೋರ್ಟಿನಲ್ಲಿ ಸರೆಂಡರ್ ಆಗಿ ರಕ್ಷಣೆ ಪಡೆಯುವುದನ್ನೂ ಮಾಡುತ್ತಿದ್ದಾರೆ ಈ ರೀತಿ ಮಾಡಿದರೆ ಯಾವುದನ್ನೂ ಮಾಡಲಿಕ್ಕಾಗುವುದಿಲ್ಲ. ಎಫ್. ಐ. ಆರ್. ಬರೆಯುವುದರೊಳಗೆ, ಚಾರ್ಜ್‌ಶೀಟ್ ಬರೆಯುವುದರೊಳಗೆ ಲೋಪ ದೋಷಗಳಿರುವುದರಿಂದ ಹೈಕೋರ್ಟು, ಸುಪ್ರೀಂ ಕೋರ್ಟಿಗೆ ಹೋದರೂ ಅಪರಾಧಿಗೆ ಶಿಕ್ಷೆಯಾಗುವುದಿಲ್ಲ, ಫಿರ್ಯಾದಿಗೆ ರಕ್ಷಣೆ ದೊರಕುವುದಿಲ್ಲ. ನಮ್ಮಲ್ಲಿ ನಿನ್ನೆ ತಾನೆ ಕಾಯಿದೆ ಪಾಸ್ ಮಾಡಿದ್ದಾರೆ. ಸಾಮಾನ್ಯವಾಗಿ ಕೆಲವರು ಅಧಿಕಾರಿಗಳು ಭಟ್ಟಿ ಸರಾಯಿ ನಡೆಸತಕ್ಕವರಿಗೆ ರಕ್ಷಣೆ ಕೊಡುತ್ತಿದ್ದಾರೆ. ಅದನ್ನು ಪೋಲಿಸಿನವರಿಗೆ ಹೇಳಿದರೆ, ನನಗೆ ಸಂಬಂಧಪಟ್ಟದ್ದಲ್ಲ, ಎಕ್ಸೈಸ್ ಸ್ಕ್ವಾಡಿಗೆ ಹೇಳಿ ಎಂದು ಹೇಳುತ್ತಾರೆ. ನನ್ನ ತಾಲ್ಲೂಕಿನಲ್ಲಿ ಇಂಥ ಎರಡು ದೊಡ್ಡ ಕೇಂದ್ರಗಳಿವೆ. ಅದರೊಳಗೆ ಯಾವ ಪೋಲೀಸಿನವರೂ ಹೋಗುವುದಕ್ಕಾಗುವುದಿಲ್ಲ. ಅಲ್ಲಿ ಬೇರೆ ಒಂದು ರಾಜ್ಯ ನಡೆಯುತ್ತಿದೆ ಎಂದು ಹೇಳಿದರೂ ಉತ್ಪ್ರೇಕ್ಷೆಯಾಗಲಾರದು. ಈ ಕ್ಷಣ ಹೋದರೂ ಅಲ್ಲಿ ಹಗಲು ರಾತ್ರಿ ರಸ್ತೆಯಲ್ಲಿ ನಡೆಸುತ್ತಿದ್ದುದನ್ನು ನೋಡಬಹುದು. ನಾನು ತಾಲೂಕು ಬೋರ್ಡು ಪ್ರೆಸಿಡೆಂಟ್ ಆಗಿದ್ದಾಗ ಜೀಪ್‌ನಲ್ಲಿ ಹೋಗುತ್ತಿದ್ದೆ. ಆ ಜೀಪನ್ನು ಪೋಲೀಸಿ ನವರ ಜೀಪು ಎಂದು ತಿಳಿದು ಕಲ್ಲು ಸಮೇತ ಹೊಡೆದಿದ್ದಾರೆ. ಈ ರೀತಿ ಗೂಂಡಗಳಾಗಿ ಸಮಾಜ ಘಾತುಕ ಕೆಲಸಗಳು ನಡೆಯುತ್ತಿವೆ. ಇಂಥ ಕಾರ್ಯಕ್ರಮಗಳು ದೇಶದಲ್ಲಿ ಜಾಸ್ತಿಯಾಗಿ ಅನಾಹು ತುಗಳು ಜಾಸ್ತಿಯಾಗುತ್ತಿದೆ. ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಇಲ್ಲವೆಂದು ಹೇಳುವುದಿಲ್ಲ. ದಕ್ಷತೆ ಇದ್ದರೂ ಕೂಡ ಸಂಬಂದಪಟ್ಟ ಅಧಿಕಾರಿಗಳು, ಆಫೀಸರ್‍ಸ್ ಸೇರಿಕೊಂಡು ಈ ರೀತಿಯಲ್ಲಿ ನಡೆಕೊಂಡು ಹೋಗುತ್ತದೆ. ಇಂಥವನ್ನು ತಪ್ಪಿಸಬೇಕು.

ನನ್ನ ತಾಲ್ಲೂಕಿನಲ್ಲಿ ಒಂದು ಕಡೆ ಒಬ್ಬನನ್ನು ರಾತ್ರಿ ಖೂನಿ ಮಾಡಿದರು. ಅದನ್ನು ಪೋಲೀಸಿ ನವರಿಗೆ ಮೊದಲೇ ತಿಳಿಸಿ, ಒಂದೂವರೆ ಸಾವಿರ ರೂಪಾಯಿ ತೆಗೆದುಕೊಂಡು ಖೂನಿ ಮಾಡಿಸಿದ್ದಾರೆ. ಅವನ ಕೈ ಕಾಲು ಕತ್ತರಿಸಿ ಹಾಕಿದ್ದಾರೆ. ಇದು ನಾನು ವಿಧಾನ ಸಭಾ ಸದಸ್ಯನಾಗಿ 20 ದಿವಸದ ನಂತರ ನಡೆದ ಘಟನೆ. ಇದನ್ನು ಸಂಬಂಧಪಟ್ಟವರಿಗೆ ಹೇಳಿದರೆ, ಅದು ಕಾಲ ವಿಳಂಬವಾಯಿತ್ತು, ಈಗ ತೆಗೆದುಕೊಳ್ಳಲು ಆಗುವುದಿಲ್ಲವೆಂದು ತಿಳಿಸಿದರು. ಇಂಥವುಗಳು ಅನೇಕ ಕಡೆ ನಡೆಯುತ್ತಿವೆ. ಈ ರೀತಿ ಅಧಿಕಾರಿಗಳ ರಕ್ಷಣೆಯಲ್ಲಿ ದೇಶದಲ್ಲಾಗುತ್ತಿರುವ ಅಪರಾಧಗಳಿಗೆ ಹೆಚ್ಚಿನ ಅವಕಾಶ ಕೊಟ್ಟಂತಾಗು ತ್ತದೆ. ಆದ್ದರಿಂದ ಕಟ್ಟುನಿಟ್ಟಾಗಿರುವ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಯವರು ಅಂಥ ಸ್ಥಳಗಳಿಗೆ ಸಂಚಾರ ಮಾಡಿ ಇಂಥ ಸ್ಥಳಗಳ ಕಷ್ಟಸುಖಗಳನ್ನು ಇನ್ನಷ್ಟು ಹೆಚ್ಚು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಅತಿ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಪೋಲೀಸು ಇಲಾಖೆಗೂ ಮತ್ತು ಜನತೆಗೂ ಒಂದು ಸಂಪರ್ಕ ಇಲ್ಲ. ಕಾನೂನನ್ನು ಪರಿಪಾಲನೆ ಮಾಡುವಾಗ ಜನತೆಗೂ ಮತ್ತು ಪೋಲೀಸಿನವರಿಗೂ ಒಂದು ನಿಕಟವಾದ ಸಂಪರ್ಕ ಮತ್ತು ಕೋ ಆರ್ಡಿನೇಷನ್ ಬಂದರೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಇಂಥಾ ವಿಷಯಗಳನ್ನು ತಾಲ್ಲೂಕು ಮಟ್ಟದಲ್ಲಿರತಕ್ಕ ಕಮಿಟಿಗಳಲ್ಲಿ ಚರ್ಚೆ ಮಾಡಬೇಕು. ಆದ್ದರಿಂದ ಫುಡ್ ಕಮಿಟಿ ಫ್ಯಾಮಿನ್ ಕಮಿಟಿಗಳು ಇದ್ದ ಹಾಗೆ ಒಂದು ಪಬ್ಲಿಕ್ ರಿಲೇಷನ್ ಕಮಿಟಿ ಎಂದು ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕುಮಟ್ಟದಲ್ಲಿ ಪೋಲೀಸ್ ಎಸ್. ಪಿ ಮತ್ತು ಆಯಾಕ್ಷೇತ್ರದ ಎಂ. ಎಲ್. ಎ. ಗಳನ್ನ ಸೇರಿಸಿ ಒಂದೊಂದು ಕಮಿಟಿಗಳನ್ನು ಮಾಡಿ ಆ ಕಮಿಟಿಗಳಲ್ಲಿ ಇಂಥಾ ವಿಷಯಗಳನ್ನ ಚರ್ಚೆ ಮಾಡ ಬೇಕು. ಆ ರೀತಿ ಚರ್ಚೆ ಮಾಡುವುದಾದರೆ ಅಧಿಕಾರಿಗಳಿಗೆ ಜನತೆಯ ದೂರುಗಳು ಮುಟ್ಟುತ್ತವೆ. ಇದರಿಂದ ಒಂದು ಭಯ ಅಧಿಕಾರಿಗಳಲ್ಲಿಯೂ ಮತ್ತು ಜನತೆಯಲ್ಲಿಯೂ ಬರುತ್ತದೆ. ಆಗ ಅಷ್ಟೊಂದು ಅಕ್ರಮಗಳೂ ನಡೆಯುವುದಕ್ಕೆ ಅವಕಾಶವಾಗುವುದಿಲ್ಲ. ಈ ಒಂದು ದೃಷ್ಟಿಯಿಂದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಮಿಟಿಗಳನ್ನ ಮಾಡಿದರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಇನ್ನು ಜೈಲಿನಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ನಾವು ಹೇಳುತ್ತೇನೆ. ಸಾಮಾನ್ಯವಾಗಿ ಮನುಷ್ಯ ಕೋಪೋದ್ರೇಕಗಳು ಬಂದಾಗ ಅಪರಾಧವನ್ನು ಮಾಡುವುದುಂಟು. ಸ್ಥಳದ ವಿದ್ಯಮಾನ ಗಳ ಸಂಬಂಧದಲ್ಲಿ ವ್ಯಕ್ತಿಯ ಅನೇಕ ವೈಯ್ಯಕ್ತಿಕವಾದ ದೋಷಗಳು ಬರತಕ್ಕ ಕಾಲದಲ್ಲಿ ಅಪರಾಧ ಗಳನ್ನು ಮಾಡಿದರೂ ಕೂಡ, ಅನೇಕರು ಸುಧಾರಿಸಿ ಕೊಂಡು ಒಳ್ಳೆಯ ಸಮಾಜದ ವ್ಯಕ್ತಿಗಳಾಗುವು ದಕ್ಕೆ ಅವಕಾಶವಿದೆ. ಆದ್ದರಿಂದ ಜೈಲುಗಳಲ್ಲಿ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸಬೇಕಾದ್ದು ಬಹಳ ಮುಖ್ಯವಾದದ್ದು. ಈಗ ಮುಖ್ಯವಾಗಿ ಒಬ್ಬ ಮನುಷ್ಯ ಒಂದು ಸಾರೆ ತಪ್ಪು ಮಾಡಿದವನು

ಪ್ರತಿ ಸಾರಿಯೂ ತಪ್ಪು ಮಾಡುತ್ತಾನೆ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಜೈಲಿನಲ್ಲಿ ಮಾನ್ಯ ಸದಸ್ಯರು ಹೇಳಿದಂತಹ 2-3 ಸುಧಾರಣೆಗಳನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚಿಸುತ್ತೇನೆ.

ಇನ್ನು ನಿರುದ್ಯೋಗ ಸಮಸ್ಯೆಯ ವಿಚಾರದಲ್ಲಿ ಹೇಳುವುದಾದರೆ ಕೇಂದ್ರ ಸರ್ಕಾರದವರ ಆಡಳಿತ ದಲ್ಲಿ ನಮ್ಮ ರಾಜ್ಯ ನಡೆಯುತಕ್ಕ ಕೈಗಾರಿಕೆಗಳಲ್ಲಿ ಮೈಸೂರು ಸಂಸ್ಥಾನದವರು ಕೊಟ್ಟಿರತಕ್ಕ ವಸತಿ, ನೀರು ವಿದ್ಯುಚ್ಛಕ್ತಿ ಇತ್ಯಾದಿ ಎಲ್ಲಾ ಸೌಲಭ್ಯಗಳನ್ನೂ ಆ ಕೈಗಾರಿಕೆಗಳವರು ಉಪಯೋಗಿಸಿ ಕೊಂಡು ನಮ್ಮ ಮೈಸೂರು ಸಂಸ್ಥಾನದವರಿಗೆ ಬಹಳ ಕಡಿಮೆ ಉದ್ಯೋಗಗಳನ್ನು ಕೊಟ್ಟಿದ್ದಾರೆ. ಅದು ಸರಿಯಲ್ಲ. ನ್ಯಾಯವಾಗಿ ನಮ್ಮ ಸಂಸ್ಥಾನಕ್ಕೆ ಸಿಕ್ಕಬೇಕಾದ 25-30 ಪರ್ಸೆಂಟ್ ಉದ್ಯೋಗ ಸಿಕ್ಕುವಹಾಗೆ ಏರ್ಪಾಡು ಮಾಡಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡುವುದಕ್ಕೆ ಅವಕಾಶ ವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ, ಈಗ ಈ ಸಭೆಯ ಮುಂದೆ ಮಂಡಿಸಿರ ತಕ್ಕ ಬೇಡಿಕೆಗಳು ಬಹಳ ಮುಖ್ಯವಾದುವುಗಳು. ಪೋಲೀಸು, ಕಾರ್ಮಿಕ ಉದ್ಯೋಗ ಮತ್ತು ಬಂದೀಖಾನೆಗಳು ಈ ಮೂರರಕ್ಕೂ ನನಗೆ ನಿಕಟವಾದ ಸಂಬಂಧ ಉಂಟು. ಒಂದು ಕಾರ್ಮಿಕರ ಮಧ್ಯೆ ಕೆಲಸ ಮಾಡುತ್ತೇನೆ. ದಿನ ಬೆಳಗಾದರೆ ಕಾರ್ಮಿಕರ ಕೆಲಸದ ವ್ಯವಸ್ಥೆ ಮತ್ತು ಸಂಬಂಧ ಇರುವುದರಿಂದ ಪೋಲೀಸಿನವರ ಜೊತೆಯೂ ಸಂಬಂಧ ಉಂಟು. ಆಗಿಂದಾಗ್ಗೆ ಲಾಠಿ ಚಾರ್ಜ್ ಇತ್ಯಾದಿ ಜರುಗುತ್ತಿರುತ್ತದೆ, ಇವುಗಳ ಸಂಪರ್ಕ ಇರುವುದರಿಂದ ಆಗಿಂದಾಗ್ಗೆ ಜೈಲು ನೋಡ ಬೇಕು. ಈ ಮೂರು ಮುಖ್ಯ ಬೇಡಿಕೆಗಳ ವ್ಯವಸ್ಥೆಯ ಬಗ್ಗೆ ಮಾತನಾಡುವುದಕ್ಕೆ ನನಗೆ ಕೊಟ್ಟಿರುವ ಕಾಲ ಕೇವಲ 10 ನಿಮಿಷಗಳು ಮಾತ್ರ. ಆದ್ದರಿಂದ ಈಗ ನಾನು ಮೊದಲು ಕಾರ್ಮಿಕರ ಬಗ್ಗೆ ಒಂದೆರಡು ವಿಷಯಗಳನ್ನು ಮಾತನಾಡಿ ಈ ಬೇಡಿಕೆಯನ್ನೇನು ಇಟ್ಟಿದ್ದಾರೆಯೋ ಅದನ್ನು ನಾನು ವಿರೋಧಿಸುತ್ತೇನೆ. ಕಾರ್ಮಿಕರ ಮತ್ತು ಉದ್ಯೋಗಕ್ಕೆ ಹಣವನ್ನು ಕೇಳಬೇಕಾದರೆ ಸರ್ಕಾರಕ್ಕೆ ಒಂದು ಕೆಚ್ಚೆದೆ ಇರಬೇಕು. ಮತ್ತು ಕಾರ್ಮಿಕರ ಬಗ್ಗೆ ಒಂದು ಸರಿಯಾದಂತಹ ನೀತಿ ಧೋರಣೆ ಯನ್ನು ತಾಳಬೇಕು. ಕಾರ್ಮಿಕರ ಮತ್ತು ಮಾಲೀಕರ ವಿವಾದಗಳನ್ನು ಸರಿಯಾಗಿ ಇತ್ಯರ್ಥ ಮಾಡುವುದಕ್ಕೆ ಇವರ ಧೋರಣೆ, ಇವರ ನೀತಿ, ಕಣ್ಣೋಟ ಸರಿಯಾಗಿದೆ? ಈ ಕಾರ್ಮಿಕ ಇಲಾಖೆ ಯಶಸ್ವಿಯಾಗಿ ಕೆಲಸ ಮಾಡುತ್ತದೆ ಎಂದು ಹೇಳಿ ಪುರಾವೆ ಮಾಡಿದರೆ, ರುಜುವಾತು ಮಾಡಿದರೆ ಈ ಬೇಡಿಕೆಗಳಿಗೆ ಹಣವನ್ನು ಕೊಡಬಹುದು. ಅವುಗಳನ್ನು ಪುರಾವೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂದರೆ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಈ ಕಾರ್ಮಿಕರಿಗೆ ಸಂಬಂಧಪಟ್ಟಹಾಗೆ ಇವರ ಮಧ್ಯ ದಲ್ಲಿ ಅನೇಕ ವರ್ಷಗಳಿಂದ ನಾನು ಕೆಲಸ ಮಾಡುತ್ತಿದ್ದೇನೆ. ನನ್ನ ಅನುಭವದಲ್ಲಿ ಈ ಕಾರ್ಮಿಕ ಇಲಾಖೆಯಲ್ಲಿ ಶ್ರೀಮಾನ್ ದೇವರಾಜ ಅರಸ್ ಅವರು ಮಂತ್ರಿಗಳಾಗಿದ್ದರು. ಹಿಂದೆ ಇನ್ನೂ ಬೇರೆ ಯಾರು ಯಾರೋ ಮಂತ್ರಿಗಳಾಗಿದ್ದರು. ಈಗ ಶ್ರೀಮಾನ್ ರಾಮರಾಯರು ಈ ಇಲಾಖೆಗೆ ಮಂತ್ರಿ ಗಳಾಗಿ ಬಂದಿದ್ದಾರೆ. ಕಾಂಗ್ರೆಸ್ ಮಂತ್ರಿಗಳು ಅಧಿಕಾರಕ್ಕೆ ಬಂದ ಕಾಲದಿಂದಲೂ, ಕಾರ್ಮಿಕ ಸಚಿವರು ಕಾರ್ಮಿಕರೆಂದರೆ ತಲೆನೋವೆಂದು ಭಾವಿಸಿದ್ದಾರೆ. ಕಾರ್ಮಿಕರು ಏನಾದರೂ ವಿವಾದ ಗಳನ್ನು ಕೇಳಿಕೆಗಳನ್ನು ಎತ್ತಿದರೆ ಹೇಗಾದರೂ ಮಾಡಿ ಅವುಗಳನ್ನು ಇತ್ಯರ್ಥ ಮಾಡಬೇಕೆಂಬ ಅಭಿಪ್ರಾಯವನ್ನು ಮಂತ್ರಿಗಳು ಇಟ್ಟುಕೊಂಡಿಲ್ಲ. ಈ ಕಾರ್ಮಿಕರ ಬಗ್ಗೆ ಶ್ರೀಮಾನ್ ರಾಮರಾಯರ ಜೊತೆಯಲ್ಲಿ ಮಾತನಾಡಿ ನನಗೆ ಅನುಭವ ಇಲ್ಲ. ಹಿಂದಿನ ಕಾರ್ಮಿಕ ಮಂತ್ರಿಗಳ ಸಂಬಂಧದಲ್ಲಿ ನನಗೆ ಅನುಭವ ಇದೆ. ಇವರ ಕಣ್ಣೋಟ ಏನಿದ್ದರೂ ಮಾಲೀಕರ ಪರ, ಕಾರ್ಮಿಕರ ವಿರೋಧಿ ಎಂಬುದು ಅವರ ಮಾತು ಮತ್ತು ಅವರ ವರ್ತನೆಯಿಂದಲೇ ಸ್ಪಷ್ಟವಾಗುತ್ತದೆ. ಎಷ್ಟೋ ಜನ ಮಾಲೀಕರು ಕಾನೂನು ಉಲ್ಲಂಘನೆ ಮಾಡಿದ್ದರೂ ಅವರನ್ನು ಶಿಕ್ಷಿಸುವುದಿಲ್ಲ. ಯಾರೋ ಒಬ್ಬರು ಮಾಲೀಕರನ್ನು ಕಾರ್ಮಿ ಕರು ತಮ್ಮ ಡಿಮ್ಯಾಂಡುಗಳನ್ನು ಕೇಳಿದರೆ, ಏನೋ ಒಂದು ಪ್ರಕ್ಷೋಭೆ ಮಾಡಿದರೆ ಆ ಮಾಲೀಕರು ರಿವಾಲ್ವರ್ ತೆಗೆದುಕೊಂಡು ಬಂದು ಷೂಟ್ ಮಾಡುತ್ತೇನೆ ಎಂದು ಬೆದರಿಸಿದವರನ್ನು ಸುಮ್ಮನೆ ಬಿಟ್ಟಂತಹ ನಿದರ್ಶನ ಇದೆ. ಇದು ಬೆಂಗಳೂರು ನಗರದಲ್ಲಿ ನಡೆದಿರುವಂಥಾದ್ದು. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಇಂಥವರ ಬಗ್ಗೆ ನೀವು ಏನು ಕ್ರಮವನ್ನು ತೆಗೆದುಕೊಂಡಿ ದ್ದೀರಿ? ಇವರ ಕಣ್ಣೋಟ ಬದಲಾಯಿಸದ ಹೊರತು, ಮಾಲೀಕರ ಪರವಾಗಿರತಕ್ಕ ದೃಷ್ಟಿ ಕೋಣ ವನ್ನು ಬದಲಾಯಿಸದ ಹೊರತು ಖಂಡಿತವಾಗಿಯೂ ಕಾರ್ಮಿಕರ ಏಳಿಗೆ ಆಗುವುದಕ್ಕೆ ಸಾಧ್ಯವಿಲ್ಲ. ಅವರು ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರ್ಮಿಕರಿಗೂ ಮತ್ತು ಮಾಲೀಕ ರಿಗೂ ಘರ್ಷಣೆ ನಡೆಯುತ್ತದೆ. ಈ ವಿಷಯದಲ್ಲಿ ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗ number of man-days lost ಜಾಸ್ತಿಯಾಗುತ್ತಿದೆ. Statistical outline of Mysore ಎನ್ನುವ ಪುಸ್ತಕದಲ್ಲಿ Number of Man-days lost ಅಂಕ ಅಂಶಗಳನ್ನು ಕೊಟ್ಟಿದ್ದಾರೆ.

(ಶ್ರೀ ಎಂ. ಎಸ್. ಕೃಷ್ಣನ್)

ಅದು ಈ ರೀತಿ ಇದೆ. 1962ನೇ ಇಸವಿಯಲ್ಲಿ 61,300 ಇದ್ದದ್ದು 1967ನೇ ಇಸವಿಯಲ್ಲಿ 3,74,015ಕ್ಕೆ ಬಂದಿದೆ. ಕಾರ್ಮಿಕರಲ್ಲಿ ಅಶಾಂತಿ ಜಾಸ್ತಿಯಾಗುತ್ತಿದೆ. ಕಾರ್ಮಿಕರಿಗೂ ಮಾಲೀಕರಿಗೂ ವಿವಾದಗಳು ಹೆಚ್ಚಾಗುತ್ತಿವೆ. ಇವುಗಳನ್ನು ಬಗೆಹರಿಸುವುದಕ್ಕೆ ಸರ್ಕಾರದವರು ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಸಂದರ್ಭದಲ್ಲಿ ಒಬ್ಬರು ಮಂತ್ರಿಗಳು ರೋಟರಿ ಕ್ಲಬ್ಬಿಗೆ ಹೋಗಿ ಕಾರ್ಮಿಕರ ಉಪವಾಸ ವ್ರತ ಹೋರಾಟ "Stay in Strike" ವಿರುದ್ಧವಾಗಿ ಮಾಲೀಕರ ಪರವಾಗಿ ಮಾತನಾಡಿದ್ದಾರೆ. ಮತ್ತೊಂದು ಸಂದರ್ಭದಲ್ಲಿ ಇನ್ನೊಬ್ಬ ಮಂತ್ರಿಗಳು ಮ್ಯಾನೇಜ್‌ಮೆಂಟ್‌ನವರೇ ಇದ್ದ ಸಭೆಯಲ್ಲಿ "ಘೇರಾವ್" ವಿರೋಧವಾಗಿ ಮಾತನಾಡಿದ್ದಾರೆ. ಸಭೆಯಲ್ಲಿ ಈ ರೀತಿ ಮಾತನಾಡಿ ಇವರು ಕಾರ್ಮಿಕರ ವಿರೋಧಿಗಳು ಎಂದು ತೋರಿಸಿದ್ದಾರೆ. ಮಾಲೀಕರು ಕಾನೂನುಗಳನ್ನು ಉಲ್ಲಂಘನೆ ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಇವರ ದೃಷ್ಟಿ ಕೋಣ ಏನಿದ್ದರೂ ಮಾಲೀಕರ ಪರವಾಗಿರುತ್ತದೆ. ಇವರ ನೀತಿ ಮತ್ತು ಧೋರಣೆಯನ್ನೂ ಬದಲಾವಣೆ ಮಾಡಬೇಕು. ಕಾರ್ಮಿಕರಿಗೂ ಮತ್ತು ಮಾಲೀಕರಿಗೂ ಎಷ್ಟೋ ವಿವಾದಗಳು ಬರುತ್ತವೆ. ಆ ರೀತಿ ವಿವಾದಗಳು ಬಂದ ಸಂದರ್ಭಗಳಲ್ಲಿ ಅವುಗಳನ್ನು ಬಗೆಹರಿಸಬೇಕು ಎಂದು ನಾವು ಮಂತ್ರಿಗಳನ್ನು ಹೋಗಿ ನೋಡಿದರೆ ಅವರು ಮಾಲೀಕರನ್ನು ಕರೆಸಿ ಮಾತನಾಡೋಣ ಎಂದು ಹೇಳುತ್ತಾರೆ. ಆಗ ನಾವು ಅವರ ಮಾಲೀಕರನ್ನು ಕಾರ್ಮಿಕರ ಪ್ರತಿನಿಧಿಗಳನ್ನು ಒಟ್ಟಿಗೇ ಕರೆದುಕೊಂಡು ಮಾತನಾಡಲು ಏರ್ಪಾಡು ಮಾಡಿ ಎಂದರೆ ಅದಕ್ಕೆ ಅವರೊಡನೆ ಮಂತ್ರಿಗಳು ತಯಾರಿರುವುದಿಲ್ಲ. ಅದಕ್ಕೆ ಬದಲಾಗಿ ಅಸಿಸ್ಟೆಂಟ್ ಲೇಬರ್ ಕಮೀಷನರಿದ್ದಾರೆ ಲೇಬರ್ ಇಲಾಖೆಯವರಿದ್ದಾರೆ. ಅವರ ಹತ್ತಿರ ಹೋಗಿ ನೋಡಿ ಆಮೇಲೆ ನೋಡೋಣ ಎಂದು ಹೇಳುತ್ತಾರೆ. ಮಂತ್ರಿಗಳಿಗೆ ಬೇರೆ ಬೇರೆ ಕೆಲಸಗಳಿವೆ. ಅದನ್ನು ಒಪ್ಪಿಕೊಳ್ಳೋಣ. ಆದರೆ ಅವರು ಮಾಡತಕ್ಕ ಕೆಲಸಗಳಲ್ಲಿ ಈ ಕೆಲಸವೂ ಸೇರಿವೆ. ಇದೂ ಸಹ ಮುಖ್ಯವಾದ ಕೆಲಸ. ಈ ಕೆಲಸವನ್ನೂ ಅವರು ಕೂಡಲೇ ಮಾಡಬೇಕಾಗುತ್ತದೆ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ರಾಮರಾಯರ ಖಾತೆಗೆ ಸಂಬಂಧಪಟ್ಟ ಹಾಗೆ, ಕಾರ್ಮಿಕರಿಗೆ ಸಂಬಂಧಪಟ್ಟ ಎರಡು ಮುಖ್ಯವಾದ ಜವಾಬ್ದಾರಿಯುತವಾದ ಕೆಲಸಗಳು ಈ ಬೇಡಿಕೆಯಲ್ಲಿ ಸೇರಿವೆ. ಅದಕ್ಕಾಗಿ ನಾನು ಅವರಲ್ಲಿ ಹೇಳುವುದು ಏನೆಂದರೆ ಈ ತರಹ ಒಂದು ತಪ್ಪು ಮನೋಭಾವವನ್ನು ಅವರು ಇಟ್ಟುಕೊಂಡರೆ ಕಾರ್ಮಿಕರ ಅನೇಕ ಪ್ರಶ್ನೆಗಳನ್ನು ಬಗೆಹರಿಸುವುದಕ್ಕೆ ಬದಲಾಗಿ ಹೆಚ್ಚು ಘರ್ಷಣೆಗಳಾಗುವುದಕ್ಕೆ ಅವಕಾಶವಾಗುತ್ತದೆ. ನಾನು ಹೇಳಿದ ಸೂಚನೆಯನ್ನು ಜಾರಿಗೆ ತಂದಲ್ಲಿ ಕಾರ್ಮಿಕರು ಹೇಳಿದಂತಹ ಮಾತುಗಳನ್ನು ಒಪ್ಪಿಕೊಳ್ಳುವ ಸನ್ನಿವೇಶಗಳೂ ಇರುತ್ತವೆ. ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವ ಸನ್ನಿವೇಶಗಳೂ ಇರುತ್ತವೆ. ಆದರೆ ಮುಷ್ಕರಗಳನ್ನು ಬಗೆಹರಿಸಬೇಕು ಎನ್ನುವ ಆಸಕ್ತಿ, ವಾತಾವರಣ ಇದ್ದರೆ ಅವುಗಳನ್ನು ಬಗೆ ಹರಿಸುವುದಕ್ಕೆ ಸಾಧ್ಯ. ಆದರೆ ಅಂಥಾ ಮನೋಭಾವವನ್ನು ಆಳುವ ಪಕ್ಷದವರು ಯಾರೂ ಇವೊತ್ತಿನ ದಿವಸ ತಾಳುತ್ತಿಲ್ಲ. ಇದಕ್ಕೆ ನಾವು ಇವೊತ್ತಿನ ದಿವಸ ಅನೇಕ ನಿದರ್ಶನಗಳನ್ನು ನೋಡಿದ್ದೇವೆ. ಮೈಸೂರು ಮಿಷನರಿಯಲ್ಲಿ 63 ದಿವಸ ಮುಷ್ಕರ ನಡೆಯಿತು. ಐ. ಎನ್. ಟಿ. ಸಿ. ಸಂಘದವರು ಮುಷ್ಕರವನ್ನು ನಡೆಸಿದ್ದಾರೆ. ಕಲ್ಲಿ ಉಭಯ ಪಕ್ಷಗಳನ್ನೂ ಕರೆಸಿ ಮಾತನಾಡಬೇಕೆಂದು, ಕಾರ್ಮಿಕರ ಪ್ರತಿನಿಧಿಗಳು ಕೇಳಿಕೊಂಡರೂ ಸಹ, ಆ ರೀತಿ ಅವರಿಬ್ಬರನ್ನೂ ಕರೆಸಲಿಲ್ಲ. ಈ ಮನೋಭಾವ ಸರಿಯಾದದ್ದಲ್ಲ.

3-00 P.M.

ಇದೇ ರೀತಿಯ ಪರಿಸ್ಥಿತಿ ಇನ್ನೂ ಅನೇಕ ಕಡೆ ಇದೆ. ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ, ಕೈಗಾರಿಕೆ ವಿವಾದಗಳನ್ನು ಬೇಗನೆ ಇತ್ಯರ್ಥ ಮಾಡಬೇಕು ಎಂದು ಇರತಕ್ಕ ತತ್ವವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸರಕಾರ ಇದನ್ನು ಒಪ್ಪಿಕೊಂಡಿದೆ. ಆದರೆ ಈ ತತ್ವವನ್ನು ಅವರು ಒಪ್ಪಿಕೊಂಡರೂ ಕೂಡ ಅದನ್ನು ಸರಿಯಾಗಿ ಕಾರ್ಯಗತ ಮಾಡುತ್ತಿಲ್ಲ. ಕೈಗಾರಿಕೆ ವಿವಾದಗಳು ಬಂದರೆ ಮೊದಲು ಅವು ಅಸಿಸ್ಟೆಂಟ್ ಲೇಬರ್ ಕಮೀಷನರ್ ಹತ್ತಿರಹೋಗಿ ಆರೆಂಟು ತಿಂಗಳು ನಂತರ ಲೇಬರ್ ಕಮಿಷನರ್ ಅವರ ಕಡೆಗೆ ಬರುತ್ತವೆ. ಈ ರೀತಿ ವಿವಾದಗಳು ಬರುವುದಕ್ಕೆ ಅನೇಕಸಲ ಒಂದು ವರ್ಷಕೂಡ ಆಗುತ್ತದೆ. ಈ ರೀತಿ ಸರ್ವೇ ಸಾಧಾರಣವಾಗಿ ಇದು ನಡೆಯುತ್ತಿದೆ. ಇದರಿಂದ ಕೈಗಾರಿಕೆ ವಿವಾದಗಳನ್ನು ಇತ್ಯರ್ಥ ಮಾಡುವುದು ಬಹಳ ನಿಧಾನವಾಗುತ್ತಿದೆ. ಈ ರೀತಿ ನಿಧಾನವಾಗುವುದನ್ನು ಕೂಡಲೇ ತಪ್ಪಿಸಬೇಕಾದುದು ಮುಖ್ಯ ಅಂಶವಾಗಿದೆ. ಈ ವಿವಾದಗಳು ಕೋರ್ಟಿಗೆ ಹೋದಮೇಲೆ

ತೀರ್ಮಾನವಾಗುವುದಕ್ಕೆ ಎರಡು ವರ್ಷ ಮೂರು ವರ್ಷ ಸಹ ಆಗುತ್ತಾ ಇದೆ. ಏನೇ ಆದರೂ ಕೋರ್ಟಿನಲ್ಲಿ ಒಂದು ವಿವಾದ ತೀರ್ಮಾನವಾಗುವುದಕ್ಕೆ ಎರಡು ವರ್ಷ ಬೇಕಾಗುತ್ತದೆ. ಇಷ್ಟು ಕಾಲ ವಿವಾದ ನಿಧಾನವಾಗುವುದರಿಂದ ಕೆಲವು ಸಲ ವಿವಾದಕ್ಕೆ ಒಳಪಟ್ಟ ಮನುಷ್ಯನೇ ಇರುವುದಿಲ್ಲ. ಇಂಥವನು ಡಿಸ್‌ಮಿಸ್ ಆದಮೇಲೆ ಮೂರು ವರ್ಷಗಳನಂತರ ಆ ಮನುಷ್ಯ ಹೋಗಿಬಿಟ್ಟಿರುತ್ತಾನೆ. ಇಷ್ಟೊಂದು ಕ್ಲಿಷ್ಟವಾದ ಪ್ರಶ್ನೆ ಈ ಅಂಶದಲ್ಲಿ ಅಡಕವಾಗಿದೆ. ಒಂದು ಉದಾಹರಣೆ ಹೇಳುವುದಾದರೆ ಬಾಗಲಕೋಟ್ ಸೀಮೆಂಟ್ ಕಂಪನಿ ವಿವಾದ ಹನ್ನೊಂದು ವರ್ಷ ತೆಗೆದುಕೊಂಡಿದೆ. ಇಷ್ಟು ಕಾಲಾವಕಾಶ ಕೋರ್ಟಿಗೆ ಹೋಗುವುದಕ್ಕೆ ತೆಗೆದುಕೊಂಡಿದೆ. 1956ರಲ್ಲಿ ಪ್ರಾರಂಭವಾದ ಈ ಬಾಗಲಕೋಟೆ ಸೀಮೆಂಟ್ ಕಂಪನಿಯ ವಿವಾದ 1966-1967 ರ ವರೆಗೆ ನಡೆದು ಆ ಮೇಲೆ ಕೋರ್ಟಿಗೆ ಹೋಗಿದೆ. ಇವಕ್ಕೆ ಕೆಲವು ಕಾರಣಗಳು ಸಹ ಇವೆ. 1956 ರಲ್ಲಿ ಸ್ಟೇಟ್ಸ್ ರೀ-ಆರ್ಗನೈಜೇಷನ್ ಆಯಿತು. ಮೊದಲು ಬೊಂಬಾಯಿ ಸರಕಾರದಲ್ಲಿದ್ದ ಈ ವಿವಾದ ಮೈಸೂರು ರಾಜ್ಯಕ್ಕೆ ಬಂತು. ಇದು ಮೈಸೂರು ರಾಜ್ಯಕ್ಕೆ ಬಂದಮೇಲೆ ಕೋರ್ಟಿಗೆ ಹೋಗುವುದಕ್ಕೆ ಐದು ವರ್ಷ ಬೇಕಾಯಿತು. ಈ ವಿವಾದವನ್ನು ಹಿಂದಕ್ಕೆ ವಾಪಸ್ಸು ತರಿಸಿಕೊಂಡು ಪರಿಶೀಲನೆ ಮಾಡಿ ಕೋರ್ಟಿಗೆ ಹೋಗಬೇಕಾಯಿತು. ಇದರಿಂದ ನಿಧಾನವಾಗಿದೆ. ಹೀಗೆ ಎಲ್ಲ ವಿವಾದಗಳಲ್ಲಿ ಏತಕ್ಕೆ ಆಗಬೇಕು? ಲೇಬರ್ ಇಲಾಖೆಯಿಂದ ರೆಕಮೆಂಡೇಷನ್ಸ್ ಕಳಿಸಿದಕೂಡಲೇ ಸರಕಾರದವರು ನೇರವಾಗಿ ವಿವಾದಗಳನ್ನು ಕೋರ್ಟಿಗೆ ಹಾಕಬೇಕು. ಇಂಥ ವಿವಾದಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಮಂತ್ರಿಗಳು ನೋಡಬೇಕು ಎಂದು ಹಾಗೆ ಇಟ್ಟಿರುವುದು ಸರಿಯಲ್ಲ. ಕೈಗಾರಿಕೆ ವಿವಾದಗಳನ್ನು ಮೇಲೆ ಸೂಚಿಸಿದಂತೆ ಕೋರ್ಟಿಗೆ ಹಾಕಲು ಸರಕಾರ ತೀರ್ಮಾನ ಮಾಡಿದೆ ಎಂದು ತಿಳಿದುಬಂದಿದೆ. ಈ ರೀತಿ ತೀರ್ಮಾನವಾಡಿದ್ದರೆ ಸಂತೋಷ. ಬರೀ ತೀರ್ಮಾನ ಮಾಡಿದರೆ ಯಾವ ಪ್ರಯೋಜನವಿಲ್ಲ. ಇಂಥ ತೀರ್ಮಾನ ನಿಜವಾಗಿ ಕಾರ್ಯಗತಮಾಡಬೇಕು ಎಂದು ಒತ್ತಾಯದಿಂದ ಹೇಳುತ್ತೇನೆ. ಮಂತ್ರಿಮಂಡಲದಲ್ಲಿ ಈ ಇಲಾಖೆಗೆ ಹೊಸದಾಗಿ ಮಂತ್ರಿಗಳು ಬರಬಹುದು. ಆದರೆ ವಿವಾದಗಳ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯಾಗುವುದಿಲ್ಲ. ಇನ್ನು ಕನ್‌ಸೀಲಿಯೇಷನ್ ನಡೆದು ಮುಗಿದನಂತರ ಕೈಗಾರಿಕೆ ವಿವಾದ ಕೋರ್ಟುಗಳಿಗೆ ಒಪ್ಪಿಸುವ ಪರಿಸ್ಥಿತಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ಇಂಥ ಕೇಸುಗಳನ್ನು ರೆಫರ್ ಮಾಡಿ ಇತ್ಯರ್ಥ ಮಾಡುವುದಕ್ಕೆ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಎರಡು ಇವೆ. ಇದಲ್ಲದೆ ಲೇಬರ್ ಕೋರ್ಟುಗಳು ಎರಡು ಇವೆ. ಈ ರೀತಿ ಎರಡು ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಇರುವುದನ್ನು ಮೂರು ಟ್ರಿಬ್ಯೂನಲ್‌ಗಳನ್ನಾಗಿ ಮಾಡಬೇಕು ಎಂದು ಹೇಳುತ್ತೇನೆ. ಸದ್ಯಕ್ಕೆ ಇರತಕ್ಕ ಎರಡು ಲೇಬರ್ ಕೋರ್ಟುಗಳಿಗೆ ಮಾಡತಕ್ಕಂಥ ಕೆಲಸ ಬೇಕಾದಷ್ಟು ಇದೆ. ಟ್ರಿಬ್ಯೂನಲ್ ಕೋರ್ಟಿಗೆ ಸಹ ಬೇಕಾದಷ್ಟು ಕೆಲಸವಿದೆ. ಈ ಕೆಲಸ ಬೇರೆ ಬೇರೆಯಾಗಿ ಮಾಡುತ್ತಿದ್ದಾರೆ. ಇಂಡಸ್ಟ್ರಿಯಲ್ ಎಂಪ್ಲಾಯಮೆಂಟ್ ಸ್ಟಾಂಡಿಗ್ ಆಕ್ಟ್ ಆರ್ಡರ್ಸ್ ವಿಷಯಗಳನ್ನು ಇ.ಎಸ್.ಐ.ಗೆ ಸಂಬಂಧಪಟ್ಟ ಕೇಸುಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಇನ್ನೊಂದು ಟ್ರಿಬ್ಯೂನಲ್ಲನ್ನಾದರೂ ರಚಿಸಿದರೆ ಕೈಗಾರಿಕ ವಿವಾದಗಳನ್ನೂ ನೋಡಬಹುದು. ಹಾಗು ಅದರ ಜೊತೆಗೆ ಪ್ರಾವಿಡೆಂಟ್ ಫಂಡ್ ಆಕ್ಟ್ ಪ್ರಕಾರ ಇರುವ ವಿಷಯಗಳನ್ನು ಇತರ ಇ.ಎಸ್.ಐ. ಪೇಮೆಂಟ್ ಆಫ್ ವೇಜಸ್ ಆಕ್ಟ್ ಮತ್ತಿತರ ಶಾಸನಗಳಿಗೆ ಸಂಬಧಪಟ್ಟ ವಿವಾದಗಳನ್ನು ಬೇಗ ಬೇಗ ಸುಗಮವಾಗಿ ಇತ್ಯರ್ಥ ಮಾಡಲು ಅನುಕೂಲವಾಗುತ್ತದೆ. ಈಗ ಇರತಕಂಥ ವ್ಯವಸ್ಥೆ ಅನುಕೂಲವಾಗಿಲ್ಲ. ಅದು ನ್ಯಾಯವಾಗಿಲ್ಲ. ಆದುದರಿಂದ ಇನ್ನೊಂದು ಟ್ರಿಬ್ಯೂನಲ್ ನೇಮಕ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕನ್‌ಸಿಲಿಯೇಷನ್ ಆಫೀಸರ ಬಗ್ಗೆ ಒಂದು ಮಾತು ಹೇಳಲು ಇಷ್ಟಪಡುತ್ತೇನೆ. ಬೆಂಗಳೂರು ನಗರ ಬಹು ದೊಡ್ಡನಗರ. ಬೆಂಗಳೂರು ನಗರದಲ್ಲಿ ಹೆಚ್ಚಾಗಿ ಕಾರ್ಮಿಕರು ಇರುವುದು. ಆದುದರಿಂದ ಈ ಕೆಲಸ ನಿರ್ವಹಿಸುವುದಕ್ಕೆ ಇನ್ನೊಬ್ಬ ಅಸಿಸ್ಟಂಟ್ ಲೇಬರ್ ಕಮೀಷನರ್ ಬೇಕು. ಇರತಕ್ಕಂಥ ಒಬ್ಬ ಅಸಿಸ್ಟೆಂಟ್ ಲೇಬರ್ ಕಮೀಷನರ್ ಅವರಿಗೆ ಕೈಗಾರಿಕೆ ವಿವಾದ ನೋಡಬೇಕಾಗುತ್ತದೆ. ಅಲ್ಲದೆ ಟ್ರೇಡ್ ಯೂನಿಯನ್ ರಿಜಿಸ್ಟ್ರೇಷನ್ ಮತ್ತು ಶಾಪ್ಸ್ ಮತ್ತು ಎಸ್ಟಾಬ್ಲಿಷ್‌ಮೆಂಟ್ಸ್ ಆಕ್ಟ್, ಸ್ಟಾಂಡಿಂಗ್ ಆರ್ಡರ್ಸ್ ಇವುಗಳನ್ನೂ ಸಹ ನೋಡಬೇಕಾಗುತ್ತದೆ. ಇದೆಲ್ಲವನ್ನೂ ಒಬ್ಬರೇ ಈಗ ನೋಡಿಕೊಳ್ಳಬೇಕಾಗಿದೆ. ಅವರಿಗೆ ಸಾಕಷ್ಟು ಸಿಬ್ಬಂದಿ ಇಲ್ಲ. ಆಫೀಸಿನಲ್ಲಿ ಸ್ಟೆನೋ ಟೈಪಿಸ್ಟ್ ಇಲ್ಲ. ಇದರಿಂದ ಏನಾಗಿದೆ ಎಂದರೆ, ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಕೆಲಸ ಬಹಳ ನಿಧಾನವಾಗುತ್ತಾ ಇದೆ. ಇಲ್ಲಿಗೆ ಕರೆದುಕೊಂಡು ಬಂದಿರತಕ್ಕಂಥ ಅಧಿಕಾರಿಗಳು ಸಹ ಕೆಲವರು ಬಹಳ ಕೆಳಮಟ್ಟದಲ್ಲಿರುವ ಅಧಿಕಾರಿಗಳಾಗಿದ್ದಾರೆ. ಅವರಿಗೆ ಕಾನೂನು ಸಹ ನಾವು ಹೇಳಿಕೊಡಬೇಕಾಗುತ್ತದೆ. ಯಾವುದೋ ಒಂದು ಡಿಪಾರ್ಟಮೆಂಟಿನಿಂದ ಇಂಥ ಅಧಿಕಾರಿಯನ್ನು ತಂದು ಲೇಬರ್ ಡಿಪಾರ್ಟಮೆಂಟನಲ್ಲಿ ಹಾಕುತ್ತಾರೆ. ಕೆಲವು ದಿನ ಅವರನ್ನು ಈ ಡಿಪಾರ್ಟ್‌ಮೆಂಟಿನಲ್ಲಿಟ್ಟು ಟ್ರೈನ್ ಮಾಡಿ ಪುನಃ ಅವರನ್ನು ವಾಪಸ್ಸು ಕಳಿಸಿ ಬಿಡುತ್ತಾರೆ. ಸಾಮಾನ್ಯವಾಗಿ ಆರು ತಿಂಗಳು ಒಬ್ಬರನ್ನು

(ಶ್ರೀ ಎಂ. ಎಸ್. ಕೃಷ್ಣನ್)

ಇಟ್ಟುಕೊಂಡು ಕಳಿಸಿಕೊಡುತ್ತಾರೆ. ಆದುದರಿಂದ ಈ ಅಧಿಕಾರಿಗಳಿಗೇ ಕಾರ್ಮಿಕರಿಗೆ ಸಂಬಂಧಪಟ್ಟ ವಿಷಯ ಸರಿಯಾಗಿ ಗೊತ್ತಾಗುವುದಿಲ್ಲ. ಇದರಿಂದ ಎಷ್ಟೋ ಅನ್ಯಾಯ ಕೆಲಸಗಾರರಿಗೆ ಆಗುತ್ತದೆ. ಅಲ್ಲಿ ಕೆಲಸಮಾಡತಕ್ಕಂಥವರ ಮನೋಭಾವನೆ ಕೂಡ ಬಹಳ ಕೆಳಮಟ್ಟದಲ್ಲದೆ. ಕಾರ್ಮಿಕರ ವಿವಾದಗಳ ಬಗ್ಗೆ ಕನ್‌ಸಿಲಿಯೇಷನ್ಸ್ ವಿಫಲವಾದಮೇಲೆ ಅದರಬಗ್ಗೆ ಒಂದು ರಿಪೋರ್ಟನ್ನು ರಹಸ್ಯವಾಗಿ ಕಳಿಸಿಕೊಡಬೇಕೆಂದು ಇದೆ. ಆದರೆ ಈ ರಹಸ್ಯ ರಿಪೋರ್ಟ್ ಕಳಿಸುವ ಕೆಲಸವನ್ನು ಲೇಬರ್ ಅಸಿಸ್ಟೆಂಟ್ ಕಮಿಷನರ್ ಆಫೀಸಿನಲ್ಲಿಯ ಅಧಿಕಾರಿಗಳು ಆ ವಿವಾದಕ್ಕೆ ಸಂಬಂಧಪಟ್ಟ ಮಾಲೀಕರ ಆಫೀಸಿನಲ್ಲಿ ಅಥವಾ ಅವರ ಏಜೆಂಟನ ಆಫೀಸಿನಲ್ಲಿ ಕುಳಿತು ಅಲ್ಲಿಯೇ ಟೈಪ್ ಮಾಡಿ ಕಳಿಸುತ್ತಾರೆ. ಒಂದು ಕಾಪಿ ಮಾಲೀಕರಿಗೆ ಸಹ ಕಳಿಸುತ್ತಾರೆ. ಇಂಥ ಅನ್ಯಾಯ ನಡೆಯುತ್ತಿದೆ. ಇಂಥ ಅನ್ಯಾಯವಾಗುವುದನ್ನು ತಪ್ಪಿಸುವುದಕ್ಕೆ ಸರಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಈ ಸಂದರ್ಭದಲ್ಲಿ ಒಂದು ವಿಚಾರ ಹೇಳಲು ಬಯಸುತ್ತೇನೆ. ಇಂಡಸ್ಟ್ರಿಯಲ್ ಟ್ರಿಬ್ಯೂನಲ್ಲಿಗೆ ಡಿಸ್ಟ್ರಿಕ್ಟ್ ಜಡ್ಜ್ ಅವರನ್ನು ನೇಮಕ ಮಾಡಬೇಕು. ಕೆಲಸ ಮಾಡತಕ್ಕಂಥವರಿಗೆ ಯಾವ ಒತ್ತಾಯ ಇರಕೂಡದು. ರಿಟೈರ್ ಆದವರನ್ನು ಕರೆದುಕೊಂಡು ಬಂದು ನೇಮಕ ಮಾಡಿದರೆ ಅಂತವರಿಗೆ ಬೇರೆ ಹವ್ಯಾಸಗಳು ಇರಬಹುದು. ಇವರು ಎಲ್ಲರೂ ಕೆಟ್ಟವರು ಎಂದು ನಾನು ಹೇಳುವುದಿಲ್ಲ. ಅನೇಕರು ಒಳ್ಳೆಯವರಿದ್ದಾರೆ. ಕೆಲವರು ಕೆಟ್ಟವರೂ ಇದ್ದಾರೆ. ಕೆಲವರು ದುಡ್ಡು ತೆಗೆದುಕೊಳ್ಳುವ ಹವ್ಯಾಸಕ್ಕೆ ಬೀಳಬಹುದು. ಕೆಲವರು ಮಂತ್ರಿಗಳ ಆದೇಶಕ್ಕೆ ಅನುಗುಣವಾಗಿ ಕೆಲಸ ನೋಡಿಕೊಳ್ಳಬೇಕಾಗುತ್ತದೆ. ಆದುದರಿಂದ ರಿಟೈರ್ ಆದವರನ್ನು ತೆಗೆದುಕೊಳ್ಳದೆ ಡಿಸ್ಟ್ರಿಕ್ಟ್ ಜಡ್ಜನ್ನು ಕೆಲಸ ಮಾಡತಕ್ಕಂಥವರನ್ನು ನೇಮಕ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆ ರೀತಿ ನೇಮಕ ಮಾಡಿದಲ್ಲಿ ಅಂಥವರಿಗೆ ಮುಂದಕ್ಕೆ ಉತ್ತೇಜನ ಕೊಡಲೂ ಅವಕಾಶ ಕೊಟ್ಟಂತಾಗುತ್ತದೆ. ಇನ್ನೊಂದು ಸೂಚನೆ ಮಾಡಬೇಕಾಗಿದೆ. ಹೈಕೋರ್ಟಿನಲ್ಲಿ ಅನೇಕ ಮಾಲೀಕರು ರಿಟ್ ಅರ್ಜಿ ಹಾಕಿದ್ದಾರೆ. ಕೇಸುಗಳು ಟ್ರಿಬ್ಯೂನಲ್ ಕೋರ್ಟಿಗೆ ಹೋಗಿ ಅಲ್ಲಿ ಕಾರ್ಮಿಕರ ಪರವಾಗಿ ವರ್ಷಾಂತರಗಳಾದ ನಂತರ ಇತ್ಯರ್ಥವಾದರೆ ನಂತರ ಈ ವಿಷಯಗಳಲ್ಲಿ ಹೈಕೋರ್ಟುಗಳಿಗೆ ರಿಟ್ ಅರ್ಜಿ ಹಾಕಿಕೊಂಡು ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದ್ದಾರೆ. ರಿಟ್ ಅರ್ಜಿಗಳ ಬಗ್ಗೆ ಸರ್ಕಾರವನ್ನು ಕೇಳಬೇಕು ಎಂಬ ಅಭಿಪ್ರಾಯ ಇದೆ. ಆದರೆ ಯಾವ ಮಾಲೀಕನೂ ಸರ್ಕಾರವನ್ನು ಕೇಳದೆ ರಿಟ್ ಅರ್ಜಿ ಹಾಕುತ್ತಿದ್ದಾರೆ. ಕೆಲವು ವೇಳೆ ಮಂತ್ರಿಗಳೇ ರಿಟ್ ಹಾಕಲು ಹೇಳಿಕೊಟ್ಟಿದ್ದಾರೆ ಎಂದು ತಿಳಿದಿದೆ. ಇದರಿಂದ ಏನಾಗುತ್ತದೆಂದರೆ ಕೆಲಸಗಾರರಿಗೆ ಬಹಳ ಅನ್ಯಾಯವಾಗುತ್ತಿದೆ. ಹೈಕೋರ್ಟಿನಲ್ಲಿ ಅನೇಕ ರಿಟ್ ಕೇಸುಗಳು ಕೊಳೆಯುತ್ತಿವೆ. ಇವುಗಳನ್ನು ತೀರ್ಮಾನ ಮಾಡುವುದು ವರ್ಷಾಂತರಗಳಿಂದ ಸಾಧ್ಯವಾಗಿಲ್ಲ. ಆದುದರಿಂದ ಹೈಕೋರ್ಟಿನಲ್ಲಿ ಒಂದು ಪ್ರತ್ಯೇಕ ಲೇಬರ್ ಬೆಂಚ್ ರಚನೆ ಮಾಡಬೇಕು. ಅಥವಾ ಲೇಬರ್ ಅಪ್ಪಲೇಟ್ ಟ್ರಿಬ್ಯೂನಲ್ ಎಂದು ಒಂದು ಕೋರ್ಟು ಬೇರೆ ಇರಬೇಕು. ಇದಕ್ಕಾಗಿ ಹೈಕೋರ್ಟ್ ಶಾಸನ ತಿದ್ದುಪಡಿ ಮಾಡಬೇಕು. ಹೈ ಕೋರ್ಟು ಮುಂದೆ ಇರತಕ್ಕಂಥ ಎಲ್ಲ ರಿಟ್ ಅಪ್ಲಿಕೇಷನ್ಸ್ ತೀರ್ಮಾನ ಮಾಡುವುದಕ್ಕೆ ಸರ್ಕಾರದವರು ಯಾವ ರೀತಿ ಸೂಚನೆ ನೀಡಬಹುದೋ ಆ ರೀತಿ ಸೂಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಹೈ ಕೋರ್ಟಿನಲ್ಲಿ ರಿಟ್ ಅರ್ಜಿಗಳನ್ನು ಆರು ತಿಂಗಳುಗಳಲ್ಲಿ ಇತ್ಯರ್ಥ ಮಾಡಬೇಕೆಂದು ಲಾ ಕಮಿಷನ್ನು ರೆಕಮೆಂಡ್ ಮಾಡಿದ್ದಾರೆ. ತೀರ್ಮಾನವಾಗುವುದಕ್ಕೆ ಆರು ತಿಂಗಳಲ್ಲ ಒಂದು ವರ್ಷ ಕೂಡ ಆಗುತ್ತದೆ. ಇದಕ್ಕೆ ಸರಿಯಾದ ಡೈರೆಕ್ಟಿವ್ ಕೊಟ್ಟಿಲ್ಲ. ಆದುದರಿಂದ ಈ ಬಗ್ಗೆ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಹೈ ಕೋರ್ಟಿನಲ್ಲಿ ಒಂದು ಲೇಬರ್ ಬೆಂಚ್ ಮಾಡುವುದಕ್ಕೆ ಸೂಕ್ತ ಅಮೆಂಡ್‌ಮೆಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ದಿನಗಳ ಹಿಂದೆ ಮೈಸೂರು ಮಿಷಿನರಿ ಕಂಪನಿಯಲ್ಲಿ ಕೆಲಸಗಾರರು ಸ್ಟ್ರೈಕ್ ಮಾಡಿದಾಗ್ಗೆ ಕೆಲಸಗಾರರು ಒಳಗೆ ಇದ್ದರು. ಈ ಕಾರ್ಮಿಕರು ಟ್ರೆಸ್ ಪಾಸ್ ಮಾಡಿದ್ದಾರೆಂದು ಮಾಲೀಕರು ಹೈ ಕೋರ್ಟಿಗೆ ಅರ್ಜಿ ಹಾಕಿದರು. ಇದಲ್ಲದೆ ಸರಕಾರದ ನೀತಿ ಧೋರಣೆಗೆ ಅನುಗುಣವಾಗಿ ಒಂದು ತೀರ್ಮಾನ ಹೈ ಕೋರ್ಟು ಕೊಟ್ಟಿದೆ. ಅದು ಬಹಳ ಅನ್ಯಾಯ ಮತ್ತು ತಪ್ಪು ಎಂದು ನಮ್ಮ ಅಭಿಪ್ರಾಯ. ಜನಗಳಿಗೆ ಕಲ್ಯಾಣ ಮಾಡಬೇಕೆಂದು ನಿಜವಾಗಿಯೂ ಸರಕಾರಕ್ಕೆ ಅಂಥ ಅಭಿಪ್ರಾಯವಿದ್ದರೆ ಮೈಸೂರು ಮಿಷಿನರಿ ಕಂಪನಿಯ ಪರವಾಗಿ ಹೈ ಕೋರ್ಟು ಕೊಟ್ಟಿರತಕ್ಕಂಥ ತೀರ್ಮಾನವನ್ನು ವಿರೋಧಿಸಿ ಸರಕಾರ ಸುಪ್ರೀಂ ಕೋರ್ಟಿಗೆ ಅಪೀಲು ಹಾಕಬೇಕು. ಹಾಗೂ ಅವರಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಬೇಕಾಗಿದೆ.

ಈಗ ಬೇರೆ ವಿಷಯದ ಮೇಲೆ ಮಾತನಾಡುವುದಕ್ಕೆ ಕಾಲಾವಕಾಶವಿಲ್ಲ. ಎಂಪ್ಲಾಯಮೆಂಟ್ ವಿಷಯ ಒಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ಇಂದು ನಿರುದ್ಯೋಗ ಸಮಸ್ಯೆಯನ್ನು ಸರಕಾರ

ಬಗೆಹರಿಸಿಲ್ಲ. ದಿನದಿನಕ್ಕೆ ನಿರುದ್ಯೋಗ ದೇಶದಲ್ಲಿ ಹೆಚ್ಚೆಚ್ಚು ಆಗುತ್ತಿದೆ. ಸರಕಾರವು ನಮಗೆ ಒದಗಿಸಿರುವ ಸ್ಟ್ಯಾಟಿಸ್ಟಿಕಲ್ ಔಟ್ ಲೈನ್ ಆಫ್ ಮೈಸೂರ್ 1966 ಇದನ್ನು ನೋಡಿದರೆ ಗೊತ್ತಾಗುತ್ತದೆ. ಸರಕಾರಿ ಕ್ಷೇತ್ರದಲ್ಲಿ ಇರತಕ್ಕಂಥ ಕೈಗಾರಿಕೆಗಳಲ್ಲಿಯು ಎಂಪ್ಲಾಯ್‌ಮೆಂಟ್ ಫಿಗರ್ಸ್ ನೋಡಬಹುದು. ''ಎಂಪ್ಲಾಯ್‌ಮೆಂಟ್ ಇನ್ ಗವರ್ನಮೆಂಟ್ ಇಂಡಸ್ಟ್ರಿಯಲ್ ಅಂಡರ್ ಟೇಕಿಂಗ್ಸ್ '' ನಲ್ಲಿ 1961-62 ರಲ್ಲಿ 32,563 ಇದ್ದುದು 1963-64 ರಲ್ಲಿ 16,031 ಉದ್ಯೋಗಿಗಳು ಇದ್ದಾರೆ. ಇದರಿಂದ ಏನು ಕಂಡುಬರುತ್ತದೆ ಎಂದರೆ ಸರಕಾರ ಉದ್ಯೋಗ ಒದಗಿಸುವುದರ ಬದಲು ನಿರುದ್ಯೋಗ ಹೆಚ್ಚೆಚ್ಚು ಆಗುತ್ತಿದೆ ಎಂಬುದು ಕಂಡುಬರುತ್ತದೆ. ಈಗಾಗಲೇ ಆಟೋಮೇಷನ್, ಕಂಪ್ಯೂಟರ್ ಮಶೀನ್ ಎಲ್. ಐ. ಸಿ. ಯಲ್ಲಿ ಹಾಕುವ ವಿಚಾರ ನಡೆದಿದೆ. ಇಂದು ದೇಶದಲ್ಲಿ ಇದು ಮುಖ್ಯವಾದ ಪ್ರಶ್ನೆಯಾಗಿದೆ. ಇದಕ್ಕೆ ವಿರೋಧವಾಗಿ ಎಲ್. ಐ. ಸಿ. ನೌಕರರು ಪ್ರಚಂಡವಾಗಿ ಪ್ರದರ್ಶನ ಮಾಡುತ್ತಿದ್ದಾರೆ. ಈ ಸೂಚನೆಯನ್ನು ಮಾಡುವ ಹೊತ್ತಿಗೆ ಕಲ್ಕತ್ತ ನಗರದಲ್ಲಿ, ಬೊಂಬಾಯಿ ನಗರದಲ್ಲಿ ಆಟೋಮೇಷನ್ ಮಷಿನ್ಸ್, ಕಂಪ್ಯೂಟರ್ ಮೆಷಿನ್ಸ್ ತೆಗೆದುಕೊಂಡು ಬಂದರೆ ಅನೇಕ ರೀತಿಯಲ್ಲಿ ನಿರುದ್ಯೋಗ ಬರುತ್ತದೆ ಎಂದು ನೌಕರರು ವಿರೋಧ ಸಲ್ಲಿಸುತ್ತ ಬಂದಿದ್ದಾರೆ. ಅಲ್ಲಿ ಎಲ್. ಐ. ಸಿ. ಯ ದುಷ್ಪ್ರಯತ್ನಗಳು ವಿಫಲವಾಗಿವೆ. ಈಗ ಆ ಯಂತ್ರಗಳನು ಬೆಂಗಳೂರು ನಗರದಲ್ಲಿ ತೆಗೆದುಕೊಂಡು ಬರಬೇಕೆಂಬ ಹಂಚಿಕೆ ಮಾಡುತ್ತಿದ್ದಾರೆ. ಎಲ್.ಐ.ಸಿ ಮ್ಯಾನೇಜ್‌ಮೆಂಟಿನವರೊಡನೆ ಷಾಮೀಲಾಗಿ ನಮ್ಮ ಮುಖ್ಯ ಮಂತ್ರಿಗಳು ಕಂಪ್ಯೂಟರ್ ಮೆಷಿನ್‌ಗಳನ್ನು ತೆಗೆದುಕೊಂಡು ಬರಬೇಕೆನ್ನುವ ಹಂಚಿಕೆ ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಹೀಗೆ ಮಾಡಿದರೆ ದೇಶದಲ್ಲಿ ದೊಡ್ಡ ಆಂದೋಳನ ಅದೀತು. ನಾನು ಮುಖ್ಯ ಮಂತ್ರಿಗಳಿಗೆ ಒಂದು ಎಚ್ಚರಿಕೆಯನ್ನು ಕೊಡುತ್ತೇನೆ, ಈ ರೀತಿಯಾಗಿ ಕಂಪ್ಯೂಟರ್ ಮೆಷಿನ್ ಬಂದರೆ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತದೆ. ಮುಖ್ಯ ಮಂತ್ರಿಗಳಾಗಲೀ ಸರ್ಕಾರವೇ ಆಗಲೀ ಇದಕ್ಕೆ ಪ್ರಯತ್ನ ಮಾಡಿದ್ದೇ ಆದರೆ ಕಾರ್ಮಿಕ ವರ್ಗ ತೀವ್ರವಾಗಿ ಪ್ರತಿಭಟನೆಯನ್ನು ವ್ಯಕ್ತ ಮಾಡುತ್ತಾರೆ. ಆದ್ದರಿಂದ ಇದನ್ನು ಮಾಡಕೂಡದೆಂದು ನಾನು ಅವರಿಗೆ ಒತ್ತಾಯ ಮಾಡಿ ಕೇಳಿಕೊಳ್ಳುತ್ತೇನೆ.

ಪೋಲೀಸರ ನೀತಿ ಕಾರ್ಮಿಕರ ಬಗ್ಗೆ ಬದಲಾವಣೆಯಾಗಬೇಕು. ಕಾರ್ಮಿಕರ ಬಗ್ಗೆ ಪೋಲೀಸಿನವರ ನೀತಿ ಏನಿದೆ ಅದನ್ನು ಬದಲಾವಣೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕಾರ್ಮಿಕರು ಸಭೆ ನಡೆಸಿದರೆ ಮೆರವಣಿಗೆಗಳಲ್ಲಿ ಬಂದ ತಕ್ಷಣ ಹತ್ತಾರು ಪೋಲೀಸ್ ವ್ಯಾನುಗಳು ಬರುತ್ತವೆ. ವ್ಯಾನುಗಳೂ, ಸಬ್ ಇನ್‌ಸ್ಪೆಕ್ಟರುಗಳೂ ಇರುತ್ತಾರೆ. ನಾವೇನು ಹೊಡೆಯುತ್ತೇವೆಯೋ, ಬಡಿಯುತ್ತೇವೆಯೋ ? ಕಾರ್ಮಿಕರ ರಕ್ಷಣೆಗೆ ಎಂದು ಹೇಳುತ್ತಾರೆ. ಅದು ನಿಜಾಂಶವಲ್ಲ. ಅವರಿಗೆ ಬೆದರಿಕೆ ಹಾಕುವುದಕ್ಕೆ ಈ ರೀತಿ ಮಾಡುತ್ತಾರೆ. ಕೈಗಾರಿಕಾ ವಿವಾದಗಳಲ್ಲಿ ಪೋಲೀಸಿನವರು ತಲೆ ಹಾಕಬಾರದು ಎನ್ನುವುದು ಪ್ರಗತಿಪರವಾದ ನೀತಿ. ಇಂಥ ಪ್ರಗತಿಪರವಾದ ನೀತಿಯನ್ನು ಕಾಂಗ್ರೆಸ್ಸೇತರ ಸರ್ಕಾರಗಳು ಜಾರಿಗೆ ತರುವುದಕ್ಕೆ ಪ್ರಯತ್ನ ಪಡುತ್ತಿವೆ. ನಾನು ಕೇಳಿಕೊಳ್ಳುವುದು ಪ್ರಗತಿಪರವಾದ ರೀತಿಯಲ್ಲಿ ಮಾನ್ಯ ಗೃಹ ಮಂತ್ರಿಗಳು ಯೋಚನೆ ಮಾಡಬೇಕು. ಅವರು ಹೋಂ ಮತ್ತು ಲೇಬರ್ ಎರಡು ಇಲಾಖೆಗಳನ್ನೂ ಇಟ್ಟುಕೊಂಡಿದ್ದಾರೆ. ಎರಡು ಇಲಾಖೆಗಳು ನಿಮಗೇ ಬೇಡ ಎಂದು ನಾವು ಹೇಳಿದೆವು. ಇವತ್ತೂ ಕೇಳಿಕೊಳ್ಳುತ್ತೇನೆ, ಎರಡೂ ಬೇರೆ ಬೇರೆ ಇದ್ದರೆ ಒಳ್ಳೆಯದು ಎಂದು. ಇಲ್ಲ ಲೇಬರ್ ಮಿನಿಸ್ಟರ್ ಆಗಿ. ನಾವೂ ನೀವೂ ಚರ್ಚೆ ಮಾಡಬಹುದು. ಹೋಂ ಮಿನಿಸ್ಟ್ರಿ ಇಟ್ಟುಕೊಂಡರೆ ಲೇಬರ್ ಮಿನಿಸ್ಟರ್ ಬಿಡಿ. ಸೈಕಲಾಜಿಕಲ್ ಆಗಿ ಏನಾಗಿದೆ ಎಂದರೆ ಹೋಂ ಮತ್ತು ಲೇಬರ್ ಎರಡೂ ಸೇರಿಕೊಂಡು ಗೊಂದಲ ಉಂಟಾಗಿದೆ. ಪೋಲೀಸ ಮಂತ್ರಿಯೂ ಅವರೇ, ಕಾರ್ಮಿಕ ಮಂತ್ರಿಯೂ ಅವರೇ ಆಗಿರುವುದರಿಂದ ಈ ಪರಿಸ್ಥಿತಿ ಬಂದಿದೆ ; ಹೆಚ್ಚು ಹೆಚ್ಚು ಪೋಲೀಸಿನವರನ್ನು ಉಪಯೋಗ ಮಾಡುವುದಕ್ಕೆ ಅನುಕೂಲವಾಗಿದೆ. ಯಶವಂತಪುರ ಮತ್ತು ಇತರ ಕಡೆ ಪೋಲೀಸಿನವರು ಏನು ಮಾಡುತ್ತಾರೆಂದರೆ ಬಹಳ ಕೀಳು ಮಟ್ಟದಲ್ಲಿ ಮಾತನಾಡುತ್ತಾರೆ. ಸರ್ಕಾರಕ್ಕೆ ವಿರೋಧವಾಗಿ ಮಾತನಾಡುತ್ತೀ, ನೀನು ಕಮ್ಯೂನಿಸ್ಟೋ, ಏನು ಎಂದು ಸಾಧಾರಣ ಕೆಲಸಗಾರರಲ್ಲಿ ಹಾಗೂ ಇತರರೊಂದಿಗೆ ಮಾತನಾಡುತ್ತಾರೆ, ಬೆದರಿಸುತ್ತಾರೆ. ಇದು ಸರ್ಕಾರದ ನೀತಿಯಿಂದ ಬರುತ್ತದೆ. ಅದು ಪೋಲೀಸಿನವರ ತಪ್ಪಲ್ಲ. ಸರ್ಕಾರದ ನೀತಿಯ ತಪ್ಪು.

ಜೈಲು ಸುಧಾರಣೆ ಮಾತ್ರ ಆಗಬೇಕೆಂದು ನಾನು ಹೇಳುತ್ತೇನೆ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಸಭಾಪತಿಗಳಿಗೆ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹಮಂತ್ರಿಗಳು ಸಭೆಯ ಮುಂದೆ ತಂದಿರುವ ಡಿಮ್ಯಾಂಡ್ 12, 13, 26 ಮತ್ತು 41 ಎ ಇವನ್ನು ಸ್ವಾಗತಿಸುತ್ತ ನಮ್ಮ ಗೃಹಮಂತ್ರಿಗಳವರಿಗೆ ಈ ಆಡಳಿತದ ವಿಚಾರವಾಗಿ ಕೆಲವು ವಿಷಯಗಳನ್ನು ಕಳಕಳಿಯಿಂದ ತಿಳಿಸಬೇಕೆಂದು ನನ್ನ ಮನಸ್ಸು ಹೇಳುತ್ತಿದೆ.

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ಜೈಲುಗಳು 1937ರಿಂದ ಹಿಡಿದು 1967ರವರೆಗೂ ಇದ್ದ ಮತ್ತು ಇರುವ ಪರಿಸ್ಥಿತಿಯನ್ನು ನೋಡಿದರೆ ಹಿಂದೆ ಇದ್ದ ಜೈಲು ಸುಧಾರಣೆಗಳು ಮತ್ತು ಈಗಿನ ಸುಧಾರಣೆಗಳಿಗೆ ಬಹಳ ವ್ಯತ್ಯಾಸವಿದೆ. ಈಗಿನ ಸರ್ಕಾರದವರು ಬಹಳ ಚೆನ್ನಾಗಿ ರಾಜಕೀಯ ಖೈದಿಗಳಾಗಲೀ ಕ್ರಿಮಿನಲ್ ಖೈದಿಗಳಾಗಲೀ ಅವರಿಗೆ ಟ್ರೀಟ್‌ಮೆಂಟ್ ಯಾವರೀತಿ ಕೊಡಬೇಕು ಎನ್ನುವುದರ ಬಗ್ಗೆ ಬಹಳ ಮುತುವರ್ಜಿ ವಹಿಸಿ ಕೊಡುತ್ತಿದ್ದಾರೆ.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ನೀವು ಜೈಲಗೆ ಹೋಗಿ ಎಷ್ಟು ದಿನವಾಯಿತು!

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಅವರು ಜೈಲನ್ನು ಈ ನಡುವೆ ನೋಡಿರಬಹುದು. ನಾವು ಬಹಳ ವರ್ಷಗಳಿಂದ ನೋಡಿರತಕ್ಕವರು. 1937ರಿಂದ 1947ರ ವರೆಗೂ ಜೈಲಿನಲ್ಲಿ ಏನೇನು ಕಷ್ಟಸುಖಗಳಿದ್ದುವು, ಅಲ್ಲಿ ಏನು ಕಷ್ಟ ಕೊಡುತ್ತಿದ್ದರು ಎನ್ನುವುದನ್ನು ಅನುಭವಿಸಿದವರು ನಾವು. ಈಚೆಗೆ ಇವರು ಹೋಗಿ ಸೊಗಸಾಗಿ ಬಂದವರು.

[*Interruptions*]

(*Many Hon'ble Members rose*)

Mr. DEPUTY SPEAKER.—Order, order.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಪಾಯಿಂಟ್ ಆಫ್ ಆರ್ಡರ್, ಸ್ವಾಮಿ. ಈ ಸಭೆಯ ಒಬ್ಬ ಸದಸ್ಯರು ಮಾತನಾಡುವಾಗ ಅವರು ಯೀಲ್ಡ್ ಆಗದೆ ಇದ್ದರೆ ಬೇರೆಯವರು ಸಿಕ್ಕಿದಹಾಗೆ ಮಾರ್ಕೆಟ್ಟಿನಲ್ಲಿ ಮಾತನಾಡುವ ಹಾಗೆ ಮಾತನಾಡುವುದಕ್ಕೆ ಅವಕಾಶವಿದೆಯೇ ?

ಉಪಾಧ್ಯಕ್ಷರು.—ಹಾಗೆ ಮಾತನಾಡಲು ಅವಕಾಶವಿಲ್ಲ ಎನ್ನುವುದು ಎಲ್ಲರಿಗೂ ಗೊತ್ತು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಅಧ್ಯಕ್ಷರೇ, ಜೈಲಿನಲ್ಲಿ ಕಳ್ಳತನ ಮಾಡಿರತಕ್ಕವರೂ ಹೋಗಿದ್ದಾರೆ, ರಾಜಕೀಯ ಖೈದಿಗಳೂ ಹೋಗಿದ್ದಾರೆ, ದರೋಡೆಕೋರರೂ ಹೋಗಿದ್ದಾರೆ, ನಾಣ್ಯಗಳನ್ನು ತಯಾರು ಮಾಡುವವರೂ ಹೋಗಿದ್ದಾರೆ. ಅವರಿಗೆ ಅಲ್ಲಿ ಇನ್ನೂ ಕೈಗಾರಿಕೆಗಳನ್ನು ಹೆಚ್ಚು ಮಾಡಿ, ಅವರಿಗೆ ಟ್ರೈನಿಂಗ್ ಕೊಟ್ಟು, ಅವರನ್ನು ಒಂದು ದಾರಿಯಲ್ಲಿ, ಸನ್ಮಾರ್ಗದಲ್ಲಿ ನಡೆಸುವುದಕ್ಕೆ ತಳಪಾಯ ಹಾಕಿ, ಅವರು ಶಿಕ್ಷೆ ತೀರಿಸಿಕೊಂಡು ಈಚೆಗೆ ಬಂದಮೇಲೆ ಅವರು ಸುಖವಾಗಿ ಜೀವನ ನಡೆಸುವುದಕ್ಕೆ ಅನುಕೂಲ ಮಾಡಿಕೊಡುವಂಥ ವ್ಯವಸ್ಥೆಯನ್ನು ಮಾನ್ಯ ಗೃಹ ಮಂತ್ರಿಗಳು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಪೋಲೀಸು ವಿಷಯ. ನಿನ್ನೆಯ ದಿನ ಪಾನನಿರೋಧ ತಿದ್ದುಪಡಿ ಮಸೂದೆಯನ್ನು ಅಂಗೀಕಾರ ಮಾಡಿದ್ದರಿಂದ ಅಬ್ಕಾರಿಯನ್ನು ಇಡೀ ದೇಶದಲ್ಲೆಲ್ಲಾ ಕೊಡುತ್ತೇವೆಂದು ಹೇಳಿದ ಮೇಲೆ ಪೋಲೀಸಿನವರೆಲ್ಲಾ ಬಹಳ ಚಿಂತಾಕ್ರಾಂತರಾಗಿದ್ದಾರೆ. ಅವರು ಒಂದು ಸಂತಾಪಸೂಚಕ ನಿರ್ಣಯವನ್ನು ತಾಲ್ಲೂಕು ಮತ್ತು ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ ಮಾಡುತ್ತಾರೆಯೋ ಏನೋ ! ನಮ್ಮ ಎದುರುಗಡೆ ಕುಳಿತಿರುವವರು ನಾನು ಹೇಳುತ್ತಿರುವುದು ಅವರ ಒಳ್ಳೆಯದಕ್ಕೆ ಎಂದು ತಿಳಿದುಕೊಂಡಿರಬಹುದು. ನಾನು ಗೃಹ ಮಂತ್ರಿಗಳಿಗೆ ಮಾತ್ರ ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ. ಏನೆಂದರೆ, ನಮ್ಮ ಊರಿನಲ್ಲಿ ಒಂದು ದಿನ ರಾತ್ರಿ ಹನ್ನೆರಡು ಕಿಟಕಿಗಳನ್ನು ಮುರಿದು ಸುಮಾರು ಹತ್ತಾರು ಸಾವಿರ ರೂಪಾಯಿ ಸಾಮಾನುಗಳನ್ನು ಕಳವು ಮಾಡಿದ್ದಾರೆ ಹೀಗಿದ್ದಾಗ್ಯೂ ಕೂಡ ಅಲ್ಲಿರತಕ್ಕ ಪೋಲೀಸ್ ಇಲಾಖೆಯವರು ಸರಿಯಾದ ನಿಗಾವಣೆ ತೆಗೆದುಕೊಳ್ಳಲಿಲ್ಲ. ಅವರ ನಿಗಾವಣೆ ಎಲ್ಲಿರುತ್ತದೆ ಎಂದರೆ, ಎಲ್ಲಿ ಸಾರಾಯಿ ತಯಾರು ಮಾಡುತ್ತಾರೆ, ಎಲ್ಲಿ ಸಾರಾಯಿ ಮಾರಾಟ ಮಾಡುತ್ತಾರೆ, ಯಾವ ಲಾರಿಯವನು, ಯಾವ ಬಸ್ಸಿನವನು ಲಂಚ ಕೊಟ್ಟಿಲ್ಲ, ಎನ್ನುವುದರ ಕಡೆ ನಿಗಾ ಇರುತ್ತದೆಯೇ ವಿನಾ ಅದರ ಮೇಲೆ ಅವರ ನಿಗಾ ಕ್ರೋಢೀಕರಿಸಿರುತ್ತದೆಯೇ ವಿನಾ ಜನರ ಆಸ್ತಿಪಾಸ್ತಿಗಳ ರಕ್ಷಣೆಯ ಕಡೆಗೆ ಪೋಲೀಸಿನವರಿಗೆ ನಿಗಾ ಇಲ್ಲ. ನಾಳೆಯಿಂದ ಅಬ್ಕಾರಿ ದೇಶದಲ್ಲೆಲ್ಲಾ ಮಾರಾಟಕ್ಕೆ ಬರುವುದರಿಂದ ಆಗ ಪೋಲೀಸಿನವರು ಜನರ ಆಸ್ತಿಪಾಸ್ತಿಯ ಕಡೆಗೆ ಸ್ವಲ್ಪ ನಿಗಾ ಕೊಡಬಹುದು ಎಂದು ನನ್ನ ಅಭಿಪ್ರಾಯವಿದೆ. ಆದರೆ ಇನ್ನೊಂದು ಕಡೆಗೂ ಅವರ ನಿಗಾ ಹೋಗಬಹುದು ಎನ್ನುವ ಭಯವೂ ಇದೆ. ಮಂಡ್ಯ ಡಿಸ್ಟಿಲರಿಯಿಂದ ಸರ್ಕಾರದವರು ಸಾರಾಯಿ ಮಾರಾಟಕ್ಕೆ ಕೊಟ್ಟರೆ ಅವರು ಹಳ್ಳಿಗಳಲ್ಲಿ ತಯಾರು ಮಾಡಿಸಿ ಮಾರಿಸುವುದಕ್ಕೆ ಏರ್ಪಾಡು ಮಾಡುತ್ತಾರೆಯೋ ಏನೋ ಅದನ್ನು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಗೃಹ ಮಂತ್ರಿಗಳು ಇಡೀ ರಾಜ್ಯದಲ್ಲಿ ಒಂದೊಂದು ಜಿಲ್ಲೆಯಲ್ಲಿ, ಒಂದೊಂದು ತಾಲ್ಲೂಕಿನಲ್ಲಿ ಸಂಚಾರಮಾಡಿ ಪೋಲೀಸಿನವರಿಂದ ಏನು ಭೀತಿ

ಜನಗಳಿಗೆ ಇದೆ. ಜನಗಳಿಗೆ ಆಗಿರತಕ್ಕ ದುಷ್ಪರಿಣಾಮಗಳೇನು ಎನ್ನುವುದನ್ನು ವಿಚಾರ ಮಾಡಬೇಕು. ನಮ್ಮ ಗೃಹಮಂತ್ರಿಗಳಿಗೆ ಮಾತ್ರ ಇಡೀ ಒಂದು ವರ್ಷದಲ್ಲಿ ನನ್ನ ಅಂದಾಜು 50 ರೂಪಾಯಿ ಟಿ.ಎ. ಆಗುತ್ತದೋ ಇಲ್ಲವೋ, ಅವರು ಹೆಚ್ಚು ಪ್ರವಾಸ ಮಾಡಬೇಕು. ಅವರು ಬುದ್ಧದೇವನ ಅನುಯಾಯಿಗಳು. ಒಳ್ಳೆಯ ಮೆತು, ಆ ಮೆತುವಿನಿಂದ ಈ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಸರಿಯಾದ ಹತೋಟಿಯಿಟ್ಟು ಬಿಗಿಯಾದ ಆಡಳಿತ ತರುವುದಕ್ಕಾಗುವುದಿಲ್ಲ. ನಮ್ಮ ಗೃಹಮಂತ್ರಿಗಳು ಬಹಳ ಬುದ್ಧಿವಂತರು. ಒಳ್ಳೆಯ ನಿಸ್ಪೃಹರು. ಬಹಳ ಖಂಡಿತವಾದಿಗಳು, ಆದರೆ ಪೋಲೀಸರು ಕೇಳಬೇಕಲ್ಲ ಅವರು ಕೇಳುವುದಿಲ್ಲ. ಆದರೆ ಕೇಳುವ ಹಾಗೆ ಮಾಡತಕ್ಕ ಕಾಲ ಸನ್ನಿಹಿತವಾಗಿದೆ. ಪೋಲೀಸರು ನಮ್ಮ ಡ್ಯೂಟಿ ನಾವು ಮಾಡಬೇಕು ಎಂದು ತಿಳಿದುಕೊಳ್ಳಬೇಕು. ಒಳ್ಳೆಯವರಿಗೆ ಕೋಪ ಬರುವುದಿಲ್ಲ ಬಂದಮೇಲೆ ಅವರನ್ನು ಹಿಡಿಯುವುದಕ್ಕೆ ಆಗುವುದಿಲ್ಲ. ಆದುದರಿಂದ ನಮ್ಮ ಮಂತ್ರಿಗಳಿಗೆ ಕೋಪ ಬರುವವರೆಗೆ ಪೋಲೀಸಿನವರು ಸಮಾಧಾನವಾಗಿರುತ್ತಾರೆ. ಕೋಪ ಬಂದಮೇಲೆ ಪೋಲೀಸಿನವರಿಗೆ ಏನು ಏನು ಶಿಕ್ಷೆ ಕೊಡಬೇಕು ಅದನ್ನು ಕೊಟ್ಟೇ ತೀರುತ್ತಾರೆ. ನ್ಯಾಯವಾಗಿ ಜನಗಳನ್ನೂ ಮತ್ತು ಅವರ ಆಸ್ತಿಪಾಸ್ತಿಗಳನ್ನು ಕಾಪಾಡತಕ್ಕವರು ಪೋಲೀಸಿನವರು. ಇಷ್ಟೊಂದು ಕಳ್ಳತನ ಇದ್ದರೂ ನಮ್ಮ ಗೃಹಮಂತ್ರಿಗಳಿಗೆ ತಿಳಿದಿರುವಂತೆ ಅವು ಟ್ರೇಸ್ ಆಗುವುದಿಲ್ಲ. ನಮ್ಮ ಊರಿನಲ್ಲಿ 400-500 ಕಳ್ಳತನಗಳಾಗಿವೆ. ಬಂದಿಗೆ ಇಟ್ಟು ಒಳಗೆ ಹೋದರೆ ಬಂದಿಗೆಗಳೇ ಇರುವುದಿಲ್ಲ. ಹೀಗೆ ಸಾವಿರಾರು ಬಂದಿಗೆಗಳು ಹೋಗಿವೆ. ಇಂಥ ಚಿಕ್ಕ ಕಳ್ಳತನಗಳನ್ನು ಪೋಲೀಸಿನವರೇ ಹುಡುಗರಿಗೆ ಹೇಳಿ ಮಾಡಿಸುತ್ತಿದ್ದಾರೋ ಏನೋ ಎನ್ನುವ ಭಯ ನಮಗೆ ಬಂದಿದೆ. ಮಾನ್ಯ ಗೃಹಮಂತ್ರಿಗಳು ಪೋಲೀಸಿನವರಿಗೆ ತಕ್ಕ ಬಂದೋಬಸ್ತು ಮಾಡಿ ಇವನ್ನೆಲ್ಲಾ ಸರಿಯಾಗಿ ನೋಡಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೆಲವು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬೇಕಾದಷ್ಟು ಆಕ್ಸಿಡೆಂಟ್‌ಗಳು ಆಗುತ್ತಾ ಇವೆ. ಚೆನ್ನಾಗಿ ಕಲಿತಿರತಕ್ಕವರನ್ನು ಪೋಲೀಸ್ ಇಲಾಖೆಗೆ ಸೇರಿಸಿಕೊಳ್ಳಬೇಕು. ಈ ದೂರುಗಳನ್ನು ಕಡಿಮೆ ಮಾಡಬೇಕು. ಮಾನ್ಯ ಗೃಹಮಂತ್ರಿಗಳು ಇಲಾಖೆಯವರಿಗೆ ತಿಳುವಳಿಕೆ ಕೊಡಬೇಕು. ಹೆಚ್ಚಿನ ಆಕ್ಸಿಡೆಂಟ್‌ಗಳು ಆಗದೇ ಇರುವಂತೆ ಎಚ್ಚರಿಕೆ ವಹಿಸುವಂತೆ ಹೇಳಬೇಕು. ಇನ್ನು ಅನೇಕ ವಿಷಯಗಳು ಇವೆ. ಅದರಲ್ಲಿ ಒಂದು ಸಲಹೆ ಮಾತ್ರ ಹೇಳುತ್ತೇನೆ. ಮಾನ್ಯ ಗೃಹಮಂತ್ರಿಗಳು ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ, ಪ್ರತಿಯೊಂದು ತಾಲ್ಲೂಕಿನಲ್ಲೂ ಟೂರ್ ಹಾಕಿ ಅನ್ಯಾಯ ಅಕ್ರಮಗಳಿಗೆ ಪೋಲೀಸರು ಏನು ಮಾಡುತ್ತಾರೆ ಎಂಬುದನ್ನು ವಿಚಾರಿಸಿ, ಅವರಿಗೆ ಸೂಕ್ತ ತಿಳುವಳಿಕೆ ಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹೆಡ್‌ಕ್ವಾರ್ಟರ್ಸ್‌ನಲ್ಲಿ ಇದ್ದು ಎಲ್ಲಾ ವಿಷಯ ಗೊತ್ತಾಗುತ್ತದೆ ಎಂದರೆ ಕೆಳಗಿನವನು ಏನು ಬರೆದರು ಮೇಲಿನವನು ಅದೇ ಬರೆಯುತ್ತಾರೆ. ನಮ್ಮ ಇಲಾಖೆ ಚೆನ್ನಾಗಿದೆ ಎಂದು ಬರೆದರೆ ಅವರೂ ಹಾಗೆ ತಿಳಿದುಕೊಳ್ಳುತ್ತಾರೆ. ಆದುದರಿಂದ ಸರ್ಕಾರದ ಹಣ ಖರ್ಚಾದರೂ ಚಿಂತೆ ಇಲ್ಲ, ನಿಮಗೆ ಏನೂ ಹೆಚ್ಚು ಖರ್ಚಾಗುವುದಿಲ್ಲ, ಆದುದರಿಂದ ಒಂದೊಂದು ಜಿಲ್ಲೆಯಲ್ಲಿಯೂ ಪ್ರವಾಸ ಮಾಡಿದರೆ ಅದರಿಂದ ಎಷ್ಟೋ ಪ್ರಯೋಜನ ಜನಗಳಿಗೆ ಆಗುತ್ತದೆ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪೋಲೀಸಿನವರು ಲಂಚ ರುಷುವತ್ತುಗಳನ್ನು ತೆಗೆದುಕೊಂಡರೆ ಅದಕ್ಕೆ ತಕ್ಕ ಫಲವನ್ನು ಅವರು ಅನುಭವಿಸಲೇಬೇಕು, ಮತ್ತು ಅವರಿಗೆ ಖಾಯಿಲೆ, ಕಸಾಲೆ ಎಲ್ಲಾ ರೋಗಗಳೂ ಇದ್ದೇ ಇರುತ್ತವೆ. ಅವರಿಗೆ ಅನ್ಯಾಯದ ಹಣ ದಕ್ಕುವುದಿಲ್ಲ. ಇದನ್ನೆಲ್ಲಾ ನೋಡಿ ನೀತಿಯಿಂದ ವರ್ತಿಸಿದರೆ ಸಂಬಳ ಸಂಪೂರ್ಣವಾಗಿ ಸಿಕ್ಕಿ ಸುಖ ಸಂತೋಷದಿಂದ ಇರುತ್ತಾರೆ. ಜನಗಳ ಮಾನ ಮರ್ಯಾದೆಯನ್ನು ಕಾಪಾಡುವವರು ಪೋಲೀಸಿನವರು. ಆದುದರಿಂದ ಅವರು ಸರಿಯಾಗಿ ನಡೆದುಕೊಂಡು ಹೋಗಬೇಕೆಂದು ಮಾನ್ಯ ಗೃಹಮಂತ್ರಿಗಳು ಪೋಲೀಸಿನವರಿಗೆ ತಿಳಿಯಪಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ; ಮತ್ತು ನನಗೆ ಈ ಒಂದೆರಡು ಮಾತುಗಳನ್ನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬೋಳ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಗಳೇ, ಗೃಹ ಇಲಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಯನ್ನು ವಿರೋಧಿಸಿ ಕೆಲವು ವಿಚಾರಗಳ ಬಗೆಗೆ ನನ್ನ ಅಭಿಪ್ರಾಯವನ್ನು ಸಭೆಯ ಮುಂದೆ ಇಡಬೇಕೆಂದಿದ್ದೇನೆ.

ಈಗ ನಾವು ಪ್ರಜಾಪ್ರಭುತ್ವದಲ್ಲಿರುವುದರಿಂದ ಪೋಲೀಸ್ ಅಧಿಕಾರಿಗಳು ಜನತೆಯನ್ನು ನೋಡುವ ದೃಷ್ಟಿಕೋನದಲ್ಲಿ ಬದಲಾವಣೆಯಾಗಬೇಕು. ಈಗ ಈ ಇಲಾಖೆಯಲ್ಲಿರುವ ಪೋಲೀಸರು ಹಿಂದಿನ ಕಾಲದಲ್ಲಿ ಆಗಿನ ಪರಿಸ್ಥಿತಿಯಲ್ಲಿ ನೇಮಕವಾಗಿರುವವರಾಗಿರುವುದರಿಂದ ಅವರಲ್ಲಿ ಹೆಚ್ಚಿನ ವಿದ್ಯಾವಂತರಿಲ್ಲ. ಆದುದರಿಂದ ಈ ಪೋಲೀಸ್ ಇಲಾಖೆಯನ್ನು ಸುಧಾರಣೆ ಮಾಡಬೇಕಾದರೆ, ರೆಕ್ರೂಟ್‌ಮೆಂಟ್ ಮಾಡುವಾಗ ಅವರಿಗಿರಬೇಕಾದ ವಿದ್ಯಾರ್ಹತೆಯನ್ನು ಹೆಚ್ಚಿನ ಮಟ್ಟಕ್ಕೆ

(ಶ್ರೀ ಭೋಳ ರಘುರಾಮಶೆಟ್ಟಿ)

ಇಡುವುದು ಅಗತ್ಯ. ಪೋಲೀಸ್ ಇಲಾಖೆಯಲ್ಲಿ ಸಬ್ ಇನ್‌ಸ್ಪೆಕ್ಟರ್ ಟ್ರೈನಿಂಗ್ ಕೊಡುವುದು ಸಾಕಾಗುವುದಿಲ್ಲ. ಇದನ್ನು ಇನ್ನೂ ಕೂಡ ಹೆಚ್ಚಿಸಬೇಕಾಗಿದೆ ಎಂದು ಮಾನ್ಯ ಗೃಹಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಪೋಲೀಸಿನವರು ಹಾಕುವ ಕ್ರಿಮಿನಲ್ ಕೇಸುಗಳಲ್ಲಿ ಅವರು ಮಾಡುವ ಇನ್‌ವೆಸ್ಟಿಗೇಷನ್ ಸಮರ್ಪಕವಾಗಿಲ್ಲದೆ ಇರುವುದರಿಂದ ಮತ್ತು ಅವರು ಕೋರ್ಟಿಗೆ ಕೊಡುವ ಎವಿಡೆನ್ಸ್ ಸಾಕಾಗದೇ ಇರುವುದರಿಂದ ಅನೇಕ ಕ್ರಿಮಿನಲ್ ಮೊಕದ್ದಮೆಗಳು ಕೋರ್ಟುಗಳಲ್ಲಿ ಬಿದ್ದುಹೋಗುತ್ತವೆ. ಆದುದರಿಂದ ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಸಂಬಂಧವಾಗಿ ಪೋಲೀಸ್ ಅಧಿಕಾರಿಗಳಿಗೆ ಇನ್ನೂ ಹೆಚ್ಚಿನ ತರಪೇತಿ ಕೊಡುವಂತೆ ಏರ್ಪಾಡು ಮಾಡುವಂಥಾದ್ದು ಅಗತ್ಯ. ಕ್ರಿಮಿನಲ್ ಕೋರ್ಟುಗಳು ನ್ಯಾಯ ಪರಿಪಾಲನೆಯಲ್ಲಿ ಬಹಳ ಮಹತ್ವದ್ದಾಗಿರುತ್ತವೆ.

ಪೋಲೀಸ್ ಇಲಾಖೆಯಲ್ಲಿ ಪ್ರಮೋಷನ್ ವಿಚಾರದಲ್ಲಿ ಪೋಲೀಸ್ ಅಧಿಕಾರಿಗಳಲ್ಲಿ ಹೆಚ್ಚು ಅಸಮಾಧಾನ ಇರುವ ವಿಷಯ ಮಾನ್ಯಮಂತ್ರಿಗಳಿಗೆ ತಿಳಿದಿರಬಹುದು ಎಂದು ನಾನು ಭಾವಿಸುತ್ತೇನೆ. ಮೊದಲು ಎಕ್ಸೈಜ್ ಡಿಪಾರ್ಟ್‌ಮೆಂಟ್ ಇತ್ತು. ಅದನ್ನು ತೆಗೆದನಂತರ ಪೋಲೀಸ್ ಇಲಾಖೆಯಲ್ಲಿ ಎಕ್ಸೈಜ್ ಇಲಾಖೆಯ ಕೆಲವು ಅಧಿಕಾರಿಗಳು ಸೇರಿದ್ದಾರೆ. ಇದರ ಸೀನಿಯಾರಿಟಿ ಲಿಸ್ಟ್ ಇದುವರೆಗೂ ಮಾಡದೇ ಇರುವುದರಿಂದ ಅನೇಕ ಅಧಿಕಾರಿಗಳು ಹೈಕೋರ್ಟಿಗೆ ಹೋಗಿದ್ದಾರೆ. ಒಂದೆರಡು ರಿಟ್ಸ್ ಕೂಡ ದಾಖಲ್ ಮಾಡಿದ್ದಾರೆ. ಆದರೂ ಅವರಿಗೆ ಇಷ್ಟರವರೆಗೆ ನ್ಯಾಯ ದೊರಕಿಲ್ಲ ಎಂದು ಈ ಸಭೆಯ ಮುಂದೆ ಹೇಳಲಿಕ್ಕೆ ನಾನು ವ್ಯಥೆಪಡುತ್ತೇನೆ. ಈ ಪೋಲೀಸಿನವರಿಗೂ ಕೂಡ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂತೆ ಸರ್ಕಾರದವರು ಅವರಿಗೆ ಅನುಕೂಲತೆಯನ್ನು ಒದಗಿಸಿ ಕೊಡಬೇಕು.

ಎಲ್ಲಾ ಪೋಲೀಸ್ ಸ್ಟೇಷನ್ನಿಗೂ ವಾಹನವನ್ನು ಕೊಟ್ಟರೆ ಅನೇಕ ತಕ್ಸೀರುಗಳ ಸಂಬಂಧವಾಗಿ ಶೀಘ್ರವಾಗಿ ಕೆಲಸ ಮಾಡುವುದಕ್ಕೆ ಅನುಕೂಲ ಸಿಕ್ಕುತ್ತದೆ. ಪೋಲೀಸಿನವರು ಕಾನೂನು ಮತ್ತು ಶಾಂತಿ ಪಾಲನೆಯಲ್ಲಿ ಬಹಳ ದಕ್ಷತೆಯಿಂದ ಕೆಲಸ ಮಾಡದಿರುವುದರಿಂದ ಪ್ರತಿ ವರ್ಷವೂ ಕ್ರಿಮಿನಲ್ ತಕ್ಸೀರುಗಳು ಜಾಸ್ತಿಯಾಗುತ್ತಾ ಇವೆ. ಆಹಾರ ವಸ್ತುಗಳ ಕಳ್ಳಸಾಗಾಟ, ಅದನ್ನು ಕಳ್ಳಸಂತೆಯಲ್ಲಿ ಮಾರುವುದು ಮತ್ತು ಕಳ್ಳ ಸಂಗ್ರಹ ಮಾಡತಕ್ಕಂಥಾದ್ದು ಈ ವಿಷಯದಲ್ಲಿ ಪೋಲೀಸಿನವರು ಇನ್ನೂ ಹೆಚ್ಚಿನ ನಿಗಾ ತೆಗೆದುಕೊಂಡರೆ ಆಹಾರ ಪರಿಸ್ಥಿತಿ ಉತ್ತಮಪಡಿಸಲೂ ಸಹಾಯವಾಗುತ್ತದೆ.

3-30 P.M.

ಕಾಳಸಂತೆಕೋರರ ವಿಷಯದಲ್ಲೂ ಬಹಳ ಎಚ್ಚರಿಕೆಯಿಂದಿರಬೇಕು. ಈಗ ಕೊಲೆ, ಕಳ್ಳತನ, ಮೋಸ ಕೃತ್ಯಗಳು ನಮ್ಮ ರಾಜ್ಯದಲ್ಲಿ ಹೆಚ್ಚಾಗುತ್ತಿವೆ. ಇದಕ್ಕೆ ಮುಖ್ಯವಾಗಿ ನಮ್ಮ ಪೋಲೀಸು ಇಲಾಖೆಯಲ್ಲಿರುವ ಒಂದು ಶಿಥಿಲತೆಯೇ ಮುಖ್ಯ ಕಾರಣ. ಅನೇಕ ಬಾರಿ ತಕ್ಸೀರು ಆಗುವ ವಿಷಯ ತಿಳಿದರೂ ಕೂಡ ಸರಿಯಾದ ಸಮಯದಲ್ಲಿ ಸೂಕ್ತ ಕ್ರಮ ಕೈಕೊಳ್ಳುವುದಿಲ್ಲ. ಸರಿಯಾದ ಸಮಯದಲ್ಲಿ ಯೋಗ್ಯ ಕ್ರಮ ಕೈಕೊಂಡರೆ ಹೆಚ್ಚು ತಕ್ಸೀರುಗಳಿಗೆ ಅವಕಾಶವಿರುವುದಿಲ್ಲ. ಇದು ಎಲ್ಲರಿಗೂ ತಿಳಿದಿರುವ ವಿಷಯ. ಅನೇಕವೇಳೆ ತಕ್ಸೀರುಗಳ ಸಂಬಂಧದಲ್ಲಿ ತಿಂಗಳುಗಟ್ಟಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಇದರಿಂದ ಪೋಲೀಸು ಇಲಾಖೆಗೆ ಗೌರವ ಕಡಮೆಯಾಗುತ್ತದೆ ಮತ್ತು ನ್ಯಾಯಪರಿಪಾಲನೆ ಮಾಡಿದಂತಾಗುವುದಿಲ್ಲ. ಆದುದರಿಂದ ಧೈರ್ಯವಾಗಿ ಪೋಲೀಸಿನವರು ಕೆಲಸಮಾಡಬೇಕು. ಈ ವಿಷಯದಲ್ಲಿ ಮಾನ್ಯ ಗೃಹ ಮಂತ್ರಿಗಳು ಹೆಚ್ಚಾಗಿ ಗಮನಕೊಡಬೇಕು. ಇಲ್ಲದೇ ಹೋದರೆ ಬಹಳ ಅನ್ಯಾಯವಾಗುತ್ತದೆ ಎಂದು ಹೇಳಬಯಸುತ್ತೇನೆ. ಪೋಲೀಸು ಇಲಾಖೆಯವರು ರಾಜಕೀಯ ಕಾರ್ಯಕರ್ತರು ಮತ್ತು ಇತರರನ್ನು ನೋಡುವ ರೀತಿ ಈ ಇಲಾಖೆಗೆ ಒಳ್ಳೆಯ ಹೆಸರನ್ನು ತರುವಂತಿಲ್ಲ. ಅನೇಕವೇಳೆ ಪೋಲೀಸರು ಆಳುವ ಪಕ್ಷದವರ ಒತ್ತಾಯಕ್ಕೊಳಗಾಗಿ ರಾಜಕೀಯ ಮುಖಂಡರಮೇಲೆ ಸೇಡನ್ನು ತೀರಿಸಿಕೊಳ್ಳುತ್ತಾರೆ. ಅವರನ್ನು ಮೂಲೆಗುಂಪು ಮಾಡುತ್ತಾರೆ, ಅಲ್ಲದೆ ಅವರನ್ನು ಜೈಲುಗಳಲ್ಲಿ ನೋಡುವ ರೀತಿ ಸರಿಯಾಗಿಲ್ಲ. ಈ ಸಭೆಯಲ್ಲಿ ಈ ವಿಷಯ ಆಗಲೇ ಪ್ರಸ್ತಾಪಿಸಲ್ಪಟ್ಟಿದೆ. ಅನೇಕ ವೇಳೆ ರಾಜಕೀಯ ಮುಖಂಡರಿಗೆ ಶಿಕ್ಷೆಯಾದಾಗ ಅವರನ್ನು ಜೈಲಿನಲ್ಲಿ 'ಎ' ಕ್ಲಾಸ್‌ನವರಂತೆ ನೋಡಬೇಕೆಂದು ಅರ್ಹರಾಗಿದ್ದರೂ ಕೂಡ ಅವರಿಗೆ ಸರಿಯಾದ ಆಹಾರ ಕೊಡದೆ, ಸೌಕರ್ಯ ಕೊಡದೆ ಹೀನಾಯವಾಗಿ ಕಾಣುತ್ತಾರೆ. **ಹೀಗೆ ಮಾಡುವುದು ಪ್ರಜಾಪ್ರಭುತ್ವಕ್ಕೆ ಗೌರವ ತರುವುದಿಲ್ಲ ಎಂದು ನಾನು ಒತ್ತಿ ಹೇಳುತ್ತೇನೆ.**

ಇನ್ನು ಕೂಲಿಕಾರರ ವಿಷಯ ನೋಡಿದರೆ ಸರಕಾರ ಸರಿಯಾದ ವ್ಯವಸ್ಥೆ ಮಾಡದಿರುವುದರಿಂದ ಅವರ ವರ್ಕಿಂಗ್ ಡೇಸ್ ಹಾಳಾಗುತ್ತಿದೆ. ಅಷ್ಟೇ ಅಲ್ಲ, ಕಾರ್ಮಿಕರ ಮತ್ತು ಕಾರ್ಖಾನೆ ಮಾಲೀಕರ ಸಂಬಂಧ ಸರಿಯಾಗಿರುವುದಿಲ್ಲ. ಅವರಿಬ್ಬರಿಗೆ ಸಂಬಂಧಪಟ್ಟ ಹಾಗೆ ವೈಮನಸ್ಸಿದ್ದರೆ ಕೋರ್ಟಿಗೆ ಅಥವಾ ಕನ್‌ಸಿಲಿಯೇಷನ್ ಕಮಿಟಿಗೆ ಅದನ್ನು ಬೇಗ ಹಾಕಿ ಜಾಗ್ರತೆ ಇತ್ಯರ್ಥ ಮಾಡಲು ಅವಕಾಶಮಾಡಿದರೆ ಒಳ್ಳೆಯದಾಗುತ್ತದೆ ಉತ್ಪತ್ತಿ ಕೂಡ ಹೆಚ್ಚುತ್ತದೆ. ಆಹಾರ ವಸ್ತುಗಳ ಕೊರತೆಯಿರುವುದನ್ನು ನಿವಾರಣೆ ಮಾಡಬೇಕಾದ್ದು ಕೂಡ ಅಗತ್ಯ. ಅನೇಕ ಕಡೆ ಕಾರ್ಖಾನೆಗಳಿಗೆ ಕೂಲಿಕಾರರು ಬಹಳ ದೂರದಿಂದ ಬರುತ್ತಾರೆ, ಅವರಿಗೆ ವಾಹನ ಸೌಕರ್ಯವಿಲ್ಲ, ಅದನ್ನು ಧರ್ಮಾರ್ಥವಾಗೇನೂ ಕೇಳುವುದಿಲ್ಲ. ಅದಕ್ಕೆ ತಗುಲುವ ವೆಚ್ಚವನ್ನು ಕೂಲಿಕಾರರು ವಹಿಸಲು ಸಿದ್ಧರಾಗಿರುತ್ತಾರೆ. ಹಾಗಿದ್ದರೂ ಅವರಿಗೆ ವಾಹನ ಸೌಕರ್ಯವನ್ನೊದಗಿಸಿಲ್ಲ. ಇದನ್ನು ಒದಗಿಸಬೇಕಾಗಿ ಗೃಹ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಎಜುಕೇಟೆಡ್ ಅನ್‌ಎಂಪ್ಲಾಯ್ಡ್ ವಿಚಾರವನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈಗ ಕಾರ್ಖಾನೆಗಳಿಗೆ ಕೂಡ ವಿದ್ಯಾವಂತರೇ ಕೆಲಸಕ್ಕೆ ಬರುತ್ತಿದ್ದಾರೆ. ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ, ಅವರಿಗೆ ಸರಕಾರ ಖಾಸಗಿಯವರಲ್ಲಾಗಲಿ ಅಥವಾ ಸರಕಾರದಲ್ಲಾಗಲಿ ನೌಕರಿ ಒದಗಿಸಲು ವ್ಯವಸ್ಥೆ ಮಾಡಬೇಕು, ಇಲ್ಲದಿದ್ದರೆ ಅವರಿಗೆ ಜೀವನಕ್ಕೆ ಮಾರ್ಗವಿಲ್ಲದೆ ತೊಂದರೆಯಾಗುತ್ತದೆ, ಹೀಗೆ ಮಾಡಬೇಕಾದ್ದು ಎಲ್ಲಾ ಸುಶಿಕ್ಷಿತ ಸರಕಾರಗಳ ಕರ್ತವ್ಯವಾಗಿದೆ. ಇದನ್ನು ನಮ್ಮ ಮೈಸೂರು ಸರಕಾರ ಸರಿಯಾಗಿ ನಿರ್ವಹಿಸಿಲ್ಲ. ಅವರಿಗೆ ಕೆಲಸ ಒದಗಿಸಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕು. ಹಾಗೆ ಮಾಡದಿದ್ದರೆ ಸಮಾಜಕ್ಕೆ ತೊಂದರೆಯಾಗುವುದು. ವಿದ್ಯಾವಂತರಾದವರು ಸುಮ್ಮನಿರುವುದಿಲ್ಲ, ಕೆಲಸವಿಲ್ಲದಿದ್ದರೆ ವಿದ್ಯಾವಂತರು ಅಡ್ಡಮಾರ್ಗವನ್ನು ಹಿಡಿಯುವರು. ನಿರುದ್ಯೋಗಿಗಳಾದ ವಿದ್ಯಾವಂತರು ನಿಷ್ಠೆಯನ್ನು ಕಳೆದುಕೊಂಡು ಜನತೆಗೆ ತೊಂದರೆಯಾಗುವಂತೆ ವರ್ತಿಸುವ ಉದಾಹರಣೆಗಳು ಅನೇಕ ರಾಜ್ಯಗಳ ಇತಿಹಾಸದಲ್ಲಿವೆ. ಆ ರೀತಿ ನಮ್ಮ ದೇಶದಲ್ಲಾಗದ ಹಾಗೆ ನೋಡಿಕೊಂಡು ಅವರಿಗೆ ಯಾವ ಯಾವ ಉದ್ಯೋಗಗಳನ್ನು ಎಲ್ಲಿ ಒದಗಿಸಬಹುದೆಂಬುದನ್ನು ಯೋಚಿಸಬೇಕಾದರೆ ಅದಕ್ಕೊಂದು ಸಮಿತಿ ಮಾಡಿ ವಿದ್ಯಾಭ್ಯಾಸ ಪೂರೈಸಿದ ಕೂಡಲೆ ಆದಷ್ಟು ಬೇಗ ವಿದ್ಯಾವಂತರಿಗೆ ಕೆಲಸಗಳನ್ನು ಒದಗಿಸುವ ಜವಾಬ್ದಾರಿ ಸರಕಾರದಮೇಲಿದೆ.

ಇನ್ನು ಜೈಲುಗಳ ವಿಷಯ. ಜೈಲುಗಳು ಬ್ರಿಟಿಷರ ಕಾಲದಲ್ಲಿ ಹೇಗಿದ್ದವೋ ಹಾಗೆಯೇ ಇವೆ. ಅಲ್ಲಿನ ಆವರಣದಲ್ಲಾಗಲೀ ಅಲ್ಲಿ ಕೊಡುವ ಸೌಕರ್ಯಗಳಲ್ಲಾಗಲಿ ಸುಧಾರಣೆಯಾಗಿಲ್ಲ. ನಿಜವಾಗಿಯೂ ಅಲ್ಲಿ ಕೊಡುವ ಆಹಾರದ ಮಟ್ಟ ಸುಧಾರಿಸಿರುವುದಿಲ್ಲ. ಜೈಲುಗಳಲ್ಲಿ ಖೈದಿಗಳನ್ನು ಬಹಳ ಕಠಿನ ರೀತಿಯಲ್ಲಿ ನೋಡಬಾರದು. ಮುಂದೆ ಖೈದಿಗಳು ಒಳ್ಳೆಯ ನಾಗರೀಕ ಜೀವನ ನಡೆಸುವಂತೆ ಸುಸಂಸ್ಕೃತರಾಗುವಂತೆ ಒಳ್ಳೆಯ ವಾತಾವರಣವನ್ನು ಜೈಲಿನಲ್ಲೊದಗಿಸುವುದು ಅಗತ್ಯವಾಗಿದೆ. ಆ ರೀತಿ ಮಾಡಬೇಕು ಎಂದು ಗೃಹಮಂತ್ರಿಗಳಿಗೆ ಸೂಚಿಸಬಯಸುತ್ತೇನೆ.

ನ್ಯಾಷನಲ್ ಎಮರ್ಜೆನ್ಸಿ ವಿಷಯ ಜರೂರು ಪರಿಸ್ಥಿತಿ ಇದೆಯೆಂದು ಹೇಳಿಕೊಂಡು ಅನೇಕ ಕೆಲಸಗಳನ್ನು ಮುಂದೂಡುತ್ತಿದ್ದಾರೆ, ಈ ಕಾರಣವನ್ನು ಮುಂದು ಮಾಡಿ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳ ಚುನಾವಣೆಯನ್ನು ಮಾಡಿಲ್ಲ. ಕುಂಟು ನೆಪದಿಂದ ಹೀಗೆ ಮಾಡುವುದು ಬಹಳ ವಿಷಾದಕರ. ಬಾರ್ಡರ್ ಪ್ರದೇಶದಲ್ಲಿ ಮಾತ್ರ ಎಮರ್ಜೆನ್ಸಿ ಇದೆಯೆಂದು ಹೇಳಬಹುದೇ ಹೊರತು ಮೈಸೂರು ದೇಶದಲ್ಲಿ ಇದೆಯೆಂದು ಹೇಳಿಕೊಂಡು ಮುಂದುವರೆಸುವುದು ಸರಿಯಲ್ಲ. ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಜರೂರು ಪರಿಸ್ಥಿತಿ ಇರಬಹುದು. 1962ರಲ್ಲಿ ಭಾರತದಲ್ಲೆಲ್ಲಾ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿತ್ತು, ಈಗ ಹೆಚ್ಚಿನ ರಾಜ್ಯಗಳಲ್ಲಿ ಆ ಪಕ್ಷ ಅಧಿಕಾರ ಕಳೆದುಕೊಂಡಿದೆ. ಆದುದರಿಂದಲೇ ಕಾಂಗ್ರೆಸ್ ತನ್ನ ಅಧಿಕಾರವನ್ನು ದುರುಪಯೋಗಮಾಡುತ್ತಿದೆ ಎಂದು ಹೇಳಬೇಕಾಗಿದೆ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಎಮರ್ಜೆನ್ಸಿಯನ್ನು ತೆಗೆದುಹಾಕಿದರೆ ಎಲ್ಲರಿಗೂ ಒಳ್ಳೆಯದಾಗುವುದಲ್ಲದೆ ಪ್ರಜಾಪ್ರಭುತ್ವದ ಹಕ್ಕು ಎಲ್ಲರಿಗೂ ದೊರೆತಂತಾಗುತ್ತದೆ, ಅದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಬಿ. ನಂಜಪ್ಪ (ಗುಂಡಸಿ).—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ರಾಜ್ಯದ ಗೃಹ ಮಂತ್ರಿಗಳು ನಾಲ್ಕು ಬೇಡಿಕೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಈ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಒಂದೆರಡು ಸೂಚನೆಗಳನ್ನು ಕೊಡಬಿಚ್ಛಿಸುತ್ತೇನೆ. ಈ ಬೇಡಿಕೆಗಳಲ್ಲಿ ಮುಖ್ಯವಾದುದು ಪೋಲೀಸು ಇಲಾಖೆಗೆ ಸಂಬಂಧಪಟ್ಟಿದೆ. ಸಾಮಾನ್ಯವಾಗಿ ದೇಶದ ಕಾನೂನನ್ನು ರಕ್ಷಣೆ ಮಾಡುವುದು, ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡುವುದು ಪೋಲೀಸು ಇಲಾಖೆಯ ಮುಖ್ಯ ಕರ್ತವ್ಯ.

(ಶ್ರೀ ಬಿ. ನಂಜಪ್ಪ)

ಆದರೆ ಹಿಂದಿನಿಂದ ಅನೇಕ ಜನ ಅವಿದ್ಯಾವಂತರು ಈ ಇಲಾಖೆಗೆ ಸೇರಿಕೊಂಡಿದ್ದಾರೆ. ಈಗ ಪ್ರಜಾ ಪ್ರಭುತ್ವಕ್ಕನುಗುಣವಾಗಿ ಆಡಳಿತ ನಡೆಸಬೇಕಾದರೆ ಮುಂದೆ ಹೆಚ್ಚು ಹೆಚ್ಚಾಗಿ ವಿದ್ಯಾವಂತರನ್ನು ತೆಗೆದುಕೊಳ್ಳಬೇಕು, ಅದರಲ್ಲೂ ಕೂಡ ಪೋಲೀಸು ಕಾನ್‌ಸ್ಟೇಬಲ್ಲುಗಳಿಗೆ ಒಂದು ಕನಿಷ್ಠ ವಿದ್ಯಾರ್ಹತೆ ಯನ್ನು ನಿಗದಿ ಮಾಡಬೇಕು, ಹಾಗೆಮಾಡಿ ಸರಿಯಾದ ವಿದ್ಯಾರ್ಹತೆ ಇದ್ದವರನ್ನೇ ಆ ಕೆಲಸಕ್ಕೆ ತೆಗೆದು ಕೊಳ್ಳಬೇಕು. ಇದರಿಂದ ಜನರಿಗೆ ಸಹಾಯವಾಗುತ್ತದೆ. ಕಾನೂನು ಮತ್ತು ಶಿಸ್ತನ್ನು ಪರಿಪಾಲನೆ ಮಾಡುವುದಕ್ಕೂ ಅನುಕೂಲವಾಗುತ್ತದೆ. ಇದೇ ಸಂದರ್ಭದಲ್ಲಿ ಪೋಲೀಸು ಇಲಾಖೆ ಕೆಲಸ ಮಾಡು ತ್ತಿರುವ ವಿಷಯದಲ್ಲಿ ಒಂದೆರಡು ವಿಷಯಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಕಾನೂನು ಹಾಗೂ ಶಿಸ್ತನ್ನು ಪರಿಪಾಲನೆ ಮಾಡುವ ಒಂದು ವಿಷಯದಲ್ಲಿ ಇಲಾಖೆಯಲ್ಲಿರುವ ಅಧಿ ಕಾರಿಗಳು ಕೇವಲ ಒಂದು ಸಂಪಾದನೆಯ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾರೆ. ಪಾನನಿರೋಧ ಈ ದೇಶದಲ್ಲಿರುವಾಗ ಇದರ ಕಡೆಗೆ ಹೆಚ್ಚು ಗಮನ ಕೊಟ್ಟು ಇದು ಈ ದೇಶದಲ್ಲಿ ಅತ್ಯುತ್ತಮವಾಗಿ ಜಾರಿಗೆ ಬರುವುದಕ್ಕೆ ಅವಕಾಶವಾಗದೇ ಇರುವ ಹಾಗೆ ಕೆಲಸ ಮಾಡುತ್ತಿದ್ದಾರೆ; ಎಕ್ಸೈಜು ಇಲಾಖೆಯಲ್ಲಿ ಕಳ್ಳಭಟ್ಟಿ ಸಾರಾಯಿ ಹಾಗೂ ಸೇಂದಿಯನ್ನು ಮಾಡುವವರ ಸಂಪರ್ಕ ಪಡೆದು ಕಾನೂನು ಈ ದೇಶದಲ್ಲಿ ಜಾರಿಗೆ ಬಾರದಹಾಗೆ ಮಾಡುತ್ತಿರುವುದನ್ನು ನಾವು ಪ್ರತಿಯೊಂದು ಕಡೆಯಲ್ಲೂ ಈಗ ನೋಡಬಹುದು.

ಇಲ್ಲಿ ಕೆಲವು ಸದಸ್ಯರು ಪಾನನಿರೋಧವನ್ನು ತೆಗೆದುಹಾಕುವುದರಿಂದ ಅವರಿಗೆ ತುಂಬಾ ತೊಂದರೆಯಾಗುತ್ತದೆ ಮತ್ತು ಇದರಿಂದ ಬೇರೆ ತರಹದ ವ್ಯವಹಾರಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದರು. ನಿನ್ನೆ ದಿವಸ ಇಲ್ಲಿ ಮಸೂದೆಯನ್ನು ಚರ್ಚೆಗೆ ತಂದಾಗ ಇದರಿಂದೇನೂ ಅನುಕೂಲವಾಗ ಲಿಲ್ಲ, ಇದನ್ನು ತೆಗೆಯಬೇಕು ಎಂದು ಸೂಚನೆ ಮಾಡಿದರು. ಪಾನನಿರೋಧ ಜಾರಿಯಲ್ಲಿ ಇದ್ದಾಗ ಪೋಲೀಸು ಇಲಾಖೆಯಲ್ಲಿ ಅನೇಕ ಜನರು ಇವಕ್ಕೆ ಸಹಾಯಕವಾಗಿಲ್ಲ ಮತ್ತು ಹೆಚ್ಚು ಉತ್ಪತ್ತಿ ಮಾಡತಕ್ಕ ಇಲಾಖೆಯಾದ ಎಕ್ಸೈಜು ಇಲಾಖೆಯಲ್ಲಿ ಕೂಡ ಈ ಪೋಲೀಸಿನವರು ಸಂಪಾದನೆ ಮಾಡು ತ್ತಿದ್ದರು; ಈಗ ಅದು ಇಲ್ಲದೇ ಹೋಗಿದೆ. ಕೆಲವು ಕಡೆ ಇರುವ ಸಬ್‌ಇನ್ಸ್‌ಪೆಕ್ಟರುಗಳು ಒಂದು ಜಹಗೀರುದಾರರು ವರ್ತಿಸುವಂತೆ ವರ್ತಿಸುತ್ತಿದ್ದಾರೆ. ಒಂದು ಉದಾಹರಣೆಯಾಗಿ ಹೇಳುವು ದಾದರೆ, ಅರಸೀಕೆರೆಯಲ್ಲಿ ಒಬ್ಬರು ಸಬ್ ಇನ್‌ಸ್ಪೆಕ್ಟರ್‌ರವರು ಇದ್ದಾರೆ. ಇವರು ಸಾಮಾನ್ಯವಾಗಿ ಕಾನೂನು ಹಾಗೂ ಶಿಸ್ತು ಪರಿಪಾಲನೆ ಯಾವುದನ್ನೂ ಮಾಡುತ್ತಿಲ್ಲ, ಅದರಲ್ಲಿ ಯಾರಾದರೂ ಒಂದು ಅರ್ಜಿ ಕೊಟ್ಟರೆ ಅದರ ಬಗ್ಗೆ ಕೂಡಲೇ ಎರಡು ಪಾರ್ಟಿಗಳವರ ಕಡೆಯಿಂದಲೂ ಅವರು ಇರುವ ಸ್ಥಳಕ್ಕೆ ಹೋಗಿ ಅವರಿಗೆ ಯಾವ ರೀತಿಯಾದ ವ್ಯವಹಾರಗಳನ್ನು ನಡೆಸಬೇಕು ಎನ್ನುವುದಕ್ಕಾಗಿ ಎರಡು ಕಡೆಯಿಂದಲೂ ಸಂಪಾದನೆ ಮಾಡಿಕೊಂಡು ವ್ಯವಹಾರಗಳನ್ನು ನಡೆಸುತ್ತಿದ್ದಾರೆ. ನಾವು ಇಲ್ಲಿನ ಡಿ.ಎಸ್.ಪಿ. ಯವರಿಗೂ ಕೂಡ ಬರೆದೆವು, ಇಂತಹವರು ಇಲ್ಲದ ವ್ಯವಹಾರಗಳನ್ನು ಮಾಡಿ ಜನರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿದ್ದರೂ ಇವರ ಮೇಲೆ ಯಾವ ಕ್ರಮವನ್ನೂ ತೆಗೆದು ಕೊಳ್ಳಲಿಲ್ಲ ಮತ್ತು ಸುಮಾರು ಮೂರು ತಿಂಗಳಾದರೂ ಕೂಡ ಇವರನ್ನು ಇಲ್ಲೇ ಇನ್ನೂ ಮುಂದುವರಿ ಸುತ್ತಿದ್ದಾರೆ. ಕಾನೂನನ್ನು ರಕ್ಷಣೆ ಮಾಡುವುದಕ್ಕೆ ಬದಲಾಗಿ ಕಾನೂನುಗಳನ್ನು ತಾವೇ ಮುರಿದು ಇಲ್ಲದ ವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಆದುದರಿಂದ ಮಾನ್ಯ ಸಚಿವರು ಈ ವಿಚಾರದಲ್ಲಿ ಸೂಕ್ತವಾದ ಸಲಹೆಗಳನ್ನು ಇಲಾಖೆಯವರಿಗೆ ಕೊಡಬೇಕೆಂದು ಇಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಲೇಬರ್ ವಿಚಾರವಾಗಿ ಅನೇಕ ಮಹನೀಯರು ಇಲ್ಲಿ ಮಾತಾಡಿದ್ದಾರೆ. ಪಟ್ಟಣಗಳಲ್ಲಿ ಇರುವ ಲೇಬರ್‌ಗಳಿಗೆ ಇರುವ ರಕ್ಷಣೆ ಹಳ್ಳಿಗಳಲ್ಲಿ ಇಲ್ಲ, ಪಟ್ಟಣಗಳಲ್ಲಿರುವ ಕಾರ್ಮಿಕರು ಬೇಡುವಂತೆ ಹೆಚ್ಚು ಕೂಲಿ ಇತ್ಯಾದಿಗಳನ್ನು ಬೇಡುವವರು ಹಳ್ಳಿಗಳಲ್ಲಿ ಅತಿ ಸ್ವಲ್ಪ, ಪಟ್ಟಣಗಳಲ್ಲಿರುವ ಕಾರ್ಮಿಕರು ತಮಗೆ ಯಾವ ರೀತಿಯಲ್ಲಿ ವೇತನ ಇರಬೇಕೆನ್ನುವುದನ್ನು ತಿಳಿದಿದ್ದಾರೆ. ಆದರೆ ಹಳ್ಳಿಯ ಜನರು ಅವಿದ್ಯಾವಂತರಾಗಿದ್ದಾರೆ; ಅವರಿಗೆ ಅಷ್ಟು ಅನುಭವ ಇಲ್ಲ; ಅದಕ್ಕಾಗಿ ಅವರಿಗೆ ಸರಿಯಾ ಮಾರ್ಗದರ್ಶನ ನೀಡುವ ರೀತಿಯಲ್ಲಿ ಸರಕಾರ ಸಹಾಯ ಮಾಡಬೇಕು, ಹಳ್ಳಿಗಾಡಿನಲ್ಲಿ ವಿದ್ಯಾವಂತ ರಿಗಿಂತ ಅವಿದ್ಯಾವಂತರ ಸಂಖ್ಯೆಯೇ ಹೆಚ್ಚು. ಇದರಿಂದ ಎರಡು ವಿಧವಾದ ನಿರುದ್ಯೋಗ ಇಲ್ಲಿ ಎದ್ದು ಕಾಣುತ್ತದೆ. ಇದರ ಬಗ್ಗೆ ಸರಕಾರ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ, ಅವಿದ್ಯಾವಂತರಿಗೆ ಸರಿಯಾದ ಕೆಲಸಗಳು ಸಿಗುತ್ತಿಲ್ಲ, ಏನೋ ಕೆಲವರು ಎಸ್.ಎಸ್.ಎಲ್.ಸಿ. ಪಾಸು ಮಾಡಿರುವ ಕೆಲವು ಜನರು ಇರುತ್ತಾರೆ. ಸಾವಿರಾರು ಮಂದಿಗೆ ಹೇಗೆ ವ್ಯವಹಾರ ಮಾಡಬೇಕು ಎನ್ನುವುದೇ ಗೊತ್ತಿಲ್ಲ. ಇದರಿಂದಲೂ ನಿರುದ್ಯೋಗ ಜಾಸ್ತಿಯಾಗಿದೆ. ಸರಕಾರದವರು ವರ್ಷೇ ವರ್ಷೇ ಎಷ್ಟೋ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಸರಿಯಾದ ಒಂದು ವ್ಯವಸ್ಥೆ ಮಾಡ

ಬೇಕು. ಮುಂಜಾಗರೂಕತೆಯ ದೃಷ್ಟಿಯಿಂದ ಒಂದು ಪಟ್ಟಿಯನ್ನು ತಯಾರುಮಾಡಿ, ಯಾರು ಯಾರಿಗೆ ಕೆಲಸಗಳನ್ನು ಒದಗಿಸಿ ಕೊಡಬೇಕು ಎನ್ನುವುದನ್ನು ಯೋಚನೆ ಮಾಡಬೇಕೆಂದು ಸರಕಾರ ದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ರತ್ನಕುಮಾರಶೆಟ್ಟಿ (ಮೂಡಬಿದ್ರಿ).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದ ಕಾರಾಗೃಹಗಳ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ಕಾರಾಗೃಹಗಳು ಇಂದು ಮಾನ್ಯ ಸದಸ್ಯ ರಾದ ಶ್ರೀಮಾನ್ ಶಾಮಣ್ಣನವರು ಹೇಳಿದ ಹಾಗೆ, ಅವರ ಅನುಭವದ ಮೇಲೆ ಬಹಳ ಕೀಳು ಮಟ್ಟದಲ್ಲಿದೆ. ಯಾರಿಗೂ ತೊಂದರೆಯಾಗದಂತೆ ಮತ್ತು ವ್ಯಕ್ತಿಗಳನ್ನು ಒಂದು ಉನ್ನತ ಸ್ಥಾನಕ್ಕೆ ತರುವ ರೀತಿಯಲ್ಲಿ ಈ ಕಾರಾಗೃಹಗಳಿರಬೇಕು. ಈಗ ಇರುವ ಕಾರಾಗೃಹಗಳು ಯಾವ ರೀತಿ ಇವೆ ಎಂದರೆ ಹಿಂದೆ ರಾಜ ಮಹಾರಾಜರುಗಳ ಕಾಲದಲ್ಲಿ ಯಾವ ರೀತಿಯಾಗಿ ಇದ್ದವೋ ಮತ್ತು ಬ್ರಿಟಿಷ್ ಸಾಮ್ರಾಜ್ಯಷಾಹಿಗಳ ಕಾಲದಲ್ಲಿ ಯಾವ ರೀತಿಯಾಗಿ ಜನಗಳಿಗೆ ಏನೂ ಉಪಯೋಗವಿಲ್ಲದಂತೆ ಇದ್ದವೋ ಅದೇ ರೀತಿ ಈಗಲೂ ಇವೆ ಎನ್ನುವುದು ಭಾಸವಾಗುತ್ತದೆ. ಇದರಲ್ಲಿ ಸರಿಯಾದ ಸುಧಾರಣೆಯಾಗಬೇಕು. ಪ್ರಜಾಪ್ರಭುತ್ವದ ಇಂದಿನ ಕಾಲಕ್ಕೆ ಅನುಗುಣವಾಗಿರುವ ಕಾರಾಗೃಹ ಗಳು ಇರಬೇಕು ಎಂದು ಇಲ್ಲಿ ನಾನು ಸರಕಾರಕ್ಕೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಈ ಸಂಬಂಧವಾಗಿ ಸರಿಯಾದ ಅನುಭವ ಪಡೆಯಲು ಮತ್ತು ಕಾರಾಗೃಹಗಳ ವಿಚಾರವಾಗಿ ಪ್ರತ್ಯಕ್ಷ ವಾಗಿ ನೋಡಿ ತಿಳಿಯಲು ಎಲ್ಲ ಮಾನ್ಯ ಸದಸ್ಯರುಗಳನ್ನೂ ಕಾರಾಗೃಹಗಳಿಗೆ ಕರೆದುಕೊಂಡು ಹೋಗಲು ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಜೈಲುಗಳಿಗೆ ಹೋಗಿ ಶಿಕ್ಷೆ ಪಡೆದಿರುವ ಖೈದಿಗಳ ಶಿಕ್ಷೆಗಳನ್ನು ಕಡಿಮೆಮಾಡಬೇಕೆಂದು ನಾನು ಹೇಳುತ್ತಿಲ್ಲ. ಆದರೆ ಅಲ್ಲಿರುವ ಖೈದಿಗಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣ ನೀಡಿ ಮುಂದೆ ಅವರು ಸತ್‌ಪ್ರಜೆಯಾಗಿರುವಂತೆ ಮಾಡಲು ಒಂದು ಕಾರ್ಯಕ್ರಮವನ್ನು ರೂಪಿಸಿ ಅವರಿಗೆ ಸಹಾಯ ಮಾಡಬೇಕು. ನಮ್ಮಲ್ಲಿ ಕುಡಿಯುವವರು ಜೈಲು ಗಳಿಗೆ ಬಂದಾಗ ಅವರ ಆರೋಗ್ಯಕ್ಕೆ ಧಕ್ಕೆ ತಗಲುವ ರೀತಿಯಲ್ಲಿ ಕೆಲಸಮಾಡಬಾರದು. ಅಲ್ಲದೆ ಕಾರಾಗೃಹಗಳಲ್ಲಿ ಈಗ ರಿಮ್ಯಾಂಡ್ ಪಡೆದವರನ್ನು ಇತರ ಖೈದಿಗಳ ಜೊತೆಯಲ್ಲೇ ಇಡುತ್ತಾರೆ. ಶಿಕ್ಷೆ ಪಡೆದು ಅಲ್ಲಿ ಇರುವ ಜನಗಳ ಜೊತೆಯಲ್ಲಿ ರಿಮ್ಯಾಂಡ್ ಪಡೆದವರನ್ನೂ ಇಡಬಾರದು. ರಿಮ್ಯಾಂಡ್ ಪಡೆದವರನ್ನು ಬೇರೆ ಜಾಗಗಳಲ್ಲಿ ಇಡಬೇಕು. ಇಲ್ಲದೇ ಇದ್ದರೆ ಇದರಿಂದ ಸಾಮಾಜಿಕ ಶಾಂತಿಗೆ ಭಂಗ ಬಂದು ಅಶಾಂತಿ ಮೂಡಲು ಕಾರಣವಾಗುತ್ತದೆ. ಸಮಾಜಕ್ಕೆ ಅನುಕೂಲವಾಗು ವಂತಹ ಶಾಂತಿ ರಕ್ಷಣಾ ದಳವನ್ನೂ ನೇಮಕ ಮಾಡಬೇಕೆಂದು ಇಲ್ಲಿ ಹೇಳುತ್ತೇನೆ. ಪೋಲೀಸಿ ನವರಲ್ಲಿ ಈಗ ಸರಿಯಾದ ಶಿಸ್ತು ಇಲ್ಲದೇ ಇರುವುದರಿಂದ ಧರ್ಮದಿಂದ ದೂರವಾಗಿದ್ದಾರೆ, ನ್ಯಾಯದ ವಿಚಾರದಲ್ಲಿ ದೂರವಾಗಿದ್ದಾರೆ, ನೈತಿಕ ವಿಚಾರಗಳಲ್ಲಿ ದೂರವಾಗಿದ್ದಾರೆ. ಯಾವುದಾದರೂ ಒಂದು ಪೋಲೀಸು ಸ್ಟೇಷನ್ನಿಗೆ ಒಬ್ಬ ವ್ಯಕ್ತಿ ಬಂದರೆ ಅವರನ್ನು ಗದರಿಸದೆ ಮಾನವೀಯತೆಯಿಂದ ಹಾಗೂ ನ್ಯಾಯವಾಗಿ ಕೆಲಸಗಳನ್ನು ಮಾಡುವುದನ್ನು ಅವರು ತಿಳಿಯಬೇಕೆಂದು ಹೇಳುತ್ತೇನೆ. ಇವೊತ್ತು ಪೋಲೀಸು ಸ್ಟೇಷನ್ನುಗಳ ಬಗ್ಗೆ ಜನರಲ್ಲಿ ಯಾವ ರೀತಿಯ ಭಾವನೆ ಬಂದಿದೆ ಎಂದರೆ, ಅಲ್ಲಿ ಸರಿಯಾಗಿ ಯಾರನ್ನೂ ವಿಚಾರಣೆ ಮಾಡುವುದಿಲ್ಲ, ಯಾರಾದರೂ ದೂರು ಕೊಟ್ಟರೆ ಅದನ್ನು ಡೈರಿಯಲ್ಲಿ ಬರೆಯು ವಾಗ ಸರಿಯಾದ ಒಂದು ಸೀರಿಯಲ್ ನಂಬರನ್ನು ಕೂಡ ಕೊಡುವುದಿಲ್ಲ ಮತ್ತು ಸರಿಯಾದ ರಿಪೋರ್ಟ್ ಕೂಡ ಬರೆಯುವುದಿಲ್ಲ. ಇದನ್ನು ಸುಧಾರಣೆ ಮಾಡಬೇಕು. ಪೋಲೀಸು ಸ್ಟೇಷನ್ನಿಗೆ ಯಾರಾದರೂ ಬಂದರೆ ಅವರನ್ನು ಹೊಡೆಯುವುದು ಹಾಗೂ ಗದರಿಸುವುದು ಬಹಳ ಅಮಾನುಷವ ಪದ್ಧತಿ ಇದೆ. ಇಲ್ಲಿಗೆ ಬರುವ ವ್ಯಕ್ತಿಗಳ ಬಗ್ಗೆ ಸರಿಯಾಗಿ ನ್ಯಾಯವಾದ ಮಾರ್ಗಗಳಲ್ಲಿ ನಡೆಯಬೇಕೆಂದು ಕಡ್ಡಾಯ ವಾಗಿ ಪೋಲೀಸು ಟ್ರೈನಿಂಗು ಶಾಲೆಗಳಲ್ಲಿ ಕಲಿಸಬೇಕು. ಟ್ರೈನಿಂಗನ್ನು ಕೊಡುವಾಗ ಲೋಕದ ನ್ಯಾಯ ನೀತಿಗಳನ್ನು ಜನರ ಹಿತದೃಷ್ಟಿಗಳನ್ನು ತಿಳಿಯುವಂತೆ ಅವರಿಗೆ ಓದುವ ಪಾಠಗಳನ್ನು ಕಡ್ಡಾಯಮಾಡಿ ಪಠಣ ಮಾಡಿಸಬೇಕು. ಸಮಾಜದಲ್ಲಿ ಯಾವ ರೀತಿಯಾಗಿ ನಡೆಯಬೇಕು, ಜನಸೇವೆ ಯನ್ನು ಯಾವ ರೀತಿ ಮಾಡಬೇಕು, ಮಾರ್ಗದರ್ಶನ ಹೇಗೆ ಮಾಡಬೇಕು ಎನ್ನುವುದನ್ನು ಕಂಪಲ್ಸರಿ ಯಾಗಿ ಟ್ರೈನಿಂಗು ಸ್ಕೂಲುಗಳಲ್ಲಿ ಇರುವಂತೆ ಒತ್ತಾಯಮಾಡಬೇಕೆಂದು ಸರಕಾರಕ್ಕೆ ಸೂಚನೆ ಕೊಡುತ್ತೇನೆ.

ಪೋಲೀಸು ಇಲಾಖೆ ಸರಕಾರಕ್ಕೆ ಸಂಬಂಧಪಟ್ಟ ಇಲಾಖೆ. ಪ್ರೊಹಿಬಿಷನ್ನನ್ನು ತೆಗೆಯಲಾಗಿದೆ ಎಂದು ಜನತೆಗೆ ಸರಿಯಾಗಿ ತಿಳಿಸುವ ಒಂದು ವ್ಯವಸ್ಥೆ ಮಾಡಬೇಕು. ಪ್ರೊಹಿಬಿಶನ್ ಸಡಿಲಪಡಿಸಿದು ದರಿಂದ ಪೋಲೀಸಿನವರ ಉತ್ಪತ್ತಿ ಕಡಿಮೆಯಾಗಿದ್ದು ಅವರಿಗೆ ಆದಾಯಕ್ಕೆ ಧಕ್ಕೆ ಬಂದಿದೆ. ಆದ್ದರಿಂದ ಇಲ್ಲಿರುವ ಇನ್ಸ್‌ಪೆಕ್ಟರುಗಳಿಗೆ ಹಾಗೂ ಸಬ್ ಇನ್ಸ್‌ಪೆಕ್ಟರುಗಳಿಗೆ ಶೇಕಡಾ ಅವರ ವೇತನದ ಐವತ್ತು

(ಶ್ರೀ ಕೆ ರತ್ನಕುಮಾರಶೆಟ್ಟಿ)

ರಷ್ಟು ಹೆಚ್ಚು ಮಾಡಬೇಕು ಮತ್ತು ಇತರ ಅಧಿಕಾರಿಗಳು, ಎಂದರೆ, ಪೋಲೀಸು ಕಾನ್‌ಸ್ಟೇಬಲ್‌ಗಳು, ಹೆಡ್ ಕಾನ್ಸ್‌ಟೇಬಲ್‌ಗಳಿಗೆ ನೂರಕ್ಕೆ ನೂರರಷ್ಟು ವೇತನವನ್ನು ಹೆಚ್ಚು ಮಾಡಬೇಕು ಮತ್ತು ಪೋಲೀಸು ಇಲಾಖೆಯಲ್ಲಿರುವ ಅಧಿಕಾರಿಗಳನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ಕಡ್ಡಾಯವಾಗಿ ವರ್ಗ ಮಾಡಬೇಕು ಮತ್ತು ಕೆಲವು ಪೋಲೀಸು ಅಧಿಕಾರಿಗಳನ್ನು ಅವರುಗಳು ರಿಟೈರು ಆಗುವುದು ಸುಮಾರು ಮೂರು ನಾಲ್ಕು ಅಥವಾ ಐದು ವರ್ಷಗಳಿದ್ದರೆ ಅಂತಹವರನ್ನು ಅವರಿಗೆ ಸಂಬಂಧಪಟ್ಟ ಸ್ಥಳದಲ್ಲೇ ಇರುವಂತೆ ಅವರನ್ನು ಪೋಸ್ಟು ಮಾಡಬೇಕೆಂದು ಸರಕಾರದಲ್ಲಿ ನಾನು ಹೇಳುತ್ತೇನೆ. ಇದು ಮಾತ್ರವಲ್ಲದೆ ಪೋಲೀಸ್ ಇಲಾಖೆ ಇನ್ನೂ ಸ್ವಲ್ಪ ಸುಧಾರಣೆಯಾಗುವಂತೆ ಟ್ರೈನಿಂಗ್ ಕೊಟ್ಟಿರುವ ಲೆಕ್ಚರರ್‌ಗಳನ್ನು ಅಮೇರಿಕಾ ಮತ್ತು ಇಂಗ್ಲೆಂಡ್‌ಗೆ ಕಳುಹಿಸಿ, ಅಲ್ಲಿಯ ಪೋಲೀಸ್ ಇಲಾಖೆಯಲ್ಲಿ ನಡೆಯುವ ಕೆಲಸಗಳ ಬಗ್ಗೆ ಅನುಭವ ಪಡೆಯುವಂತೆ ಏರ್ಪಾಡು ಮಾಡಬೇಕು. ಆ ರೀತಿ ಅನುಭವ ಪಡೆದು ಬಂದರೆ ಪೋಲೀಸ್ ಇಲಾಖೆ ಇನ್ನೂ ಚೆನ್ನಾಗಿ ಕೆಲಸ ಮಾಡಲು ಅವಕಾಶವಾಗುತ್ತದೆ.

ಇನ್ನು ಮುಖ್ಯವಾದ ವಿಚಾರವೆಂದರೆ, ಪೋಲೀಸ್ ಇಲಾಖೆ ಮತ್ತು ಜೈಲ್ ಇಲಾಖೆ ಪ್ರತ್ಯೇಕವಾಗಿ ಇರಬೇಕು. ಈ ಎರಡು ಇಲಾಖೆಗಳಿಗೂ ಯಾವ ತರಹವಾದ ಸಂಬಂಧವಿರಬಾರದು. ಏಕೆಂದರೆ ಜನತೆ ಯಾವುದಾದರೂ ಒಂದು ಅನ್ಯಾಯ ಮಾಡಿದರೆ ಪೋಲೀಸಿನವರು ಕ್ರಮ ತೆಗೆದುಕೊಳ್ಳುತ್ತಾರೆ. ಅದೇ ಪೋಲೀಸಿನವರು ಅನ್ಯಾಯ ಮಾಡಿದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಪೋಲೀಸ್ ಇಲಾಖೆಗೆ ಇರುತ್ತದೆ. ಅದು ಸರಿಯಲ್ಲ ಬೇರೆ ಇಲಾಖೆ ಇರಬೇಕು. ಕೆಲವು ಕಡೆ ಪೋಲೀಸಿನವರು ಡ್ರೆಸ್ ಇಲ್ಲದೆ, ಮಾಮೂಲಿ ವಸ್ತ್ರಗಳನ್ನು ಹಾಕಿಕೊಂಡು ತಿರುಗುತ್ತಿರುತ್ತಾರೆ. ಯಾರು ಅನ್ಯಾಯ ಮಾಡಿದ್ದಾರೆ ಅವರ ಮೇಲೆ ಚಾರ್ಜುಷೀಟ್ ಹಾಕುವುದಿಲ್ಲ. ತಮಗೆ ಬೇಡದವರ ಮೇಲೆ ಚಾರ್ಜುಷೀಟ್ ಹಾಕುತ್ತಾರೆ. ಅವರ ಕಡೆಯುವರು ಮಾಡಿದ ಅಪರಾಧಗಳನ್ನು ಕೇಳುವವರೇ ಇಲ್ಲ. ಆದ್ದರಿಂದ ಪೋಲೀಸಿನವರನ್ನು ನೋಡಿಕೊಳ್ಳಲು ಒಂದು ಪ್ರತ್ಯೇಕವಾದ ಇಲಾಖೆ ಇರಬೇಕೆಂದು ಕೇಳಿಕೊಳ್ಳುತ್ತೇನೆ. ರಿಮ್ಯಾಂಡ್ ಪಡೆದ ಬಂಧಿತರನ್ನು ಪೋಲೀಸರ ವಶಕ್ಕೆ ಬಿಟ್ಟುಕೊಡಬಾರದು. ಅವರನ್ನು ನೋಡಿಕೊಳ್ಳಲು ಪ್ರತ್ಯೇಕವಾದ ಇಲಾಖೆ ಇರಬೇಕು. ಕೆಲವು ಸಾರಿ ಜೈಲಿನಲ್ಲಿರುವ ಖೈದಿಗಳು ವಾರ್ಡನ್ ಅನುಮತಿ ಪಡೆದು ರಾತ್ರಿಹೊತ್ತು ತಮಗೆ ಬೇಕಾದ ಕಡೆ ಹೋಗಿ ಕೆಲಸವನ್ನು ಮುಗಿಸಿಕೊಂಡು ವಾಪಸ್ ಬರುತ್ತಾರೆ. ಇವರು ಬರುವವರೆಗೂ ವಾರ್ಡನ್‌ಗಳು ಕಾದಿರಬೇಕು. ಈ ರೀತಿಯಾಗುವುದಕ್ಕೆ ಅವಕಾಶ ಕೊಡಬಾರದು. ಈ ರೀತಿಯಾಗಿ ಪೋಲೀಸ್ ಇಲಾಖೆಯಲ್ಲಿ ಹಲವಾರು ಸುಧಾರಣೆಗಳು ಆಗಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸಭೆಯ ಮುಂದೆ ಇಟ್ಟಿರುವ ಹಣಕಾಸಿನ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಮಾನ್ಯ ಗೃಹಸಚಿವರ ಗಮನಕ್ಕೆ ತರಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆಯೆಂದು ಭಾವಿಸಿದ್ದೇನೆ. ಈ ಜೈಲುವಾಸದ ವಿಷಯದಲ್ಲಿ ಬಹಳ ಸುಖವಾದ ವಾಸದ ಅನುಕೂಲವಿರಬೇಕೆಂದು ಬಹಳ ಜನ ಸದಸ್ಯರು ಈಗ ಹೇಳಿದ್ದಾರೆ. ಈ ಜೈಲುವಾಸ ಸುಖವಾಗಿ ಇರಬೇಕು ಎಂದು ಹೇಳುವ ಅರ್ಥ ಗೊತ್ತಾಗುವುದಿಲ್ಲ. ಜೈಲು ವಾಸವನ್ನು ಸುಖವಾಗಿ ಇಡುವುದು ಎಂದರೆ, ಎಲ್ಲರೂ ತಪ್ಪು ಮಾಡಿ ಜೈಲಿಗೆ ಹೋಗುವುದಕ್ಕೆ ಇಷ್ಟಪಡಲಿ ಎಂದು ಅರ್ಥವೇನೋ ಗೊತ್ತಿಲ್ಲ. ನಾವು ಸಹ ಜೈಲಿಗೆ ಹೋಗಿದ್ದೇವೆ. ಜೈಲಿನ ವಾಸ ನಮಗೂ ಗೊತ್ತಿದೆ. ಅಲ್ಲಿಯ ಕಷ್ಟ ನೋಡದೆ ಹೊರಗೆ ಹೋದರೆ ಸಾಕು ಎಂದು ನಮಗೆ ಅನ್ನಿಸುತ್ತಿತ್ತು. ಖೈದಿಗಳಿಗೆ ಸುಖವಾದ ಜೀವನವನ್ನು ಒದಗಿಸಬೇಕು ಎಂದರೆ, ಒಳ್ಳೆಯ ಅನುಕೂಲಗಳನ್ನು ಒದಗಿಸಬೇಕು ಎನ್ನುವ ಭಾವನೆ ಬರುವುದರಿಂದ, ಜೈಲಿಗೆ ಹೋಗುವವರಿಗೆ ಉತ್ತೇಜನ ಕೊಟ್ಟಂತೆ ಆಗಬಹುದು. ಜೈಲಿನಲ್ಲಿ ಕಷ್ಟವಿರುವುದು ಒಳ್ಳೆಯದು. ಆದ್ದರಿಂದ ಈ ವಿಷಯದಲ್ಲಿ ಹೆಚ್ಚಿಗೆ ಹೇಳದೆ, ಪೋಲೀಸ್ ಇಲಾಖೆ ವಿಷಯದಲ್ಲಿ ಸಾಕಷ್ಟು ಹೇಳಬೇಕೆಂದಿದ್ದೆ. ಆದರೆ ಕಾಲಾವಕಾಶವಿಲ್ಲ. ಈ ಪೋಲೀಸ್ ಇಲಾಖೆಗೆ ಸ್ವಲ್ಪಮಟ್ಟಿಗೆ ಹಣಕಾಸಿನ ಅನುಕೂಲತೆ ಜಾಸ್ತಿ ಬೇಕಾಗುತ್ತದೆ. ಏಕೆಂದರೆ ಜನರನ್ನು ರಕ್ಷಣೆ ಮಾಡುವಂಥ ಇಲಾಖೆ. ಅವರಿಗೆ ಸಂಬಳ ಜಾಸ್ತಿ ಕೊಡುವುದಕ್ಕೆ ಅವಕಾಶವನ್ನು ಏರ್ಪಡಿಸಬೇಕು. ಏಕೆಂದರೆ ಅವರು ಎಲ್ಲಿಹೋದರೂ 24 ಘಂಟೆಗಳ ಕೆಲಸ ಮಾಡಬೇಕು. ಇಂತಹವರಿಗೆ ಕಡಿಮೆ ಸಂಬಳ ಕೊಡುವುದು ಸರಿಯಲ್ಲ. ಕೆಲವೇ ಘಂಟೆಗಳ ಕೆಲಸ ಮಾಡುವ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಜಾಸ್ತಿ ಸಂಬಳ ಕೊಡುವಾಗ, ಈ ಬಡ ನೌಕರರಿಗೆ ಹೆಚ್ಚು ಸಂಬಳ ಕೊಡುವುದು ಒಳ್ಳೆಯದು. ಇವರ ಕಷ್ಟ ಬಹಳವಾಗಿದೆ.

ಅದರಲ್ಲೂ ಈ ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು. ಈ ಅನುಕೂಲತೆಗಳು ಇಲ್ಲದಿರುವುದರಿಂದ ಇವರು ತಪ್ಪುಮಾರ್ಗಕ್ಕೆ ಹೋಗುವುದಕ್ಕೆ ಅವಕಾಶವಾಗಿದೆಯೆಂದು ನಾನಾದರೂ ಭಾವಿಸುತ್ತೇನೆ. ಹೆಚ್ಚಿನ ಸಂಬಳ ಮತ್ತು ಇತರ ಅನುಕೂಲಗಳನ್ನು ಒದಗಿಸಿಕೊಟ್ಟರೆ ಕೂಡಲೆ ಅವರ ನೀತಿ, ನಡತೆ ಚೆನ್ನಾಗಿರುತ್ತದೆ ಎಂದು ನಂಬುವುದಕ್ಕೆ ನಾನು ಇಷ್ಟಪಡುವುದಿಲ್ಲ. ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಸಾಮಾನ್ಯ ಮನುಷ್ಯ ಎಷ್ಟೇ ತೊಂದರೆಗೆ ಸಿಕ್ಕಿಕೊಂಡಿದ್ದರೂ ಪೋಲೀಸ್ ಸ್ಟೇಷನ್‌ಗೆ ಹೋಗಿ ಮಾತನಾಡುವುದೇ ಕಷ್ಟ. ಹೋಗುವುದೇ ತಡ ಏನಯ್ಯಾ ಎಂಬ ಮಾತೇ ಪ್ರಾರಂಭ. ಹೋದರೂ ಸಹ ಅಧೈರ್ಯದಿಂದ ವಾಪಸ್ ಬಂದು ನಮ್ಮನ್ನು ಕೇಳಿಕೊಳ್ಳುತ್ತಾರೆ. ತಮ್ಮ ಪರವಾಗಿ ಪೋಲೀಸ್ ಸ್ಟೇಷನ್‌ಗೆ ಹೋಗಿ ಮಾತನಾಡಬೇಕೆಂದು ಹೇಳುತ್ತಾರೆ. ಕೆಲವು ಸಾರಿ ನಾನು ಹೋಗಿದ್ದೇನೆ. ಯಾವ ರೀತಿ ಮಾತನಾಡಬೇಕೆಂದು ಅವರಿಗೆ ನಾವೇ ಕೆಲವು ವಿಷಯಗಳನ್ನು ಹೇಳಿಕೊಡಬೇಕಾದ ಸನ್ನಿವೇಶ ಬರುತ್ತದೆ. ಆದ್ದರಿಂದ ಪೋಲೀಸ್ ಇಲಾಖೆಗೆ ನೌಕರರನ್ನು ನೇಮಕ ಮಾಡಿಕೊಳ್ಳುವಾಗ, ಅವರು ಪೋಲೀಸ್ ಇಲಾಖೆಯಲ್ಲಿ ಸರಿಯಾದ ರೀತಿ ಕೆಲಸ ಮಾಡುವ ವ್ಯಕ್ತಿಗಳೇ ಅಲ್ಲವೇ ಎಂಬುದನ್ನು ನೋಡಿ ನೇಮಕ ಮಾಡಿಕೊಳ್ಳಬೇಕು. ಜನರ ಕಷ್ಟಸುಖಗಳನ್ನು ಸರಿಯಾಗಿ ಇವರು ವಿಚಾರಿಸುವಂತಿರಬೇಕು. ಶೃಂಗೇರಿಯಲ್ಲಿ ಮೂರು ವರ್ಷ ಒಬ್ಬರು ಸಬ್ ಇನ್‌ಸ್ಪೆಕ್ಟರಿದ್ದು ನಾವು ಈ ಕಷ್ಟವನ್ನು ಅನುಭವಿಸಿದ್ದೇನೆ. ಮಾನ್ಯ ಗೃಹ ಮಂತ್ರಿಗಳು ತಮ್ಮ ಇಲಾಖೆಯಲ್ಲಿ ತಕರಾರು ಕಡಿಮೆ, ಎಲ್ಲರೂ ಸುಖವಾಗಿ ಕೆಲಸ ಮಾಡುತ್ತಿದ್ದಾರೆಂದು ಭಾವಿಸಿರಬಹುದು. ಪೋಲೀಸ್ ಇಲಾಖೆಯವರ ಮೇಲೆ ಏನಾದರೂ ಬರೆಯುವುದಕ್ಕೆ ಹೆದರಿಕೆಯಾಗುತ್ತದೆ. ಬರೆದ ಕಾಗದ ಅವರ ಕೈಗೆ ಅಕಸ್ಮಾತ್ ಹೋದರೆ ಮುಗಿಯಿತು, ಅಕಸ್ಮಾತ್ ಆ ಮನುಷ್ಯ ಎಷ್ಟೇ ದೊಡ್ಡ ಮನುಷ್ಯನಿರಲಿ, ಉದಾಹರಣೆಗೆ ಹೇಳುವುದಾದರೆ, ನಮ್ಮ ಊರಿನಲ್ಲಿ ಒಬ್ಬ ದೊಡ್ಡ ಮನುಷ್ಯನಿದ್ದಾನೆ, ಅವನಿಗೆ ಕಾರು, ಅಂಗಡಿ ಎಲ್ಲಾ ಇದೆ. ಪೋಲೀಸ್ ಅಧಿಕಾರಿಗಳಿಗೆ ಇವರು ಒಂದು ಸಾರಿ ಕಾರನ್ನು ಕೊಡಲಿಲ್ಲವೆಂದು ಬೇರೆ ಕಾರಣಕ್ಕೆ ಇವರ ಮೇಲೆ ಒಂದು ಹೆಟಿ ಕೇಸನ್ನು ಹಾಕಿದರು. ಅವರು ನನ್ನ ಹತ್ತಿರ ಹೇಳಿಕೊಂಡರು. ಆ ಕೇಸ್ ಈಗಾಗಲೇ ಕೋರ್ಟಿಗೆ ಹೋಗಿದೆ, ಅವರು ಕೋರ್ಟಿಗೆ ಹೋಗಲೇಬೇಕು. ಈ ರೀತಿಯಾದರೆ ಸಾರ್ವಜನಿಕರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ನೋಡಬೇಕು. ಇನ್ನು ಮುಂದೆ ನಮ್ಮ ಗೃಹ ಮಂತ್ರಿಯವರಿಗೆ ಒಂದು ದೊಡ್ಡ ಕಷ್ಟ ಬರುತ್ತದೆ. ಏಕೆಂದರೆ, ನಮ್ಮ ಆರ್ಥಿಕ ಮಂತ್ರಿಗಳು ಇನ್ನು ಮುಂದೆ ಪಾನನಿರೋಧವನ್ನು ತಗೆದುಹಾಕುತ್ತೇವೆಂದು ಹೇಳಿದ್ದಾರೆ. ಇದರಿಂದ ಪೋಲೀಸಿನವರಿಗೆ ಬಹಳ ಉತ್ಪತ್ತಿ ಇತ್ತು. ಇನ್ನು ಮುಂದೆ ಇವರು ಯಾವ ಕಡೆ ತಿರುಗಾಡುತ್ತಾರೋ ಉತ್ಪತ್ತಿಯನ್ನು ಗಿರಿದೂಗಿಸಿಕೊಳ್ಳಲು. ಈಗ ಇವರಿಗೆ ಇದರಿಂದ ಬರುವ ಉತ್ಪತ್ತಿ ಬೇರೆ ಯಾವ ಬಾಬಿನಿಂದಲೂ ಬರುವುದಿಲ್ಲ. ಉದಾಹರಣೆಗೆ, ನರಸಿಂಹರಾಜಪುರದಲ್ಲಿ ಒಬ್ಬ ದಫೇದಾರ ತಿಂಗಳಿಗೆ ಎರಡು ಸಾವಿರ ರೂಪಾಯಿಗಳನ್ನು ಈ ಬಾಬಿನಿಂದ ಸಂಪಾದನೆ ಮಾಡುತ್ತಿದ್ದಾನೆ, ಈಗ ಅವನಿಗೆ ಮಂಗಳೂರಿಗೆ ವರ್ಗವಾಗಿದೆ, ಅದನ್ನು ಕ್ಯಾನ್ಸಲ್ ಮಾಡಿಸಲು ತಮ್ಮ ಹತ್ತಿರಕ್ಕೆ ಬರಬಹುದೆಂದು ನನಗೆ ಒಬ್ಬರು ಪತ್ರ ಬರೆದಿದ್ದಾರೆ. ಮಂಗಳೂರಿನಲ್ಲಿ ಈ ರೀತಿ ಎರಡು ಸಾವಿರ ರೂಪಾಯಿಗಳ ಸಂಪಾದನೆಯಾಗುತ್ತದೋ ಇಲ್ಲವೋ ಎನ್ನುವ ಅನುಮಾನ ಅವನಿಗೆ ಬಂದಿರಬಹುದು. ವ್ಯಾಪಾರ ಕುದುರಬೇಕಾದರೆ ಇನ್ನು ಮುಂದೆ ಪಾನ ನಿರೋಧವನ್ನು ಪೂರ್ತಿಯಾಗಿ ತೆಗೆದುಹಾಕಿದರೆ ಇವರಿಗೆ ಬಹಳ ಕಷ್ಟವಾಗುತ್ತದೆ. ಬೆಂಗಳೂರಿನಲ್ಲಿ ಪಾನನಿರೋಧವನ್ನು ತೆಗೆದುಹಾಕಿರುವುದರಿಂದ, ಪೋಲೀಸಿನವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅವರ ವರ್ತನೆ, ನೀತಿಯನ್ನು ನೋಡಿದರೆ ನನಗೆ ಸಂತೋಷವಾಗುತ್ತದೆ. ಅದೇ ಹಳ್ಳಿಗಳಲ್ಲಿ ಇವರನ್ನು ಮಾತನಾಡಿಸುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ನಮ್ಮ ಗೃಹಸಚಿವರು ಸಾಕಷ್ಟು ಪ್ರವಾಸವನ್ನು ಮಾಡಬೇಕು. ಈ ವಿಚಾರವಾಗಿ ನಾನು ಹೇಳಿದ್ದೇನೆ. ಗೃಹಸಚಿವರ ಪ್ರವಾಸ ಬಹಳ ಕಡಿಮೆ. ಮೇಲಿನ ಅಧಿಕಾರಿಗಳು ಸಹ ಹೆಚ್ಚಾಗಿ ಪ್ರವಾಸ ಮಾಡುತ್ತಿಲ್ಲ. ಡಿ.ಎಸ್.ಪಿ.ಗಳು ಪ್ರವಾಸ ಬಂದರೆ ಸ್ಥಳೀಯ ಮುಖಂಡರಿಗಾಗಲೀ, ಎಂ.ಎಲ್.ಎ.ಗಳಿಗಾಗಲೀ ತಿಳಿಯುವುದೇ ಇಲ್ಲ. ಏನಾದರೂ ಡಿ.ಎಸ್.ಪಿ.ಗಳು ಸ್ಥಳೀಯ ಸಾರ್ವಜನಿಕ ಮುಖಂಡರ ಸಂದರ್ಶನ ಇಟ್ಟುಕೊಂಡರೆ ಸ್ಥಳೀಯ ಅಧಿಕಾರಿಗಳಿಗೆ ಕಷ್ಟವಾಗಬಹುದೆಂದು ಕಾಣುತ್ತದೆ. ಡಿ.ಎಸ್.ಪಿ. ಯವರು ಟೂರ್ ಬರುವುದಕ್ಕೆ ಮುಂಚೆ, ಅವರ ಗುಮಾಸ್ತರು ಬಂದು ಎಲ್ಲವು ರೆಕಾರ್ಡ್‌ಗಳನ್ನು ನೋಡಿ ನೋಟ್ ಮಾಡಿರುತ್ತಾರೆ. ಡಿ.ಎಸ್.ಪಿ.ಯವರು ಬಂದು ಆ ನೋಟ್ ನೋಡಿ ಹೋಗುತ್ತಾರೆ, ಇದನ್ನೇ ಇನ್‌ಸ್ಪೆಕ್ಷನ್ ಎಂದು ಹೇಳುತ್ತಾರೆ. ನಾನು ಹೇಳುವುದೇನೆಂದರೆ ಮಾನ್ಯ ಗೃಹಸಚಿವರೇ ಅನಿರೀಕ್ಷಿತವಾಗಿ ಕೆಲವು ಸ್ಥಳಗಳಿಗೆ ಭೇಟಿ ಇತ್ತು, ಅಲ್ಲಿಯ ಪಿಜನ್‌ಹೋಲ್‌ನಲ್ಲಿರುವ ರಿಜಿಸ್ಟರ್‌ಗಳನ್ನು ಚೆಕ್ ಮಾಡಬೇಕು. ಎಷ್ಟು ಕೇಸ್‌ಗಳು ರಿಜಿಸ್ಟರ್ ಆಗಿವೆ, ಯಾವ ರೀತಿ ತನಿಖೆ ನಡೆಯುತ್ತಿದೆ ಎಂಬುದನ್ನು ವಿಚಾರಮಾಡಬೇಕು.

(ಶ್ರೀ ಕೆ. ಎನ್ ವೀರಪ್ಪಗೌಡ)

ಪೋಲೀಸ್ ಇಲಾಖೆಯಲ್ಲಿ ಸ್ವಲ್ಪಮಟ್ಟಿಗೆ ಆಡಳಿತದಲ್ಲಿ ಬಿಗಿ ತಪ್ಪಿದೆ ಗೃಹಸಚಿವರು ಅನ್ಯಥಾ ಭಾವಿಸಿಕೊಳ್ಳಬಾರದು.

[Mr. Speaker in the chair]

4-00 P.M.

ಇರುವುದನ್ನು ತಮ್ಮ ಮುಂದೆ ಹೇಳುತ್ತಾ ಇದ್ದೇನೆ. ಇದನ್ನು ಧೃಡಪಡಿಸಲಿಕ್ಕೆ ಅನೇಕ ನಿದರ್ಶನಗಳಗ್ನು ಕೊಡಬಹುದು. ನಾನೇ ಕಳೆದ ಫೆಬ್ರವರಿ ಒಂದನೇ ತಾರೀಖು ಒಂದು ಅಪ್ಲಿಕೇಷನ್ ಕೊಟ್ಟೆ, ಕೋರ್ಟಿನ ಮೂಲಕ ಸ್ವಾಧೀನ ಹೊಂದಿರತಕ್ಕ ಜಮೀನು ಮತ್ತು ಜೋಪಡಿ ಎಲೆಕ್ಷನ್ ಟೈಂ ನಲ್ಲಿ ಬೆಂಕಿ ಕೊಟ್ಟು ಸುಟ್ಟು ಹೋಯಿತು, ಇದುವರೆಗೂ ಉತ್ತರ ಬಂದಿಲ್ಲ, ಏನಾಯಿತು ಏನು ಅಂತ ಯಾರೂ ಕೂಡ ಇದುವರೆಗೂ ಕೂಡ ಯಾರನ್ನೂ ಕೇಳಿಲ್ಲ. ಒಂದು ದಿವಸ ರಸ್ತೆಯಲ್ಲಿ ಸಿಕ್ಕಿದಾಗ ಸಬ್ಇನ್ಸ್ಪೆಕ್ಟರ್‌ರವರನ್ನು ಕೇಳಿದೆ. ಅದನ್ನು ತಿಳಿಸ ಬೇಕಾಗಿಲ್ಲ ಎಂದು ಹೇಳಿದರು. ಹಾಗಾದರೆ ಎಲ್ಲಿ ಈ ವಿಷಯವನ್ನು ತಿಳಿದುಕೊಳ್ಳಬೇಕು ಎಂದು ಡಿ.ಎಸ್.ಪಿ. ಅವರನ್ನು ಕೇಳಿದೆ. ಹೀಗೆ ಅನೇಕ ವಿಷಯಗಳು ಇವೆ. ಚುನಾವಣೆಯಲ್ಲಿ ಯಾವ ರೀತಿ ಆಯಿತು ಎಂಬುದನ್ನು ತೆಗೆದುಕೊಳ್ಳಿ. ಪ್ರಚಾರ ಭಾಷಣ ಮಾಡುವುದಕ್ಕೆ 16ನೇ ತಾರೀಖು ಕೊನೆಯ ದಿವಸ ಆಗಿತ್ತು, ಅವತ್ತಿನ ದಿವಸ ವಿಪರೀತ ಜನ ಸೇರಿದ್ದರು, ನಮ್ಮ ಶೃಂಗೇರಿ ಟೌನ್‌ನಲ್ಲಿ ಭಾಷಣ ನಡೆಯುತ್ತಾ ಇತ್ತು; ಆ ಕಾಲದಲ್ಲಿ ದಫೇದಾರರು ನಮ್ಮ ಕಣ್ಣಿಗೆ ಕಾಣಿಸುತ್ತಾ ಇದ್ದರು ಬೇರೆ ಡ್ರೆಸ್ಸಿನಲ್ಲಿ ನನ್ನ ಎದುರಿನಲ್ಲೇ ಇದ್ದರು. ಯಾವಾಗ ಜನಸಂಘ ಮತ್ತು ಇತರ ಪಕ್ಷದವರು ಬಂದರೋ, ಗಲಾಟೆ ಶುರು ವಾಯಿತೋ ಅವರು ನಾಪತ್ತೆ. ಎಲ್ಲಿ ಹುಡುಕಿದರೂ ಕಾಣಲಿಲ್ಲ. ಕಲ್ಲು ಬೀಳುವುದಕ್ಕೆ ಶುರುವಾಯಿತು. ನಾವೆಲ್ಲ ಕಾರಿನ ಮರೆ ನಿಂತೆವು. ಗಲಾಟೆಯನ್ನು ಕಂಟ್ರೋಲ್ ಮಾಡಲಿಕ್ಕೆ ಯಾರಿಗಾದರೂ ಹೇಳೋಣವೆಂದರೆ ಪೋಲೀಸ್ ಸ್ಟೇಷನ್‌ನಲ್ಲಿ ಯಾರೂ ಇಲ್ಲ. ಯಾರಿಗೆ ತಿಳಿಸಬೇಕೆಂದರೆ ಕೊಪ್ಪ ಸ್ಟೇಷನ್‌ಗೆ ತಿಳಿಸಬೇಕಾಯಿತು. ಇಂತಹ ಅನೇಕ ನಿದರ್ಶನಗಳು ಇವೆ. ಕಾಂಗ್ರೆಸ್ ಪಕ್ಷದವರು ಹೇಳಿದರೆ ಏನು ಬೇಕಾದರೂ ಮಾಡುತ್ತಾರೆ ಎಂದು ಕೆಲವರು ಹೇಳುತ್ತಾರೆ, ಚುನಾವಣೆ ಸಮಯ ದಲ್ಲಿ ಕಾಂಗ್ರೆಸ್ ಪಕ್ಷ ಇತರ ಪಕ್ಷ ಅಂತ ಹೇಳಿ ಭಾವನೆ ಮಾಡಬೇಡಿ, ಎಲ್ಲರಿಗೂ ಒಂದೇ. ಆದ್ದರಿಂದ ಈ ವಿಷಯದಲ್ಲಿ ನಿಗಾ ವಹಿಸಬೇಕಾಗುತ್ತದೆ. ಆಗಿಂದಾಗ್ಗೆ ತಾವು ಪ್ರವಾಸ ಇಟ್ಟುಕೊಂಡು ಆಫೀಸು ಗಳಿಗೆ ಭೇಟಿಕೊಟ್ಟು ರೈತರು ಕೊಡತಕ್ಕ ಅರ್ಜಿ ಎಷ್ಟು, ಅವುಗಳ ಮೇಲೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದಾರೆ ಎಂಬುದನ್ನು ವಿಮರ್ಶೆಮಾಡಬೇಕಾದ್ದು ಬಹಳ ಅಗತ್ಯವಿದೆ. ಇನ್ನೂ ಅನೇಕ ವಿಷಯಗಳು ಇವೆ, ಇನ್ನಾವಾಗಲಾದರೂ ಸಮಯ ಸಿಕ್ಕಿದಾಗ ಅವುಗಳನ್ನು ಹೇಳಲು ಅಪೇಕ್ಷಿಸು ತ್ತೇನೆ. ಅಧ್ಯಕ್ಷರು ಕೊಟ್ಟಿರತಕ್ಕ ಇಷ್ಟು ಸಮಯವನ್ನು ಮಾತ್ರ ಉಪಯೋಗಿಸಿಕೊಂಡು, ಅಧ್ಯಕ್ಷ ರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri P. B. NANDIHALI (Uchagaon).—Mr. Speaker, while opposing the Demand relating to the Police Department, I wish to make a few remarks on the working of the Department which has become horrible and has murdered democracy in Mysore and especially in my part, Belgaum. Of course, I must also say that the Government's policy is also responsible for this. This tendency is due to the worst financial difficulties of the officers and other staff in the Department. So, I request the Government to provide all facilities possible to these men, facilities like housing and proper salaries, etc. Secondly the Police Department must be used for preventive measures. Today this Police Department is used after crimes are committed and thefts, murders, dacoits, etc., are committed and the Department is not trying to stop these offences. I request the hon'ble Minister for Home to advise his officers that they should start propaganda of morality in the villages to help preventing corruption, thefts and all those things, so that they can give more or

less moral lessons in the public speeches and by that, they will improve in their own thoughts also. There is no necessity at all for the police force to go in the tours of the Ministers. I take it as an insult to the Government. We are all there to see that our ministers are protected in our constituencies. Today the police force and the C.I.D. are unnecessarily used to investigate and watch the social workers of the opposition parties. This practice must be stopped immediately. In doing this work, the other legitimate work of the police is suffering. The Department must try to prevent cases and crimes. But today unfortunately it seems to me that they are trying to create crimes and cases, for taking to corruption. While I speak on the subject of corruption, I must say that I am surprised to see the types of corruptions that are going on. Last time I went to the Railway Station in Bangalore. A policeman was there and one of the coolies came to me and requested me to give one rupee to get a seat in the train. I was surprised at it. Then that cooly told me that out of that one rupee, eight annas had to be given to the police. So it is for the Government to think seriously what kind of worst things are going on in the State. Investigations also are not done honestly. If a police officer is in financial difficulties, I have seen in my own part of the State, he goes to a village and foists some cases and brings the necessary amounts he wants. There are many cases of murders, thefts, dacoities, etc., which have been proved undetected. I can give the hon'ble Minister facts and figures about the number of thefts of cattle and the actual harassment that is going on. I have written several letters to the Police officer as to how the Beradas come and take away the cattle, but no action is taken. Actually in the villages the Beradas take away the cattle and in the next week they contact the poor farmers and tell them that they would part with the cattle for Rs. 800 if the cattle is worth Rs. 1,000. If the amount demanded by them is paid, the cattle is returned immediately. Such things are happening there. I am purposely bringing this fact to the notice of the Government because great harassment is going on in the border areas. In Dadditthe beradars openly looted the farmers. I do not know what happened. One thief was wounded in that incident and the Police Department is harassing the people in the course of the investigation to find out the man who beat that beradar.

Prohibition Amendment Bill was discussed here for the last two days. The only thing I want to tell the Hon'ble Minister is that illicit liquor is sold and carried with the protection of the Police Department. There should not be any political pressure on the Police Department. Some persons in my part—I do not want to give their names; they are Congress workers and businessmen—are bringing down even the Congress Party. They wear khadi dress because it is respected in the office. The offences of Khadi-dressed offenders are not at all coming to light. They themselves are creating certain offences and they are joining hands with some of the officers. So many instances can be given to prove that when an influential leader came on the scene and the offender was

(SRI P. B. NANDIHALI)

released. What the police officers take into consideration while investigating is whether the offender belongs to the party of the influential leader and if he does not belong to that party then and then alone he starts the investigation. This kind of malpractice must be stopped immediately. The expenditure on the Police Department has increased but unfortunately with the increase in expenditure the Department has completely failed to improve matters; the situation has become worse. The Demand for the Police Department is Rs. 7,50,70,000 and in 1960-61 it was only Rs. 3,36,05,600. It is now double. Taking into consideration the increased expenditure on the Police Department we must expect that the crimes and other offences must come down to 50 per eent. Let us compare the figures for various offences in 1961 and 1966:

	1961	1966
Murders	63	81
Decoities	69	94
House breaking	4,705	6,765
Ordinary theft	8,409	10,683
Cattle theft	771	972

Of course, these figures are from Government records. There are cases which are not investigated or kept in the dark by the usual methods of corruption. I can convince the Hon'ble Home Minister that there is a link between the Police Patel and the high officers in the matter of taking bribes and other malpractices. I know that weekly or monthly compulsory contribution is collected from the offenders and dealers of illicit liquor. The Prohibition Act is the best source of income for the Police Department and if this Act is completely scrapped by the Government, I am sure the Police Department will not help the ruling party in the next election as they helped them in the election of 1967. There are very few persons in the Police Department who are not addicted to drink. I think it is the responsibility of the Hon'ble Home Minister to create efficiency in this Department. Of course, I respect his age and I respect him as my father. But I want to bring to the kind notice of this hon. House that next to the Military, the Police Department is the most important Department in our country. The Home Minister being the chief of the Police Department, he must go from village to village and from police station to police station in disguise without informing them. I want to suggest that he should follow Chatrapathi Sivaji Maharaj. Chatrapathi Shivaji Maharaj was not attending functions; he was going in disguise and taking the opinion of the people, about his officers, rule and even about himself. He used to address the meeting of his officers and advise thence to go on right and moral path to work for the progress of the people and order them and if the orders were not obeyed, the person concerned was immediately dismissed. He used to instruct his officers not to loot or harass the people

even at the time of invasion or when the battle was going on against the Muslims. This was the policy of Chatrapathi Sivaji Maharaj. I remember an incident where he did not even hesitate to arrest his own son and send him to prison when he knew that he was addicted to bad habits. What is happening now ? I cannot reveal all those things it is going on in the light of day and cover of night now for want of time, but I would request the Hon'ble Home Minister to follow Shivaji's ideal methods.

I cannot forget the harassment of the Police Department in my life nor will the Marathi people in the Belgaum part will forget it. The Marathi people of Belgaum have started a peaceful movement for the merger of their part with Maharashtra. The hon. Members on this side were sorry to see the police force here before the Assembly the other day but I was not surprised because myself and my people speaking the Marathi language in my part have always been in police custody as they have started the movement.

I wish to give two or three instances. Once I was working in a school in the construction of the building. I saw so many motor vehicles coming there. More than 200 Police Constables came there along with some 10 or 12 police officers. I came to know that they had come there to arrest me. I told them I would not run away and that I would willingly come, but one of the police officers—it may not be his mistake ; he might have been instructed like that—tried to drag me forcibly. Immediately I showed him my courage and my way of co-operation and I made him ashamed. I placed my hand in his hand and I ran to the van and I sat in the van. This thing did happen. When I reached the Police Station I came to know that it was only investigation of some railway accident. Before my very eyes the police beat a student, a Graduate student, so much that he immidiately agreed that he was the cause of the railway accident. This case happened there before my eyes. When this boy came to a higher officer who had come for this investigation from Bangalore, he let off that boy because he knew that he agreed on the fear of beating. In my case also, the police threatened me like anything, but that Officer from Bangalore let me off. Some poor and innocent people are yet in the police custody without enquiry.

SRI S. D. KOTHAVALE.—Is the case pending in a court of law ?

SRI P. B. NANDIHALI.—Thank you for your guidance. Hereafter I shall not mention here a case which is pending in a court.

MR. SPEAKER.—His time is over and must conclude now.

SRI P. B. NANDIHALI.—I shall conclude in 2 or 3 minutes.

When I was going to Nipani at the time of election, the concerned police officer arrested me and my friends. He took a bond from me that I should maintain peace in Nipani and I should stay there in Nipani only for one day. He harassed me and my friends. But, I came to know through newspapers and also from discussion with some friends of mine in this Hon'ble House and that in Parliament that a friend of mine from this State Mr. Hallikere was harassed in Maharashtra State. I do

(SRI. P. B. NANDIHALI)

agree that such cases should not happen. So, I immediately wrote a letter to the concerned Minister in Maharashtra State and I got information that nothing like that did happen and that it was merely a farce. I came to know that it was all a farce staged by this person because that person had done something wrong here in Mysore State in the Khadi Board and to create sympathy for him he had staged this farce.

Mr. SPEAKER.—Let him please conclude.

Sri P. B. NANDIHALI.—These things must be stopped immediately and the Hon'ble Minister should think in this direction and do the needful.

I wanted to speak about the serious grievances in Jails and Labour, but because there is no time I reserve my remarks for the next occasion.

With these words I thank the Chair.

ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಸನ್ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಕಾರ್ಮಿಕ ಮಂತ್ರಿಯವರು ಬಂದೀಖಾನೆಗಳ, ಪೋಲೀಸ್, ಕಾರ್ಮಿಕ ಮತ್ತು ಉದ್ಯೋಗ ಹಾಗೂ ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಬಗ್ಗೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ, ನಾನು ಈ ವಿಚಾರದಲ್ಲಿ ಕೆಲವು ಮಾತುಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಜೈಲಿನ ವಿಚಾರದಲ್ಲಿ ಮಾನ್ಯ ಮಿತ್ರರನೇಕರು ಈಗಾಗಲೇ ಬಹಳವಾಗಿ ಮಾತನಾಡಿದ್ದಾರೆ. ಇವತ್ತಿನ ದಿವಸ ಆ ಇಲಾಖೆಯಲ್ಲಿ ಜೈಲಿನ ಸುಧಾರಣೆಗಳು ಸರಿಯಾಗಿ ಆಗುತ್ತಿಲ್ಲ ಎಂಬುದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಮುಖ್ಯವಾಗಿ ನನಗಾದರೂ ತಿಳಿದಮಟ್ಟಿಗೆ ಇಲ್ಲಿ 2—3 ಬದಲಾವಣೆಗಳಾಗಬೇಕೆಂಬುದನ್ನು ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ. ಈಗ ಬಾಲ ಅಪರಾಧಿಗಳು ಮತ್ತು ಸ್ತ್ರೀ ಅಪರಾಧಿಗಳು—ಇವರಿಗೆ ಸಾಮಾನ್ಯವಾಗಿ ಎಲ್ಲಾ ಜೈಲಿನಲ್ಲಿರತಕ್ಕ ರೀತಿಯಲ್ಲೇ ವ್ಯವಸ್ಥೆ ಮಾಡುತ್ತಿದ್ದಾರೆ. ಬಾಲ ಅಪರಾಧಿಗಳನ್ನು ಮತ್ತು ಸ್ತ್ರೀ ಅಪರಾಧಿಗಳನ್ನು ಪ್ರತ್ಯೇಕಪಡಿಸಿ, ಅವರವರ ವಯಸ್ಸು, ಮತ್ತು ಅವರವರ ವೈಯಕ್ತಿಕವಾದ ಜೀವನಮಟ್ಟಕ್ಕೆ ತಕ್ಕಂತೆ, ಒಂದು ರೀತಿಯನ್ನು ರೂಪಿಸಿ, ಅವರುಗಳನ್ನು ಉತ್ತಮ ಪ್ರಜೆಗಳಾಗಿ ಮಾಡುವುದಕ್ಕೆ ಸರ್ಕಾರ ಯೋಚಿಸಬೇಕಾದುದು ಅಗತ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗೂ ರಾಜಕೀಯ ಅಪರಾದಿಗಳು ಮತ್ತು ಇತರ ಅಪರಾಧಿಗಳನ್ನು ನೋಡಿಕೊಳ್ಳುವುದಕ್ಕೆ ಸಾಮಾನ್ಯವಾಗಿ ಬೇರೆ ಬೇರೆಯ ವ್ಯವಸ್ಥೆ ಇದೆ. ಹಿಂದಿನ ಕಾಲದಲ್ಲಾದರೂ ರಾಜಕೀಯ ಅಪರಾಧಿಗಳು ಬಹಳ ಉತ್ತಮರಾದವರೆಂದು ಭಾವಿಸಲಾಗಿತ್ತು. ಈಗ ರಾಜಕೀಯ ಖೈದಿಗಳನ್ನು ಬಹಳ ಉಗ್ರವಾಗಿ ಶಿಕ್ಷಿಸಬೇಕು. ಹಿಂದೆ ಪರಕೀಯರು ನಮ್ಮ ದೇಶದಲ್ಲಿ ಇದ್ದಾಗ ನಮ್ಮ ಮುಖಂಡರು ಜೈಲಿನಲ್ಲಿ ಇರುವಾಗ ಅವರನ್ನು ಉತ್ತಮ ತರದಲ್ಲಿ ಟ್ರೀಟ್‌ಮೆಂಟ್ ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದರು. ಅದೇ ತರಹ ಸ್ವರಾಜ್ಯ ಬಂದಂತಹ ಕಾಲದಲ್ಲಿ ಅನೇಕ ಜನ ರಾಜಕೀಯ ಕೈದಿಗಳನ್ನು ಉತ್ತಮ ಮಟ್ಟದಲ್ಲಿ ಪರಿಗಣಿಸಿ, ಉತ್ತಮವಾದ ರೀತಿಯಲ್ಲಿ ಟ್ರೀಟ್‌ಮೆಂಟ್ ಕೊಡುತ್ತಿದ್ದರು. ಅವರು ಎಲ್ಲಕ್ಕಿಂತಲೂ ರಾಜಕೀಯ ಕೈದಿಗಳು ಬಹಳ ಶ್ರೇಷ್ಠರೆಂದು ಭಾವಿಸಿದ್ದರು. ನನಗೆ ಜೈಲಿನ ಅನುಭವ ಸಾಕಷ್ಟು ಇಲ್ಲದಿರುವುದರಿಂದ ಈ ವಿಚಾರದಲ್ಲಿ ಅಗತ್ಯವಾದಂತಹ ಸುಧಾರಣೆಗಳನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಮಾತ್ರ ನಾನು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತಿನ ಪೋಲೀಸ್ ಇಲಾಖೆಗಳಿಂದ ನಗರದಲ್ಲಿರುವ ನಾಗರಿಕರಿಗೆ ಪೋಲೀಸ್ ಸೌಲಭ್ಯ ದೊರೆಯುತ್ತಿದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಡಿಲಿಮಿಟೇಶನ್ ಮಾಡಿದಮೇಲೆ ಪೋಲೀಸ್ ಸಂಖ್ಯೆ ಬಹಳ ಕಡಿಮೆಯಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಆಗತಕ್ಕ ಅಪರಾಧಗಳನ್ನು ಪತ್ತೆ ಹಚ್ಚುವುದಕ್ಕೆ, ಪೋಲೀಸ್ ಸ್ಟೇಷನುಗಳು ದೂರ ದೂರ ಇರುವುದರಿಂದ, ಬಹಳ ಕಷ್ಟವಾಗುತ್ತದೆ. ಇದರಿಂದ ಅಲ್ಲಿಯ ನಾಗರಿಕರು ಈ ವಿಚಾರದಲ್ಲಿ ಹಿಂದುಳಿದಿದ್ದಾರೆಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಹಾಗೆ ಪೋಲೀಸ್ ಇಲಾಖೆಯಲ್ಲಿ ಅಧಿಕಾರಿಗಳು ಉನ್ನತ ಮಟ್ಟದಲ್ಲಿ ಕೆಲಸ ಮಾಡತಕ್ಕಂತದ್ದು ಬಹಳ ಅತ್ಯಾವಶ್ಯಕ. ಆದ್ದರಿಂದ ಅವರುಗಳಿಗೆ ಇವತ್ತಿನ ದಿವಸ ಹುದ್ದೆಗಳಲ್ಲಿ ದೊರೆಯ

ಬೇಕಾದಂತಹ ಪ್ರಮೋಷನ್, ಇಂಕ್ರಿಮೆಂಟ್ ಮೊದಲಾದ ಸೌಲಭ್ಯಗಳು ನಾನಾ ಕಾರಣಗಳಿಗಾಗಿ, ಇಲ್ಲವೇ ಅವರ ಕಾನ್‌ಫಿಡೆನ್ಸಿಯಲ್ ರಿಪೋರ್ಟು ಸರಿಯಾಗಿ ಸಿಗದಿಯಾಗದೆ ಇರುವ ಕಾರಣಗಳಿಂದ ಆಗತಕ್ಕ ಅನ್ಯಾಯಗಳನ್ನು ತಪ್ಪಿಸಬೇಕು; ಮತ್ತು ಸರಿಯಾದ ನ್ಯಾಯ ದೊರಕುವಂತೆ ಸರ್ಕಾರದವರು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅದೇ ರೀತಿ ಮರ್ಡರ್ ಕೇಸುಗಳನ್ನು ಮತ್ತು ಅಪರಾಧಗಳನ್ನು ತನಿಖೆ ಮಾಡುವುದಕ್ಕೆ ಪೋಲೀಸ್ ವಹಿಸಿಕೊಂಡಿರುವ ತನಿಖೆಗಳು ನಿರೀಕ್ಷಿಸಿದ ಮಟ್ಟದಲ್ಲಿ ಆಗುತ್ತಿಲ್ಲ. ಆದ್ದರಿಂದ ಅದು ನಿರೀಕ್ಷಿಸಿದ ಮಟ್ಟದಲ್ಲಿ ನಡೆಯಬೇಕು ಮತ್ತು ದಕ್ಷತೆಯಿಂದ ತನಿಖೆ ನಡೆಸಲು ಇವರಿಗೆ ಪ್ರತ್ಯೇಕವಾಗಿ ಉತ್ತಮವಾದ ಶಿಕ್ಷಣ ಕೊಟ್ಟು ಅವರನ್ನು ಒಂದು ಸ್ಕ್ವಾಡ್ ಎಂದು ಮಾಡಿ, ಅದಕ್ಕೆ ಉನ್ನತ ಹುದ್ದೆಯ ಅಧಿಕಾರಿಗಳನ್ನು ನೇಮಕ ಮಾಡಿ ಅಪರಾಧಿಗಳನ್ನು ನಿರ್ದಾಕ್ಷಿಣ್ಯವಾಗಿ ಪತ್ತೆ ಹಚ್ಚುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೂ ಅನೇಕ ಜನರು ಹೇಳಿದಂತೆ, ನಾಗರಿಕರು ಮತ್ತು ಪೋಲೀಸರು, ಇವರ ಮಧ್ಯೆ ಇರುವ ಸಂಬಂಧ ಸಂಪರ್ಕವು ಕಡಿದು ಹೋಗುತ್ತಿದೆ. ಹೀಗಾಗಬಾರದು. ಇದನ್ನು ಪ್ರಜಾಪ್ರಭುತ್ವ ಯಶಸ್ವಿಯಾಗುವ ಮಟ್ಟಕ್ಕಾದರೂ ತರಬೇಕು. ಜನ ಮತ್ತು ಪೋಲೀಸರ ಸಂಪರ್ಕ ಒಳ್ಳೆಯದಾಗಿರಬೇಕು. ಆದ್ದರಿಂದ ಪೋಲೀಸರೇ ಎಲ್ಲಾ ಮಟ್ಟದಲ್ಲೂ ಸಹಕಾರಿಯಾಗುವಂತೆ, ಒಂದು ನಾಗರಿಕರ ಹಿತರಕ್ಷಣಾ ಸಮಿತಿಯನ್ನು ಮಾಡಿಕೊಂಡು ನಾಗರಿಕರ ಹಿತರಕ್ಷಣೆಗೋಸ್ಕರ, ಅವರ ಸಹಕಾರ ಪಡೆದುಕೊಂಡು ಪೋಲೀಸ್ ಇಲಾಖೆಯವರು ಮತ್ತು ನಾಗರಿಕರ ಸಂಪರ್ಕ ಸುವ್ಯವಸ್ಥಿತವಾಗಿರುವಂತೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಪೋಲೀಸ್ ಇಲಾಖೆಯ ಅಧಿಕಾರಿಗಳಿಗೆ ಶಿಕ್ಷೆ ಮಾಡುವ ಒಂದು ಇಲಾಖೆಯನ್ನು ತೆರೆಯಬೇಕೆಂದು ಕೆಲವರು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ—ಈ ನಾಗರಿಕರ ಹಿತರಕ್ಷಣಾ ಸಮಿತಿಯವರು ಯಾವ ಯಾವ ಮಟ್ಟದಲ್ಲಿ ಪೋಲೀಸ್ ಇಲಾಖೆಯ ದೂರುಗಳನ್ನು ಕೇಳುವುದಕ್ಕೆ ಅವಕಾಶ ಇದೆಯೋ ಅಂಥ ದೂರುಗಳನ್ನು ಸರ್ಕಾರದ ಗಮನಕ್ಕೆ ತರುವಂತೆ ಒಂದು ಕಾನೂನು ಆದರೆ ಬಹಳ ಒಳ್ಳೆಯದು ಎಂದು ನಾನು ಅಭಿಪ್ರಾಯ ಪಡುತ್ತೇನೆ.

4-30 P.M.

ಇನ್ನು ಎರಡನೆಯದಾಗಿ ಕಾರ್ಮಿಕರ ಉದ್ಯೋಗದ ವಿಷಯದಲ್ಲಿ ಹೇಳುವುದಾದರೆ, ಅವರಲ್ಲಿ ನಿರುದ್ಯೋಗ ತುಂಬ ತುಳುಕಾಡುತ್ತದೆ. ನಿರುದ್ಯೋಗಿಗಳಿಗೆ ಕೆಲಸವನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರಿಗೆ ಶಕ್ತಿ ಇಲ್ಲದೆ ಅವರನ್ನು ನಾವು ಹೆಚ್ಚು ಸಂಖ್ಯೆಯಲ್ಲಿ ಕಣ್ಣಾರೆ ಕಾಣುತ್ತಿದ್ದೇವೆ. ಅಂಥ ಒಂದು ಪರಿಸ್ಥಿತಿ ಬಂದಿದೆ. ಇವೊತ್ತಿನ ದಿವಸ ನಮ್ಮ ದೇಶದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಟೆಕ್ನಿಕಲ್ ವಿದ್ಯಾಭ್ಯಾಸವನ್ನು ಪಡೆದಿರತಕ್ಕ, ಎಂದರೆ, ಸಿವಿಲ್ ಇಂಜಿಯರಿಂಗ್ ಮತ್ತು ಎಲೆಕ್ಟ್ರಿಕ್ ಇಂಜಿನಿಯರಿಂಗ್ ಡಿಪ್ಲೋಮಾ ಹೋಲ್ಡರುಗಳು ಸಾವಿರಾರು ಜನ ಕೆಲಸ ಇಲ್ಲದೆ ಸಾಯುತ್ತಿದ್ದಾರೆ. ಈಗಿನ ಸಹಕಾರ ಯುಗದಲ್ಲಿ ಆಯಾಯ ಇಲಾಖೆಗಳಿಗೆ ಹೊಂದಿಕೊಂಡಂತೆ ಒಂದೊಂದು ಸಹಕಾರ ಸಂಘವನ್ನು ಸ್ಥಾಪನೆ ಮಾಡಿ ಅದಕ್ಕೆ ಸರ್ಕಾರದವರು ಹಣವನ್ನು ಒದಗಿಸಿ ಅದರ ಮೂಲಕ ನಿರುದ್ಯೋಗಿಗಳಿಗೆ ಕೆಲಸವನ್ನು ಒದಗಿಸಿ ಶಾಶ್ವತವಾದ ಉದ್ಯಮವನ್ನು ಕೈಕೊಂಡು ದೇಶದ ಅಭ್ಯುದಯಕ್ಕೆ ಹಾಗೂ ಸ್ವಂತ ಜೀವನಕ್ಕೆ ಅನುಕೂಲವಾಗುವ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡಿ ಇದನ್ನು ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆಯಾಗಿ ಕಾರ್ಯರೂಪಕ್ಕೆ ತರಬೇಕು. ಆದರಿಂದ ಅನೇಕರಿಗೆ ಉದ್ಯಮಗಳನ್ನು ಒದಗಿಸಿದರೆ ಬಹಳ ಜನಗಳಿಗೆ ಜೀವನೋಪಾಯಕ್ಕೆ ಅನುಕೂಲವಾಗುತ್ತದೆ, ಮತ್ತು ದೇಶಕ್ಕೂ ಒಳ್ಳೆಯದಾಗುತ್ತದೆ. ಸರ್ಕಾರಿ ನೌಕರಿಯಲ್ಲಿರತಕ್ಕವರ ಮಕ್ಕಳಿಗೆ ಯಾವ ರೀತಿ ವಿದ್ಯಾ ಸೌಕರ್ಯವನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದಾರೆಯೋ ಅದೇ ರೀತಿ ಕೂಲಿಗಾರರ ಮಕ್ಕಳಿಗೂ ವಿದ್ಯಾಭ್ಯಾಸದ ಸೌಕರ್ಯವನ್ನು ಸರ್ಕಾರದವರು ಒದಗಿಸಿಕೊಡಬೇಕು. ಅದು ಸರ್ಕಾರದವರ ಆದ್ಯಕರ್ತವ್ಯ. ಲೇಬರ್ ವೆಲ್‌ಫೇರ್ ಕಮಿಟಿಗಳನ್ನು ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ನೇಮಕ ಮಾಡಿ, ಲೇಬರ್ ವೆಲ್‌ಫೇರ್ ಆಫೀಸರುಗಳನ್ನೆಲ್ಲಾ ಒಂದು ಕಡೆ ಸೇರಿಸಿ ಅವರ ಮೂಲಕ ಎಲ್ಲಾ ಪ್ರದೇಶಗಳಲ್ಲಿಯೂ ಯಾವ ಯಾವ ವಿಧವಾದ ಉದ್ಯಮಗಳಿಗೆ ಎಷ್ಟೆಷ್ಟು ಜನ ಬೇಕು; ಎನ್ನತಕ್ಕಂಥ ಒಂದು ಅಂಕಿ ಅಂಶಗಳನ್ನು ಶೇಖರಣೆ ಮಾಡಿಕೊಂಡು ನಿರುದ್ಯೋಗಿಗಳಿಗೆ ಆ ಉದ್ಯಮಗಳಲ್ಲಿ ಕೆಲಸಗಳನ್ನು ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನ್ಯಾಷನಲ್ ಎಮರ್ಜೆನ್ಸಿ ವಿಷಯದಲ್ಲಿ ಹೇಳುವುದಾದರೆ, ಈಗ ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿ ಇದೆ. ಈಗ ನಮ್ಮ ದೇಶದಲ್ಲಿರುವ ಜನಗಳೇ ದೇಶದ್ರೋಹವನ್ನು ಮಾಡುವುದಕ್ಕೆ ಅನೇಕ ಸಂದರ್ಭಗಳಲ್ಲಿ ತೊಡಗಿದ್ದಾರೆ. ನ್ಯಾಷನಲ್ ಎಮರ್ಜೆನ್ಸಿ ನಮ್ಮ ದೇಶದಲ್ಲಿ ಇನ್ನೂ ಸ್ವಲ್ಪ ಕಾಲ

(ಶ್ರೀ ಬಿ. ಗಂಗಣ್ಣ)

ಮುಂದುವರಿಯುವುದು ಒಳ್ಳೆಯದು. ಅದಕ್ಕೆ ಎಷ್ಟೇ ಹಣವನ್ನು ಖರ್ಚು ಮಾಡಿದರು ಕೂಡ ಅದು ದೇಶದ ಹಿತದೃಷ್ಟಿಯಿಂದ ಬಹಳ ಉತ್ತಮವಾದ ಖರ್ಚು ಎಂದು ನಾನು ಭಾವಿಸುತ್ತೇನೆ. ಕಾನೂನು ಗಳನ್ನು ಭದ್ರಪಡಿಸಿ ದೇಶದ್ರೋಹವನ್ನು ಮಾಡತಕ್ಕವರಿಗೆ ಭಯವನ್ನು ಹುಟ್ಟಿಸಿ ಅದನ್ನು ತಡೆಗಟ್ಟಬೇಕು. ದೇಶದಲ್ಲಿ ಜನಗಳಿಗೆ ತಮ್ಮ ದೇಶವನ್ನು ರಕ್ಷಣೆ ಮಾಡಬೇಕು ಎನ್ನುವ ಮನೋಭಾವನೆಯು ಬೆಳೆಯುವಂತೆ ಮಾಡುವುದು ಅವಶ್ಯಕ. ಇಂಥಾ ಒಂದು ಬಾಬಿಗೆ ಹೆಚ್ಚು ಹಣವನ್ನು ಖರ್ಚು ಮಾಡಿದರೂ ಪರವಾಯಿಲ್ಲ. ಮತ್ತು ಈ ತುರ್ತು ಪರಿಸ್ಥಿತಿ ಇನ್ನೂ ಸ್ವಲ್ಪ ಕಾಲ ಮುಂದುವರಿಯುವುದು ಒಳ್ಳೆಯದು ಎಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†SRI S. S. SHETTAR (Hubli).—Mr. Speaker, Sir, the police is an instrument in the hands of the society ; it is not an instrument against the society. This instrument can be exploited by the State, no doubt. But, there is some defect in the present arrangement and what we see is that in some respects this instrument has been misused. No doubt, the present pay structure of the lowest officials is undesirable. It is not worthwhile merely to accuse the police officials that they are corrupt. In order to eradicate this corruption, it is desirable that they should be paid a decent salary and then to expect good work from them. The strength of the police force is also too meagre. The duty that is assigned, the present requirement of the society, needs that the force is to be increased.

As regards the need of the Hubli-Dharwar Corporation and Dharwar District, I need say that just like in Bangalore City Corporation we also require the administration of a Police Commissioner, because when this City has been developed into a Corporation, many complications have developed, and therefore, we need this administration in Hubli-Dharwar Corporation.

Regarding the labour problem, I have to bring to the notice of the Hon'ble Minister that the agricultural labour have been neglected by our Government in almost all the fields. Child exploitation is there, exploitation of the labour is continuing, the factory employers are almost committing a breach of all the labour laws, but no effective steps have been taken by the Government to prevent this. If the labourers are neglected, I feel, Sir, that what is happening today in Naxalbari may happen here also and the problem will go to the Ministry. So, we have to be more careful about this problem. I have an information that in Bangalore City Corporation itself the I. N. T. U. C. organisation has been swept away and so many bad elements have crept in, and those elements have grown because the labour laws have not been properly protected. There is one problem of unorganised labourers. Supposing there is a Labour Union. They can collectively bargain their demands. But, there are some Clerks, some domestic servants, who could not organise themselves. You have to protect them. You have to see whether they are working only for 8 hours, whether they are exploited and whether a child is exploited and compelled to work. If you do not look to all these details and if they feel that they are exploited, a day will come when a

strong allegation will be levelled against you, and the Police officials will not be able to solve this problem. Therefore, my humble request to you is that you have to take proper care of these things.

As regards the Jail administration, of course, there are so many complaints about the food, health, etc. But, one important aspect is that the mental faculty of the criminals will have to be developed and moral lectures should be arranged for the criminals. In this respect the Government is failing. Whatever may be the food served, whether it is bad or good, when the criminal comes out of the Jail he must realise that the Jail is not a good place, and that he made a mistake in committing a crime and he should not once again repeat this mistake. This mental faculty should be developed; Jail must be a place where he could correct himself, correct his whole life. But, the present Jail is a miserable place. The criminal is not corrected there; like a spider he falls in the same ditch.

With these suggestions, I thank you.

ಶ್ರೀ ಎಂ. ಜಿ. ಬಣಕಾರ (ಬ್ಯಾಡಗಿ).—ಮಾನ್ಯ ಸಭಾಧ್ಯಕ್ಷರೇ, ಕಳೆದ ವರ್ಷಕ್ಕಿಂತ ಈ ವರ್ಷ ನೂರಕ್ಕೆ ನೂರು ಪಟ್ಟು ಹೆಚ್ಚುವರಿ ಬೇಡಿಕೆಯನ್ನು ಸಭೆಯು ಮುಂದೆ ಇಟ್ಟಂಥ ಈ ಗೃಹ ಶಾಖೆಯು ಡಿಮ್ಯಾಂಡನ್ನು ನಾನು ಹಾರ್ದಿಕವಾಗಿ ವಿರೋಧಿಸುತ್ತಾ, ಕೆಲವು ವಿಷಯಗಳನ್ನು ಗೃಹಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ನಾನು ಈ ಪೋಲಿಸು ಇಲಾಖೆ ಬಗ್ಗೆ ಆಸಕ್ತಿ ವಹಿಸಿದಂದಿನಿಂದ ಅಂದರೆ, ಸಾಮಾನ್ಯವಾಗಿ ಬೆಂಗಳೂರಿನಲ್ಲಿ ನಡೆದ ಬೇಲೂರು ಶ್ರೀನಿವಾಸ ಐಯಂಗಾರರ ಕೊಲೆ ಮೊಕದ್ದಮೆ ಪ್ರಕರಣದಿಂದೀಚೆ ನೋಡಿದರೆ ವಿಚಾರಣೆ ಮಾಡುವುದರಲ್ಲಿ, ತನಿಖೆ ಮಾಡುವುದರಲ್ಲಿ ಸಕ್ರಮವಾಗಿ ವ್ಯವಹರಿಸುವಲ್ಲಿ ಪೋಲೀಸರು ಹೈಗೈ ಮಾಡುತ್ತಿದ್ದಾರೆ. ಪೋಲೀಸರು ಕೊಲೆ ಪ್ರಕರಣವನ್ನು ತನಿಖೆ ಮಾಡುವುದಕ್ಕಿಂತ ಮದ್ರಾಸಿನಿಂದ ಕರೆದುಕೊಂಡು ಬಂದ ನಾಯಿಗಳು ತೋರಿಸಿದ ಜಾಣ್ಮೆಯನ್ನು ನಮ್ಮ ಪೋಲೀಸ್ ಇಲಾಖೆ ಈವರೆಗೆ ತೋರಿಸಿಲ್ಲವೆಂಬ ಬಗ್ಗೆ ಸಖೇದಾಶ್ಚರ್ಯವನ್ನು ವ್ಯಕ್ತಪಡಿಸಿ— ಈ ಬಗ್ಗೆ ವಿಷಾದಿಸುತ್ತೇನೆ. ಆಡಳಿತ ಪಕ್ಷದವರು ಪೋಲಿಸ್ ಇಲಾಖೆಯನ್ನು ಜನರ ಹಿತ ಸಾಧನೆಗೆ, ಹಾಗೂ ಸಮಾಜ ಸುವ್ಯವಸ್ಥೆಗಾಗಿ ಬಳಸುತ್ತಿಲ್ಲ, ಮತ್ತು ಜನತೆಯ ಶಾಂತಿ ಕಾಪಾಡಿಕೊಂಡು ನಾಗರೀಕರ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಂಡು ಬರುವುದರ ಬದಲು ನೇರವಾಗಿ ಅವರು ತಮ್ಮ ಹಿತ ಸಾಧನೆ, ತಮ್ಮ ಪಕ್ಷದ ಹಿತ ಸಾಧನೆ ಮಾಡಿ ಕೊಳ್ಳುತ್ತಿದ್ದಾರೆ. ಇದಲ್ಲದೆ ಮಂತ್ರಿಗಳ ಭಾಷಣ ಕಾಲದಲ್ಲಿ ಪ್ರತಿಭಟಿಸುವ ಜನರನ್ನು ತುಳಿಯು ವುದಕ್ಕೆ, ವಿದ್ಯಾರ್ಥಿಗಳು ಫೀಜ್ ಕಡಿಮೆ ಮಾಡಿ ಎಂದು ಮೆರವಣಿಗೆ ತೆಗೆದರೆ ಅವರನ್ನು ಸದೆ ಬಡೆಯುವುದಕ್ಕೆ, ಜನರು ಅನ್ನ ಕೊಡಿ ಎಂದು ಕೇಳುವುದಕ್ಕೆ ಹೋದರೆ ಅಂಥವರನ್ನು ಬಗ್ಗು ಬಡಿಯುವುದಕ್ಕೆ ಪೋಲೀಸ್ ಇಲಾಖೆಯನ್ನು ಆಡಳಿತ ಪಕ್ಷದವರು ಉಪಯೋಗಿಸುತ್ತಿದ್ದಾರೆ. ಜನತೆಯ ಹಕ್ಕು ಬಾಧ್ಯತೆಗಳನ್ನು ಕಾಪಾಡುವುದಕ್ಕೆ ಸುವ್ಯವಸ್ಥೆಯನ್ನು ನೆಲಗೊಳಿಸುವುದಕ್ಕೆ ಆಡಳಿತ ಪಕ್ಷ ಪೋಲೀಸ ಇಲಾಖೆಯನ್ನು ಬಳಸುತ್ತಿಲ್ಲ ಎಂದು ಧೈರ್ಯದಿಂದ ಹೇಳಬಯಸುತ್ತೇನೆ. ಪೋಲೀಸ್ ಇಲಾಖೆಯಲ್ಲಿ ದಕ್ಷತೆ ನಿರ್ನಾಮವಾಗಿದೆ. ಹಾವೇರಿಯಲ್ಲಿ ನಡೆದ ಬಂಗಾರ ಕಳವಿನ ಕೇಸು ಇದಕ್ಕೆ ನಿಚ್ಚಳ ನಿದರ್ಶನವಾಗಿದೆ. ಪೋಲೀಸ್ ಸ್ಟೇಷನ್ನಿನಲ್ಲಿ ಭದ್ರವಾಗಿ ಇಡಲ್ಪಟ್ಟಂಥ "ಜಪ್ತಿ" ಬಂಗಾರ ಮಾಯವಾಗಿ ಅಲ್ಲಿ ಅದು ಕಬ್ಬಿಣವಾಯಿತು. ಬಂಗಾರ ಹೋಗಿ ಕಬ್ಬಿಣ ಬಂದಿತು. ಆದರೆ ಕಬ್ಬಿಣ ಪುನಃ ಬಂಗಾರವಾಗಲಿಲ್ಲ. ಇದರ ಅರ್ಥ ಏನು ಎಂದು ಗೃಹಮಂತ್ರಿ ಗಳನ್ನು ಕೇಳುತ್ತೇನೆ. ಪೋಲೀಸ್ ಸ್ಟೇಷನ್ನಿನ ರಕ್ಷಣಾ ಕವಚದಲ್ಲಿ ಇಡಲ್ಪಟ್ಟ ಬಂಗಾರ ಮಾಯ ವಾಗುತ್ತದೆ ಅದರ ಬದಲು ಅಲ್ಲಿ ಕಬ್ಬಿಣ ಬರುತ್ತದೆ ಎಂದರೆ ನಿಮಗೆ ನಾಚಿಗೆಯಾಗುವುದಿಲ್ಲವೇ? ನಿಜವಾಗಿಯೂ ಆಡಳಿತ ಮಾಡತಕ್ಕಂಥವರಿಗೆ ಶಕ್ತಿ ಇಲ್ಲ ಎಂದು ತಿಳಿದುಬರುತ್ತದೆ. ಖಂಡಿತವಾಗಿ ಮಾನ್ಯ ರಾಮರಾಯರು ಗೃಹ ಮಂತ್ರಿಗಳಾಗಿ ಇರುವುದಕ್ಕೆ ಯೋಗ್ಯರಲ್ಲ ಎಂದು ಘಂಟಾಘೋಷ ವಾಗಿ ಹೇಳುತ್ತೇನೆ. ಅದೇ ರೀತಿ ನಮ್ಮ ರಾಜ್ಯದ ಗಡಿ ರಕ್ಷಣೆಯನ್ನು ಸರಿಯಾಗಿ ಮಾಡದೆ ಇರುವುದರಿಂದ ಬೆಳಗಾಂವ ಕಾರವಾರ ನಿಪ್ಪಾಣಿ ಮೊದಲಾದ ಗಡಿ ಪ್ರದೇಶದಲ್ಲಿರುವ ಆರು ಲಕ್ಷ ಜನ ಕನ್ನಡಿಗರ ಜೀವನ ಭಯಗ್ರಸ್ಥವಾಗಿದೆ. ಆ ಜನತೆಯ ರಕ್ಷಣೆ ಮಾಡಿ ದೇಶದ ಮಾನವನ್ನು ಉಳಿಸಿರೆಂದು ಚಳವಳಿ ಮಾಡಿದ್ದವರಿಗೆ ಗುಂಡು ಹಾಕಿಸಿದಿರಿ. ಆದರೆ ಅನೀತಿಯಿಂದ ನಡೆಯ ತಕ್ಕವರನ್ನು ದಂಡಿಸುವುದಕ್ಕೆ ಈ ಡಿಪಾರ್ಟ್‌ಮೆಂಟಿನಿಂದ ಆಗುತ್ತಿಲ್ಲ. ಇಂಥ ಮೇಲಿನ

(ಶ್ರೀ ಎಂ. ಜಿ. ಬಣಕಾರ)

ಡಿಪಾರ್ಟ್‌ಮೆಂಟಿಗೆ ಹಿಂದಿನ ವರ್ಷ 3 ಕೋಟಿ ಬೇಡಿಕೆ ಇದ್ದುದನ್ನು ಈ ವರ್ಷ 7 ಕೋಟಿ ಮಾಡಲಾಗಿದೆ. 7 ಕೋಟಿ ಕೊಡುವುದಾಕ್ಕಾಗುವುದಿಲ್ಲ. ಏಳು ಕೋಟಿ ಕೊಡಲಿಲ್ಲ ಮೈಲಾರಲಿಂಗನ ಶನಿ ಬಗೆಹರಿಯಲಿಲ್ಲ ಎಂದು ಹೇಳುವ ಹಾಗೆ ಆಗಿದೆ. ಇನ್ನೊಂದು ಮಾತನ್ನು ಅವರಿಗೆ ಕೇಳುತ್ತೇನೆ. ದಾವಣಗೆರೆಯಲ್ಲಿ ಒಬ್ಬ ಪತ್ರಕರ್ತನು ಕೆಲವು ಕಾಂಗ್ರೆಸ್ ಮುಖಂಡರ ಮೇಲೆ ಅಪವಾದಾತ್ಮಕ ಟೀಕೆ ಮಾಡಿದ್ದಾನೆಂಬ ನೆಪದಿಂದ ಅವನನ್ನು ಹೊಡೆದು ಅವಮಾನಗೊಳಿಸಿದಲ್ಲದೆ ನಾಯಿಯಂತೆ ದರದರ ರಸ್ತೆಯ ಮೇಲೆ ಎಳೆದುಕೊಂಡು ಹೋಗಿ ಬೇಲಿಯಲ್ಲಿ ಬೀಸಾಕಿದ್ದರು. ಆಗ ಸ್ವತಃ ಚಾಂಡಿಯವರು ಬಂದು ಇನ್‌ವೆಸ್ಟಿಗೇಶನ್ ಮಾಡಿದರು. ಇದರ ಬಗ್ಗೆ ಯಾರ ಮೇಲೆ ಕ್ರಮ ತೆಗೆದುಕೊಂಡಿರಿ ?

[MR. CHAIRMAN (Sri S. D. KOTHAVALE) in the Chair]

ಈ ಪ್ರಶ್ನೆ ಮುಂದೆ ಬರಲಿಲ್ಲ. ಎಲ್ಲ ಪೋಲೀಸ್ ಆಫೀಸರುಗಳು ಕಾಂಗ್ರೆಸ್ ಮುಖಂಡರ ಕೈವಾರಿಗಳಾಗಿದ್ದಾರೆ. ಅಸಮರ್ಥ ಆಡಳಿತಕ್ಕೆ ಮುಖಂಡರೇ ಕಾರಣರಾಗಿದ್ದಾರೆ. ಇದು ನನ್ನ ಅನುಭವಕ್ಕೆ ಬಂದ ಮಾತು. ಚಿತ್ರದುರ್ಗದಲ್ಲಿ ಹಿಂದೆ ಒಬ್ಬ ಡಿ. ಎಸ್. ಪಿ.ಯವರು ಮತ್ತು ಮುಖ್ಯ ಮಂತ್ರಿಗಳ ಖಾಸ ಅಳಿಯಂದಿರು ಹಾಗೂ ತಹಶೀಲದಾರರು ಸೇರಿ ಚಿತ್ರದುರ್ಗ ಟಿ. ಬಿ. ಯಲ್ಲಿ ಬ್ರಾಂದಿ ಕುಡಿಯುತ್ತಿದ್ದಾಗ ಆಗಿನ ಪೋಲೀಸ್ ಅಧಿಕಾರಿಯೊಬ್ಬರು ಅವರ ಮೇಲೆ ಕೇಸ್ ಹಾಕಿದರು. ಆದರೆ ಕರ್ತವ್ಯ ಪಾಲಿಸಿದ ಅಧಿಕಾರಿ, ಏಳೇಳು ಜನ್ಮದಲ್ಲಿಯೂ ನ್ಯಾಯವಾಗಿ ನಡೆಯುವವನಿಗೆ ಬೆಲೆಯಿಲ್ಲ. ಈ ರಾಜ್ಯದಲ್ಲಿ ಸ್ಥಾನವಿಲ್ಲ, ಎಂದು ಪಶ್ಚಾತಾಪಪಟ್ಟನೇ ವಿನಃ ಪ್ರೋತ್ಸಾಹಿತನಾಗಲಿಲ್ಲ. ನಿಮ್ಮ ಆಡಳಿತೆಯಲ್ಲಿ ಅನೇಕರಿಗೆ ಇಂಥ ಅನುಭವಗಳು ಬರುತ್ತವೆ. ಅನೇಕ ಕಡೆ ಇಂಥ ಘಟನೆಗಳು ನಡೆಯುತ್ತವೆ.

Sri ALLAM KARIBASAPPA (Karugod).—Point of Order, Sir. The Hon'ble member said the Son-in-law of the Chief Minister drank brandy in T. B. I want to know whether the present Chief Minister was Chief Minister then.

ಶ್ರೀ ಎಂ. ಜಿ. ಬಣಕಾರ.—ಇವತ್ತಿನ ಮುಖ್ಯಮಂತ್ರಿಗಳು.

Mr. CHAIRMAN.—It may be a factual error. There is no point of order. The Hon'ble member may continue.

ಶ್ರೀ ಎಂ. ಜಿ. ಬಣಕಾರ.—ಇಂದಿನ ಮುಖ್ಯ ಮಂತ್ರಿಗಳ ಅಳಿಯಂದಿರು ಈ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳ ಮೇಲೆ ಮುಖಂಡರ ಮುಖಾಂತರ ಏನು ಬೇಕೋ ಅದನ್ನು ಮಾಡಿದರು. ದಕ್ಷತೆ ತೋರಿಸಿದ ಪೋಲೀಸ್ ಅಧಿಕಾರಿಗೆ ಶಹಬ್ಬಾಸಗಿರಿ ದೊರೆಯಲಿಲ್ಲ. ಇಂಥ ಅನ್ಯಾಯ ಇಂದು ದೇಶದಲ್ಲಿ ಎಲ್ಲಿ ನೋಡಿದಲ್ಲಿ ನಡೆಯುತ್ತಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸಿರಿಗೆರೆ ಇದೊಂದು ಮುಖ್ಯವಾದ ವಿದ್ಯಾ ಕೇಂದ್ರವಾಗಿದೆ. ಧರ್ಮದ ಸುಕ್ಷೇತ್ರವಾಗಿದೆ. ಅಲ್ಲಿ ಜವಾಬ್ದಾರಿ ಸ್ಥಾನದಲ್ಲಿರ ತಕ್ಕಂಥ ಸ್ವಾಮಿಗಳ ಮೇಲೆ ಅಪವಾದ ಕೊಡಬೇಕು, ಅವರ ಧವಳ ಕೀರ್ತಿಯನ್ನು ಕಬಳಿಸಬೇಕೆಂದು ಕೆಲವು ಪೋಲೀಸ್ ಸಿಬ್ಬಂದಿಯನ್ನು ಮೈಸೂರು ರಾಜ್ಯ ಸರಕಾರ ಅಲ್ಲಿ ಇಟ್ಟಿದೆ. ಅಲ್ಲಿರುವ ಒಬ್ಬ ದಫೇದಾರನು ನೇರವಾಗಿ ಮುಖಂಡರ ಕೈವಾಡದಿಂದ ಬಹಳ ಅನ್ಯಾಯ ಮಾಡುತ್ತಿದ್ದಾನೆಂದು ನನ್ನ ಸ್ನೇಹಿತರು ಈ ವಿಧಾನಸಭೆಯಲ್ಲಿ ಕೂಡ ಹೇಳಿದರು. ಇದು ಮಾನ್ಯ ಗೃಹ ಸಚಿವರ ಗಮನಕ್ಕೆ ಬಂದಿದೆಯೇ ? ಸಿರಿಗೆರೆಯಲ್ಲಿ ಯಾರು ಕೊಳ್ಳೆ ಹೊಡೆದಿದ್ದಾರೆ ? ಅವರಿಂದ ದೇಶಕ್ಕೆ ಯಾವ ವಿಪತ್ತು ಬಂದಿದೆ ? ಅಲ್ಲಿ ಯಾರ ಕೊಲೆ ಸುಲಿಗೆ ನಡೆದಿದೆ ? ಯಾವ ಕಾರಣದಿಂದ ಅಲ್ಲಿ ಪುಂಡಗಂದಾಯವನ್ನು ಆಕರಣೆ ಮಾಡುವ ಸೂಚನೆ ಮಾಡಿದ್ದೀರಿ ? ರಾಜ್ಯದಲ್ಲಿಯ ಶಾಂತಿಗೆ ಭಂಗ ತರತಕ್ಕಂಥ ದುರಾಡಳಿತ ನಡೆಸತಕ್ಕಂಥ ಪುಂಡ ಕಂದಾಯ ಹಾಕತಕ್ಕಂಥ ಈ ಇಲಾಖೆಯ ಡಿಮ್ಯಾಂಡನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಇಂದು ಜನತೆ ಜಾಗೃತವಾಗಿದೆ. ಬಡವರ ಆಸ್ತಿಪಾಸ್ತಿ ಯೋಗಕ್ಷೇಮ ನೋಡಿಕೊಳ್ಳುವುದಕ್ಕಾಗಿ ಈ ಪೋಲೀಸ್ ಸಿಬ್ಬಂದಿ ಇರುವುದು. ಜನತೆಯ ಹಾಗೂ ಸಮಾಜದ ಸುಭದ್ರತೆಗೆ ಪೋಲೀಸ್ ಇಲಾಖೆ ಇರುವುದು. ಆದರೆ ಇಂದು ದುರ್ದೈವದಿಂದ ಯಾವ ಕೇಸೇ ಇರಲಿ ಅದು ಇನ್‌ವೆಸ್ಟಿಗೇಷನ್ನಿನಲ್ಲಿಯೇ ಉಳಿಯುತ್ತದೆ. ಇದಕ್ಕೆ ಬಹುಮಟ್ಟಿಗೆ ಸ್ಥಳೀಯ ಕಾಂಗ್ರೆಸ್ ಮುಖಂಡರ ಕೈವಾಡವೇ ಕಾರಣ. ಇದರಿಂದ ಕೇಸು ಮುಂದಕ್ಕೆ ಹೋಗುತ್ತಿಲ್ಲ. ಒಬ್ಬ ಪೋಲೀಸ್ ಆಫೀಸರರನ್ನು ಕೇಳಿದೆ. ಇದು ಹೀಗೆ ಏಕೆ ಆಗುತ್ತದೆಂದು. ಮೊನ್ನೆಯ ದಿವಸ ಒಬ್ಬ ಮನುಷ್ಯ ಕುಡಿದು ಗಲಾಟೆ ಮಾಡಿದ್ದನಲ್ಲ ಮುಂದೆ ಏನು ಮಾಡಿದಿರಿ ಎಂದು ಕೇಳಿದೆ. ಅವರು ಹೇಳಿದ್ದೇನೆಂದರೆ, ಇವರಲ್ಲ ಒಬ್ಬ ಎಂ. ಎಲ್. ಎ. ಇಂಟರೆಸ್ಟೆಡ್ ಇದ್ದಾನೆ, ಅವರು ಮಂತ್ರಿಗಳಿಗೆ

ಫೋನ್ ಮಾಡಿದರು. ಆದುದರಿಂದ ಏನೂ ಮಾಡುವುದಕ್ಕಾಗಲಿಲ್ಲ ಎಂದು ಹೇಳಿದರು. ಇಂಥ ಸಾವಿರಾರು ಉದಾಹರಣೆಗಳನ್ನು ಬೇಕಾದರೆ ಕೊಡುತ್ತೇನೆ. ಪೋಲೀಸ್ ಆಫೀಸರರಿಗೆ ಶಕ್ತಿ ಇಲ್ಲದೇ ಇರುವುದರಿಂದ ಆಡಳಿತ ಶಕ್ತಿ ಕುಸಿದುಬಿದ್ದಿದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಆಡಳಿತ ಸುಧಾರಿಸಬೇಕಾದರೆ, ಪೋಲೀಸ್ ಇಲಾಖೆ ದಕ್ಷತೆಯಿಂದ ಕೆಲಸ ಮಾಡಬೇಕಾದರೆ ಮುಖಂಡರ ಕೈವಾಡ ಅವರ ಆಡಳಿತದಲ್ಲಿ ಇರಕೂಡದು. ಇದು ಒಂದೇ ಮಾತನ್ನು ನಾನಿಂದು ಹೇಳಿದರೆ ಸಾಕು. ಇನ್ನು ಲಂಚದ ವಿಷಯದಲ್ಲಿ ಹೇಳಿದ್ದಾರೆ. ನಾನು ಹೇಳುವುದಕ್ಕೆ ತಯಾರಿಲ್ಲ. ಗೌರವ ಏನು ಎಂದರೆ ಲಂಚ. ಅದು ಅಲ್ಲೂ ಇದೆ, ಇಲ್ಲೂ ಇದೆ. ಎಲ್ಲ ಹೋದರೂ ಕಾಂಚಾಣಾಂ ಕಾರ್ಯಸಿದ್ಧಿಃ ಎನ್ನುವ ಕೊನೆಯ ತೀರ್ಮಾನಕ್ಕೆ ಬಂದಿದ್ದಾರೆ. ಚಾರ್ವಾಕರು ಒಂದು ಶ್ಲೋಕ ಹೇಳಿದ್ದಾರೆ. ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ತಸ್ಮಾತ್ ಸರ್ವ ಪ್ರಯತ್ನೇನ ಋಣಂ ಕೃತ್ವಾ ಘೃತಂಪಿಬೇತ್. ಅಂದರೆ ಎಂತಹ ಸುಂದರವಾದ ಶರೀರ ನಿನಗಿದೆ ಇದು ನಿನಗೆ ಇನ್ನೊಮ್ಮೆ ಲಭ್ಯವಾಗುತ್ತದೋ ಇಲ್ಲವೋ, ಆದಕಾರಣ ಈಗಲೇ ಸಾಲವನ್ನಾದರೂ ಮಾಡಿ ತುಪ್ಪವನ್ನು ಕುಡಿದು ಸುಖಪಡು ಮಗನೇ, ಎನ್ನುವುದು ಇದರ ಅರ್ಥ. ಈ ರೀತಿ ರಾಜ್ಯದ ಭಂಡಾರವನ್ನು ಬರಿದು ಮಾಡಿ ಪೋಲೀಸ್ ಇಲಾಖೆಯನ್ನು ಕೈಯ್ಯಲ್ಲಿಟ್ಟುಕೊಂಡು ನಿಮ್ಮ ವಿರೋಧಿಗಳನ್ನು ತುಳಿಯುವುದಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದೀರಿ. ನಿಮ್ಮ ಕೈವಾಡದಿಂದ ದಕ್ಷತೆ ನ್ಯಾಯ ನಿಸ್ಪೃಹತೆ ಯಾವುದೂ ದೊರಕುತ್ತಿಲ್ಲ. ಈ ಕೈವಾಡ ದಯವಿಟ್ಟು ಬಿಟ್ಟುಬಿಡಿ. ತಮಗಂತೂ ಗೃಹ ಮಂತ್ರಿಗಳಾಗಿ ಇರುವ ಯೋಗ್ಯತೆ ಇಲ್ಲ. ಬದಲಾವಣೆ ಮಾಡಬೇಕು. ಸುವ್ಯವಸ್ಥೆಗೆ ಶಾಂತಿ ರಕ್ಷಣೆಗೆ ಮತ್ತು ಶಾಂತಿಪಾಲನೆಗೆ ಹಾಗೂ ಸಮಾಜದ ಸುಭದ್ರತೆಗೆ ಪೋಲೀಸ್ ಇಲಾಖೆಯನ್ನು ಬಳಸಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ಈ ಪೋಲೀಸ್ ಮಂತ್ರಿಗಳು ತಂದಿರತಕ್ಕ ಆಯವ್ಯಯವನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ಜನ ಇವೊತ್ತು ನಿಮ್ಮ ಮಟ್ಟಿಗೆ ಗೃಹ ಮಂತ್ರಿಗಳ ಬಗ್ಗೆ ಯಾವ ಒಂದು ಗೌರವವನ್ನು ಸೌಜನ್ಯತೆಯನ್ನು ಇಟ್ಟುಕೊಂಡಿದ್ದೇವೆ ಎಂದರೆ, ತಾವು ಜನತೆಯ ಮಂತ್ರಿಗಳಾಗದೆ ಪೋಲೀಸ್ ಅಧಿಕಾರಿಗಳ ಕೇವಲ ಒಂದು ಏಜೆಂಟರಾಗಿ ಇದ್ದೀರಿ ಎಂದು ಹೇಳಿದರೆ ನಿಜವಾಗಿಯೂ ತಪ್ಪಾಗಲಾರದು. ತಾವು ಹಿಂದೆ ಎಕ್ಸೈಜ್ ಮಂತ್ರಿಗಳಾಗಿದ್ದಿರಿ. ಆಗ ಒಬ್ಬ ಎಕ್ಸೈಜ್ ಕಂಟ್ರಾಕ್ಟರನ್ನೂ ತಮ್ಮ ಮನೆ ಹತ್ತಿರ ಸೇರಿಸುತ್ತಾ ಇರಲಿಲ್ಲ. ಕಟ್ಟುನಿಟ್ಟಾಗಿ ಧೈರ್ಯದಿಂದ ನಡೆದುಕೊಳ್ಳುತ್ತಿದ್ದಿರಿ ಎಂದು ಅನೇಕರು ಹೇಳುತ್ತಾ ಇದ್ದರು. ನಾನು ಆ ಮಾತನ್ನು ಕೇಳುತ್ತಿದ್ದೆ. ಇವೊತ್ತಿನ ದಿವಸ ಅದೇ ಶ್ರೀಮಾನ್ ರಾಮರಾಯರು ಪೋಲೀಸ್ ಮಂತ್ರಿಗಳಾದ ಮೇಲೆ ಏತಕ್ಕೆ ಈ ರೀತಿ ಇದ್ದಾರೆ. ಯಾವ ದೇವರು ಅವರಿಗೆ ಆರೀತಿ ಬುದ್ಧಿ ಕೊಟ್ಟನೋ ಅವನೇ ಕಾಪಾಡಬೇಕು! ನೀವು ಈ ರೀತಿ ಆಗುತ್ತಾ ಇರಲಿಲ್ಲ. ಯಾರೋ ನಿಮಗೆ ಮಾಡಿಸಿ ಮಾಡುತ್ತಾ ಇದ್ದಾರೆ. ಯಾರದೋ ಮಾಯಾಜಾಲಕ್ಕೆ ಬಿದ್ದುಬಿಟ್ಟಿದ್ದೀರಿ. ದಯವಿಟ್ಟು ಆರು ತಿಂಗಳು ವಿಶ್ರಮಿಸಿ ಯಾವ ಇಲಾಖೆಯನ್ನೂ ತೆಗೆದುಕೊಳ್ಳದೆ ಪೋಲೀಸ್ ಅಧಿಕಾರದಿಂದ ಕಾಂಗ್ರೆಸ್ ಆಡಳಿತದಿಂದ ಕಾಂಗ್ರೆಸ್ ಪಕ್ಷದಿಂದ ದೂರವಿದ್ದು ತಪಸ್ಸು ಮಾಡಿ ಬಂದರೆ, ಆಗ ನಿಮಗೆ, ರಾಜ್ಯಕ್ಕೆ ಗೌರವ, ಘನತೆ ಬರುತ್ತದೆ. ಇಂತಹ ಪೋಲೀಸರ ಮತ್ತು ಕಾರ್ಮಿಕರ ಇಲಾಖೆಯನ್ನು ನೀವು ಇಟ್ಟುಕೊಂಡು ಅಲ್ಲಿ ಲೂಟಿ, ಅನ್ಯಾಯ, ಲಂಚ ಅವು ತುಂಬ ಹೋಗಿರುವಾಗ ಇದನ್ನು ಯಾವರೀತಿ ಬಿಡಿಸಬೇಕು, ಪೋಲೀಸ್ ಇಲಾಖೆಯನ್ನು ಯಾವ ರೀತಿಯಾಗಿ ಸರಿ ಮಾಡಬೇಕು ಎಂದು ಅರ್ಥವಾಗುತ್ತಾ ಇಲ್ಲ. ಕೆಳಗಿನಿಂದ ಫೈಲು ಬರುತ್ತದೆ. ಪೋಲೀಸ್ ಅಧಿಕಾರಿಗಳು ಅವರು ಹೇಳಿದ್ದು ಸರಿ ಎಂದು ಹೇಳುತ್ತಾರೆ. ಪೋಲೀಸರು ಹೇಳಿದಂತೆ ನೀವು ನಡೆದುಕೊಳ್ಳುತ್ತೀರಿ. ಆ ರೀತಿ ಆಗುತ್ತದೆಯೇ ಹೊರತು ನೀವು ಹೇಳಿದ ರೀತಿ ನಡೆದುಕೊಂಡ ಒಂದು ನಿದರ್ಶನವಾದರೂ ಇಲ್ಲ. ನೀವು ಪ್ರತ್ಯಕ್ಷವಾಗಿ ಮಾಡಿರುವುದು ಯಾವುದಾದರೂ ಇದೆಯೇ? ಇಲ್ಲ. ನಿಮ್ಮ ಬಗ್ಗೆ ಬಹಳ ಗೌರವವನ್ನು ಇಟ್ಟುಕೊಂಡಿದ್ದೆ. ಆದರೆ ಪೋಲೀಸ್ ಇಲಾಖೆ ನಿಮ್ಮ ಕೈಗೆ ಬಂದಮೇಲೆ ನಿಮಗೆ ಎಷ್ಟು ಗೌರವ ಕೊಡಬೇಕು ಎಂದರೂ ನಾನು ಮನಸ್ಸು ಮಾಡಿದರೂ, ಅವರಿಗೆ ಗೌರವ ಕೊಡಬೇಡ, ಅವರಲ್ಲಿ ದಕ್ಷತೆ ಇಲ್ಲ, ಅವರು ಪೋಲೀಸ್ ಏಜೆಂಟರಾಗಿದ್ದಾರೆ, ಎಂದು ನನ್ನ ಮನಸ್ಸು ಹೇಳುತ್ತಿದೆ. ಇದನ್ನು ನೋಡಿದರೆ ನನಗೆ ವ್ಯಥೆ ಆಗಿದೆ. ತಾವು ಕೇಸುಗಳನ್ನು ಹಾಕುತ್ತೀರಿ ಆದರೆ ಆ ಕೇಸುಗಳನ್ನು ಹೇಗೆ ವಿತ್‌ಡ್ರಾ ಮಾಡಿದ್ದಾರೆ ಎನ್ನುವುದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಚಿಕ್ಕಪೇಟೆಯಲ್ಲಿ ಒಂದು ಜೂಜಿನಕಟ್ಟೆಯನ್ನು ರೇಡ್ ಮಾಡಿ ಪೋಲೀಸಿನವರು ಹಾಕಿದಂಥ ಕೇಸನ್ನು ಒಬ್ಬ ಕಾಂಗ್ರೆಸ್ ಎಂ. ಎಲ್. ಎ. ರೆಕಮೆಂಡ್ ಮಾಡಿ, ಮಂತ್ರಿಗಳು ಇಂಟರ್‌ಫಿಯರ್ ಆಗಿ ಆ ಕೇಸನ್ನು ವಿತ್‌ಡ್ರಾ ಮಾಡಿದ್ದಾರೆ. ಇದಕ್ಕಿಂತ ನಾಚಿಕೆಗೇಡು ಯಾವುದು ಇದೆ? ಜೂಜಿನಕಟ್ಟೆಯನ್ನು ರೇಡ್

(ಶ್ರೀ ವಾಟಾಳ್ ನಾಗರಾಜ್)

ಮಾಡಿ ಪೋಲೀಸಿನವರು ಹಾಕಿದಂಥ ಕೇಸುಗಳನ್ನು ಹಿಂತೆಗೆದುಕೊಂಡಿದ್ದೀರಿ ಎಂದರೆ, ಇವೊತ್ತಿನ ದಿವಸ ಕನ್ನಡ ಚಳುವಳಿಗಾರರ ಮೇಲೆ, ಗೋವಾ ಕರ್ನಾಟಕಕ್ಕೆ ಸೇರಬೇಕು, ಬೆಳಗಾವು, ಕಾರವಾರ ಕರ್ನಾಟಕಕ್ಕೆ ಸೇರಬೇಕು ಎಂದು ಒಂದು ತತ್ವ ದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ನಡೆಸಿದಂಥ ಹೋರಾಟದ ಸಂದರ್ಭದಲ್ಲಿ ಕೇಸುಗಳನ್ನು ಹಾಕಿದ್ದಾರೆ.

Sri MANIK RAO SHAM RAO (Aurad).—I request the Hon'ble Member to correct his statement. Belgaum, Karwar are already in the Mysore State.

ಶ್ರೀ ವಾಟಾಳ್ ನಾಗರಾಜ್.—ಎಂತಹ ಅಕ್ರಮವನ್ನು ಮಾಡಿದ್ದಾರೆ. ಪೋಲೀಸ್ ಇಲಾಖೆ ಎನ್ನುವುದು ಸಾರ್ವಜನಿಕ ರಕ್ಷಣೆಗೋಸ್ಕರ ಇರತಕ್ಕಂಥ ಇಲಾಖೆ. ಇವೊತ್ತು ಏನಾಗಿದೆ ಎಂದರೆ, ಸಾರ್ವಜನಿಕರ ' ಶತ್ರು ಇಲಾಖೆ ' ಆಗಿದೆ. ಪೋಲೀಸ್ ಇಲಾಖೆ ಮತ್ತು ಪೋಲೀಸನ್ನು ಯಾವರೀತಿಯಾಗಿ ಸಾರ್ವಜನಿಕರು ಕಾಣುತ್ತಾ ಇದ್ದಾರೆ ಎಂದರೆ ತಮ್ಮ ರಕ್ಷಣೆಗಾಗಿ ಪೋಲೀಸಿನವರು ಇದ್ದಾರೆ ಎಂದು ಕಾಣುತ್ತಾ ಇಲ್ಲ. ತಮ್ಮ ವಿರೋಧಿಗಳನ್ನು ಬಲಿಹಾಕುವುದಕ್ಕೆ ಮತ್ತು ಅವರ ಮೇಲೆ ಅಕ್ರಮವಾಗಿ ಕೇಸುಗಳನ್ನು ಹಾಕುವುದಕ್ಕೆ ಎಂದು ಸಾರ್ವಜನಿಕರು ತಿಳಿದುಕೊಂಡಿದ್ದಾರೆ. ಅದೇರೀತಿ ಅಧಿಕಾರಿ ಶಾಹಿ ಪದ್ಧತಿ; ಪೋಲೀಸ್ ಇಲಾಖೆಯಲ್ಲಿ ಬೆಳೆದುಬಿಟ್ಟಿದೆ. ಪೋಲೀಸ್ ಅಧಿಕಾರಿಗಳ ಅನುಭವ ನನಗೆ ದಿನಬೆಳಗಾದರೆ ಆಗುತ್ತಿದೆ. ಅವರು ಯಾವ ದೃಷ್ಟಿಯಿಂದಲೂ ಜನತೆಗಾಗಲಿ ಜನಜೀವನಕ್ಕೆ ರಕ್ಷಣೆಯನ್ನಾಗಲಿ ನೀಡುತ್ತಾ ಇಲ್ಲ. ಗೃಹ ಮಂತ್ರಿಗಳಿಗೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಕಾಕಿ ಬಟ್ಟೆ ಬೇಡಿ, ಕಾಕಿ ಬಟ್ಟೆ ಹಾಕಿಕೊಂಡು ಬಂದು ಕಂಡಾಗ ಯಾರೋ ಶತ್ರುಗಳು ಬರುತ್ತಾರೆ ಎಂದು ಅನಿಸುತ್ತದೆ. ಆದುದರಿಂದ ಕಾಕಿಬಟ್ಟೆಯನ್ನು ತೆಗೆದು ಅವರಿಗೆ ಕಾವಿ ಬಟ್ಟೆ ಹಾಕಿ, ಆಗ ಸ್ವಲ್ಪ ಶಾಂತಿ ಕಾಣುತ್ತದೆ. 5 ವರ್ಷ ಪೋಲೀಸ್ ಅಧಿಕಾರಿಗಳಿಗೆ ಈ ಬಟ್ಟೆ ಬದಲಾಯಿಸಿ ಎಂದು ಸಲಹೆ ಮಾಡುತ್ತೇನೆ. ಇವೊತ್ತು ಸ್ಟೇಷನ್ ಏನು ಇವೆ, ಅದಕ್ಕೆ ಗೃಹಮಂತ್ರಿಗಳು ಒಂದು ಸ್ಟೇಷನ್ನಿಗೂ ಸಂದರ್ಶನ ಮಾಡಿಲ್ಲ. ನಾನು ಅನೇಕ ಸ್ಟೇಷನ್ನುಗಳನ್ನು ಸಂದರ್ಶನ ಮಾಡಿದ್ದೇನೆ. ಸ್ವಾಮಿ, ಈ ಸ್ಟೇಷನ್ನಿನಲ್ಲಿರತಕ್ಕ ಲಾಕಪ್‌ಗಳು ಏನಾಗಿವೆ ಎಂದರೆ, ನರಕದ ರೀತಿ ಇದೆ. ಒಂದು ದಿವಸ ಜನತೆಯ ಬೇಡಿಕೆಗೋಸ್ಕರ ನಮ್ಮನ್ನು ಜೈಲಿಗೆ ಕರೆದುಕೊಂಡು ಹೋದರು. ಅಲ್ಲಿ ನಮ್ಮನ್ನು ಖೈದಿಗಳ ರೂಪದಲ್ಲಿ, ಕಳ್ಳರ ರೂಪದಲ್ಲಿ ನೋಡಿದರು.

5-00 P.M.

ಲಾಕಪ್‌ಗಳು ಹೇಗಿವೆಯೆಂದರೆ, ಅಲ್ಲಿ ಯಾರೇ ಹೋದರೂ ಕೂಡ ಅವರನ್ನು ಕೊಲೆಗಾರರಿಗಿಂತ ಹೀನಾಯವಾಗಿ ಕಂಡು ಪೋಲೀಸು ಇನ್ಸ್‌ಪೆಕ್ಟರು ಮತ್ತು ಸಬ್ ಇನ್ಸ್‌ಪೆಕ್ಟರು ಬಹಳ ಅನಾಗರಿಕ ರೀತಿಯಲ್ಲಿ ನಡೆಸಿಕೊಳ್ಳುತ್ತಾರೆ. ಪೋಲೀಸಿನವರಲ್ಲಿ ಸೌಜನ್ಯವೆಂಬುದೇ ಇಲ್ಲ. ಅದಕ್ಕೆ ಕಾರಣ ದಕ್ಷತೆಯಿಲ್ಲದಿರುವ ಅಧಿಕಾರಿಗಳು ಮತ್ತು ಮಂತ್ರಿಗಳಾಗಿರುವ ರಾಮರಾಯರೇ ಕಾರಣರೆಂದು ನಾನು ಖಚಿತವಾಗಿ ತಿಳಿಸಬೇಕಾಗಿದೆ. ನಾನೇ ಪೋಲೀಸು ಇಲಾಖೆಯ ಮಂತ್ರಿಯಾಗಿ ಇದ್ದಿದ್ದರೆ, ರಾಮರಾಯರ ಸ್ಥಾನದಲ್ಲಿದ್ದರೆ ಈಗಿರುವ ಪೋಲೀಸು ಸಿಬ್ಬಂದಿಯಲ್ಲಿ ಶೇಕಡ 50 ರಷ್ಟನ್ನಾದರೂ ಕಡಮೆಮಾಡುತ್ತಿದ್ದೆ. ಪೋಲೀಸು ಇಲಾಖೆಯಲ್ಲಿ ಇಂದು ಲಂಚ ತಾಂಡವಮಾಡುತ್ತಿದೆ, ಜನರನ್ನು ಸುಲಿಗೆ ಮಾಡುತ್ತಿದ್ದಾರೆ, ಅಧಿಕಾರಿಗಳಿಗೆ ದಕ್ಷತೆಯಿಲ್ಲ. ಆರು ತಿಂಗಳು ರಾಮರಾಯರು ನನಗೆ ಅವರ ಸ್ಥಾನವನ್ನು ಬಿಟ್ಟುಕೊಟ್ಟರೆ ನಾನು ಪೋಲೀಸು ಇಲಾಖೆಯಲ್ಲಿ ನೌಕರರನ್ನು ಕಡಮೆ ಮಾಡಿ ದಕ್ಷತೆಯನ್ನು ತರಬಲ್ಲೆ, ಈ ಬಗ್ಗೆ ಛಾಲೆಂಜ್‌ಮಾಡುತ್ತೇನೆ. ಇವತ್ತು ಪೋಲೀಸು ಇಲಾಖೆ ಭಾರತ ಸೇವಾದಳದ ರೀತಿಯಲ್ಲಿ ಕಾಂಗ್ರೆಸ್ ಸೇವಾದಳದ ರೀತಿಯಲ್ಲಿ ಕಾಂಗ್ರೆಸ್ಸಿನ ಒಂದು ಅಂಗದಂತಿದೆ. ಕಾಂಗ್ರೆಸ್ಸಿನ ಉದ್ಧಾರಕ್ಕಾಗಿ ಕಾಂಗ್ರೆಸ್ ಪಕ್ಷದ ರಕ್ಷಣೆಗಾಗಿ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಭದ್ರವಾಗಿ ಉಳಿಯುವುದಕ್ಕಾಗಿ ಪೋಲೀಸು ಇಲಾಖೆ ಬೇಕಾದ ಕೆಲಸಗಳನ್ನು ಮಾಡುತ್ತಿದೆ, ಹೀಗಾಗಿ ಸರಕಾರ ಪೋಲೀಸು ಇಲಾಖೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಜನರಮೇಲೆ ಅಲ್ಲಸಲ್ಲದ ಆರೋಪಗಳನ್ನು ಹೊರಿಸಿ ಅಲ್ಲಸಲ್ಲದ ಕೇಸುಗಳನ್ನು ಹಾಕಿ ಗೋಲಿಬಾರು, ಲಾಠಿಛಾರ್ಜು ಮಾಡುವುದು, ಕೇಸುಗಳನ್ನು ಹಾಕುವುದು, ಜೈಲಿಗೆ ಕಳಿಸುವುದು, ಮುಂತಾದ್ದು ಪೋಲೀಸರ ದಿನನಿತ್ಯದ ಕೆಲಸವಾಗಿದೆ. ಪೋಲೀಸಿನವರು ಎಷ್ಟು ಕೇಸುಗಳನ್ನು ಸತ್ಯದಿಂದ ಸಕಾರಣಗಳಿಗಾಗಿ ಹಾಕಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಎದೆಮುಟ್ಟಿಕೊಂಡು ಸತ್ಯವಾಗಿ ಹೇಳಲಿ. ಶೇಕಡ 90 ಸತ್ಯಕ್ಕೆ ದೂರ

ವಾದ ಕಾರಣಗಳಿಗಾಗಿ ಕೇಸುಗಳನ್ನು ಹಾಕಿದ್ದಾರೆ. ಈ ಪೋಲೀಸು ರಾಜ್ಯದಲ್ಲಿ ನಾವು ಬದುಕುವುದಕ್ಕೆ ಸಾಧ್ಯವಿಲ್ಲ, ಇದು ಪೋಲೀಸು ರಾಜ್ಯವಾಗಿದೆ. ಒಂದು ಮೆರವಣಿಗೆ ಬಂದರೆ, ಕಾರ್ಮಿಕರು ಚಳುವಳಿ ಮಾಡಿದರೆ ಅಧಿಕ ಸಂಖ್ಯೆಯಲ್ಲಿ ಪೋಲೀಸರು ವ್ಯಾನುಗಳು ತೆಗೆದುಕೊಂಡು ಬಂದು ಬಂದೂಕಗಳು, ಲಾಟಿಗಳು, ರೈಫಲ್ಲುಗಳು ಮುಂತಾದುವುಗಳನ್ನು ಹೊತ್ತುಕೊಂಡು ಬಂದು ಸಿದ್ಧವಾಗಿರುತ್ತಾರೆ, ಜೀಪುಗಳ ಓಡಾಟವಂತೂ ಹೇಳತೀರದು. ಹೀಗೆ ಇದು ಕಾನೂನು ರಾಜ್ಯ, ಪೋಲೀಸು ರಾಜ್ಯ ಆಯಿತಲ್ಲಾ ಎಂದು ಬಹಳ ವ್ಯಸನವಾಗುತ್ತಿದೆ. ರಾಜ್ಯದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ ಪೋಲೀಸರ ಸಂಖ್ಯೆ ಮತ್ತು ಅಧಿಕಾರವ್ಯಾಪ್ತಿಯನ್ನು ಕಡಮೆ ಮಾಡಬೇಕು. ಇಲ್ಲದಿದ್ದರೆ ಅನ್ಯಾಯವಾಗಿ ಜನರಿಗೆ ಹಿಂಸೆಯಾಗುವುದರಿಂದ ಪ್ರಜಾಪ್ರಭುತ್ವದ ತತ್ವಕ್ಕೆ ಲೋಪ ತಂದಂತಾಗುತ್ತದೆ. ದಯಮಾಡಿ ಸತ್ಯ, ಧರ್ಮ ನೀತಿ ಇರುವುದದಾದರೆ, ರಾಜ್ಯದಲ್ಲಿ ಜನರು ಸುರಕ್ಷಿತವಾಗಿರಬೇಕಾದರೆ ಆದರ್ಶಮಂತ್ರಿಗಳಾಗಿ ಸರಿಯಾದ ಆಡಳಿತವನ್ನು ನಡೆಸಿ ಪೋಲೀಸಿನವರ ಅಧಿಕಾರ, ಸಂಖ್ಯೆ ಮತ್ತು ಕಿರುಕುಳ ಕಡಮೆ ಮಾಡಿ.

[Mr. SPEAKER in the Chair]

ಮಾನ್ಯ ಗೃಹಮಂತ್ರಿಗಳು ಜೈಲಿನ ಸುಧಾರಣೆ ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ನಾನು ಅನೇಕ ಸಾರಿ ಜೈಲಿಗೆ ಹೋಗಬೇಕಾದ ಪ್ರಸಂಗ ಬಂತು. ಹೋದಾಗ ಅಲ್ಲಿ ಕೊಲೆ, ಖೂನಿ, ದರೋಡೆ ಮುಂತಾದ್ದನ್ನು ಮಾಡಿದವರನ್ನು ಯಾವರೀತಿ ನೋಡುತ್ತಾರೋ ಅದೇ ರೀತಿಯಲ್ಲಿ ನಮ್ಮನ್ನೂ ನೋಡಿದರು, ಅನ್ನ ಕೊಡಿ, ನೀರು ಕೊಡಿ, ಬಟ್ಟೆ ಕೊಡಿ ಎಂದು ಕೇಳಿದರೆ ಘೋರವಾದ ಅಪರಾಧಗಳನ್ನು ಮಾಡಿದವರಿಗಿಂತ ಕಡೆಯಾಗಿ ನಮ್ಮನ್ನು ನಡೆಸಿಕೊಂಡು ಸರಿಯಾಗಿ ಯಾವ ಸೌಕರ್ಯವನ್ನೂ ಕೊಡಲಿಲ್ಲ. ಜೈಲಿನ ಸ್ಥಿತಿ ಹೀಗಿದೆ. ಅಲ್ಲಿ ಅನ್ನಕ್ಕೆ ಉಪಯೋಗಮಾಡುವ ಅಕ್ಕಿ, ಎಲ್ಲಿಂದಲೋ ತಂದ ಅಧ್ವಾನದ ಸಾರಿನ ಪುಡಿಯಿಂದ ಮಾಡಿದ ಸಾರು, ಇದನ್ನೆಲ್ಲಾ ನೋಡಬೇಕು, ರುಚಿ ನೋಡಬೇಕು, ಕೆಟ್ಟಕ್ಕಿಯಿಂದ ತಯಾರಿಸಿದ ಅನ್ನ ಮತ್ತು ಕಾರದ ಮುದ್ದೆಯಾದ ಸಾರು ಇವನ್ನು ತಿನ್ನುವುದಕ್ಕೇ ಸಾಧ್ಯವಿಲ್ಲ. ಇಂಥಾದ್ದನ್ನೊದಗಿಸುತ್ತಾರೆ. ಇದನ್ನು ವರ್ಣಿಸುವುದಕ್ಕೇ ಸಾಧ್ಯವಿಲ್ಲ, ಒಂದು ಸಾರಿ ಮಂತ್ರಿಗಳು ನನ್ನ ಜೊತೆಯಲ್ಲಿ ಬಂದರೆ ಪರಿಶೀಲಿಸಿ ವಿಚಾರ ತಿಳಿದುಕೊಳ್ಳಬಹುದು. ಇಂಥ ಅನ್ಯಾಯ ನಡೆಯುತ್ತಿದೆ. ಹೋಗಿ ನೋಡಿದರೆ ನಿಜವಾದ ವಿಚಾರ ಗೊತ್ತಾಗುತ್ತದೆ. ಅಲ್ಲಿ ಒದಗಿಸುವ ಚೆಂಬು, ಪಾತ್ರೆಗಳು ಕಂಬಳಿಗಳನ್ನು ನೋಡಿದರೆ ವ್ಯಸನವಾಗುತ್ತದೆ, ಅಲ್ಲಿ ಹೊಟ್ಟೆಗಿಲ್ಲದೆ ಯಾರೋ ಹೊದ್ದು ಬಿಟ್ಟಿದ್ದ ಕಂಬಳಿ ಹೊದೆದುಕೊಂಡು ತಿಗಣೆಗಳ ಕಾಟವನ್ನು ತಡೆಯಲಾರದೆ ಒದ್ದಾಡಿಕೊಂಡು ರಾತ್ರಿ ನಿದ್ರೆಯಿಲ್ಲದೆ ರಾಮ ರಾಮ ಎಂದು ಮಂತ್ರಿಗಳ ಹೆಸರನ್ನು ಹೇಳಿಕೊಂಡು ಜಪಮಾಡಬೇಕಾಗುತ್ತದೆ. ಖರ್ಚುಮಾಡುವ ಹಣಕ್ಕೆ ತಕ್ಕಂತೆ ಸರಿಯಾದ ವ್ಯವಸ್ಥೆ ಮಾಡಿಲ್ಲ.

ಶ್ರೀ ಎ. ನಂಜಪ್ಪ (ಶಾಂತಿನಗರ).—ಪೋಲೀಸು ಇಲಾಖೆಯ ಬಗ್ಗೆ ನಮ್ಮ ಬೆಂಗಳೂರು ನಗರದ ವಿಚಾರದಲ್ಲಿ ಅನೇಕರು ಮಾತನಾಡಿದ್ದಾರೆ, ನಾನು ಕೂಡ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಪೋಲೀಸಿನವರಿಗೆ ಸಂಬಳ ಕೊಡುವುದು ಸಾಲದು ಅವರಿಗೆ ಹೊಟ್ಟೆ ತುಂಬ ಹಾಕಿ ಕೆಲಸಮಾಡಿಸಬಹುದೇ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲ. ಈ ದಿವಸ ಪದಾರ್ಥಗಳ ಬೆಲೆ ವಿಪರೀತವಾಗಿ ಏರಿದೆ, ಹಾಗಿರುವಾಗ ಸರಕಾರದವರೇ ನೇರವಾಗಿ ಅತ್ಯಾವಶ್ಯಕವಾದ ಪದಾರ್ಥಗಳನ್ನು ಸರಿಯಾದ ಬೆಲೆಯಲ್ಲಿ ಸರಬರಾಯಿ ಮಾಡಿ ಪೋಲೀಸಿನವರಿಂದ ಸರಿಯಾಗಿ ಕೆಲಸ ತೆಗೆದುಕೊಳ್ಳಬೇಕಾದ್ದು ಸರಕಾರದ ಜವಾಬ್ದಾರಿ. ಹಾಗೆ ಇಂದು ಮಾಡುತ್ತಿಲ್ಲ. ಅವರಿಗೆ ಹೊಟ್ಟೆತುಂಬ ಹಾಕಿ ಕೆಲಸಮಾಡಿ ಎಂದರೆ ಮಾಡುತ್ತಾರೆಯೇ ಹೊರತು ಕೆಲಸ ಸರಿಯಾಗಿ ಅವರು ಮಾಡುತ್ತಿಲ್ಲ ಎಂದು ಟೀಕೆ ಮಾಡುವುದು ಸರಿಯಲ್ಲ. ಅವರಿಗೆ ಸರಿಯಾದ ಸಂಬಳ ಕೊಟ್ಟು ಕೆಲಸ ಮಾಡದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಆದುದರಿಂದ ಮುಂಚೆ ಸಾಕಷ್ಟು ಸಂಬಳ ಕೊಡಬೇಕು. ಅವರುಗಳು ವಾಸಮಾಡುವ ಮನೆಗಳನ್ನು ಮಂತ್ರಿಗಳು ನೋಡಬೇಕು, ಅದಕ್ಕೆ ಸುಣ್ಣ ಬಳಿಸಿ ರಿಪೇರಿ ಸಕಾಲದಲ್ಲಿ ಮಾಡುತ್ತಿಲ್ಲ. 5 ಜನರನ್ನು ನಾನು ಭೇಟಿಮಾಡಿದಾಗ ಇದನ್ನು ಹೇಳಿದರು. ಪರಿಸ್ಥಿತಿ ಹೀಗಿದೆ. ಆಡುಗೋಡಿಯಲ್ಲಿ ರಿಸರ್ವ್ ಪೋಲೀಸಿನವರಿಗೆ ಮನೆಗಳನ್ನು ಕೊಟ್ಟಿದ್ದರೂ ಏನೂ ಅನುಕೂಲ ಕಲ್ಪಿಸಿರುವುದಿಲ್ಲ. ಇದನ್ನು ಪರಿಶೀಲಿಸಿ ಅವಶ್ಯಕವಾದ ಅನುಕೂಲತೆಗಳನ್ನು ಒದಗಿಸಬೇಕು. ಮನೆಗಳು ಜೈಲಿನೋಪಾದಿಯಲ್ಲಿವೆ. ಹೇಳಿದ್ದ ಕೆಲಸಮಾಡದಿದ್ದರೆ ವರ್ಗಮಾಡಿ ಎಂದು ಅನೇಕರು ಅಧಿಕಾರಿಗಳಿಗೆ ಹೇಳುತ್ತಾರೆ, ಇದು ನಮ್ಮಲ್ಲಿ ಬಹಳವಾಗಿದೆ. ಇದು ಹೋಗಬೇಕು. ಪೋಲೀಸಿನವರು ತಮ್ಮ ಕರ್ತವ್ಯವನ್ನು [illegible] ಅವರನ್ನು [illegible] ಬೇಕಾದರೂ ಮಾಡಬಹುದು. ಅದನ್ನು [illegible] ತಪ್ಪಾಗುವುದು [illegible] ಸಮರ್ಥಪಡಿಸು [illegible]

(ಶ್ರೀ ಎ. ನಂಜಪ್ಪ)

ಅದೂ ಯಾರೋ ಹೇಳಿದಾಗ ಮಾಡಲಿಲ್ಲವೆಂದು ಅದಕ್ಕಾಗಿ ವರ್ಗಮಾಡುವುದು ಸರಿಯಲ್ಲ. ತಪ್ಪಿದ್ದರೆ ಒಪ್ಪಿಕೊಳ್ಳಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಅನೇಕ ರಸ್ತೆಗಳಲ್ಲಿ ಫುಟ್‌ಪಾತಿನ ಮೇಲೆ ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ನಾಗರಿಕರಿಗೆ ತಿರುಗಾಡುವುದಕ್ಕೆ ಸ್ಥಳ ಇರುವುದಿಲ್ಲ. ಅಧಿಕಾರಿಗಳು ಇದಕ್ಕೆ ಗಮನ ಕೊಡಬೇಕಾಗಿದೆ. ಈಗ ವಾಹನಗಳ ಸಂಚಾರದ ಒತ್ತಡ ಹೆಚ್ಚಾಗಿರುವುದರಿಂದ ಪಾದಚಾರಿಗಳು ಫುಟ್‌ಪಾತಿನಲ್ಲಿಯೇ ಹೋಗಬೇಕಾಗಿದೆ. ಇದು ಸಿಟಿ ಮಾರ್ಕೆಟ್ ಪ್ರದೇಶದಲ್ಲಿ, ಕಂಟೋನ್‌ಮೆಂಟಿನಲ್ಲಿ, ಅಲಸೂರಿನಲ್ಲಿ ಎಲ್ಲ ಜಾಗಗಳಲ್ಲಿಯೂ ನಡೆಯುತ್ತಿದೆ. ಡಿ.ಎಸ್.ಪಿ. ಅವರಿಗೆ ನೋಡಿಸಿ ಅನೇಕ ಬಾರಿ ಹೇಳಿದ್ದೇನೆ. ಏನೂ ಪ್ರಯೋಜನವಾಗಲಿಲ್ಲ. ಟ್ರಾಫಿಕ್ ಸಿಬ್ಬಂದಿಯವರು ನಾಗರಿಕರನ್ನು ಕಾಪಾಡುವುದಕ್ಕೆ ಮಾನ್ಯ ಮಂತ್ರಿಗಳು ಸೂಚನೆ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಟ್ರಾಫಿಕ್ ವಿಭಾಗದಲ್ಲಿ ಸಾರ್ಜೆಂಟರಿದ್ದಾರೆ. ಅವರು ಬಸ್, ಲಾರಿ ಇವುಗಳನು ಚೆಕ್‌ಮಾಡುತ್ತಾರೆಯೇ ಹೊರತು ಟ್ರಾಫಿಕ್ ಕಂಟ್ರೋಲ್ ಮಾಡುವುದಿಲ್ಲ. ಅವರು ಇರುವುದು ಅದಕ್ಕಲ್ಲ ಎಂದು ಕಾಣುತ್ತದೆ. ಸರ್ಕಾರಕ್ಕೆ ಬರಬೇಕಾದ ಬಾಕಿ ಇದ್ದರೆ ಅಂಥವರನ್ನು ಹಿಡಿದು ಅವರ ಮೇಲೆ ಕೇಸು ಹಾಕಿ ಫೈನ್ ಹಾಕಿಸಲಿ. ಅವರು ಹಾಗೆ ಮಾಡುವುದಿಲ್ಲ. ರಾತ್ರಿ ವೇಳೆಯಲ್ಲಿ ಬೆಂಗಳೂರು ನಗರಕ್ಕೆ ಆಹಾರವನ್ನು ತೆಗೆದುಕೊಂಡು ಬರುವ ಲಾರಿಗಳನ್ನು ಹಿಡಿದು ಅವರಿಗೆ ತೊಂದರೆ ಕೊಡುತ್ತಾರೆ. ಟ್ಯಾಕ್ಸ್ ಕಟ್ಟದೆ ಇದ್ದರೆ ಅವರನ್ನು ಹಿಡಿಯಲಿ. ಜನರ ಸಂಚಾರಕ್ಕೆ ತೊಂದರೆಯಾಗುವುದನ್ನು ತಪ್ಪಿಸುವುದರ ಕಡೆಗೆ ಗಮನವಿಲ್ಲದೆ ಇವರು ಲಾರಿ ಮತ್ತು ಬಸ್‌ಗಳನ್ನು ಚೆಕ್‌ಮಾಡುವುದರಲ್ಲೇ ನಿರತರಾಗಿರುತ್ತಾರೆ. ಟ್ಯಾಕ್ಸ್ ಕಟ್ಟಿರುವುದಕ್ಕೆ ಪ್ರತಿಯೊಂದು ವಾಹನಕ್ಕೂ ಟೋಕನ್‌ಗಳನ್ನು ಹಾಕಿರುತ್ತಾರೆ, ಮತ್ತು ಅದರ ಬಗ್ಗೆ ಚೆಕ್ ಮಾಡಿರುವುದಕ್ಕೆ ಚೆಕ್ಡ್ ಎಂದೂ ಹಾಕಿರುತ್ತಾರೆ. ಹೀಗಿದ್ದರೂ ಇವರು ಅನಾವಶ್ಯಕವಾಗಿ ಚೆಕ್‌ಮಾಡುವುದರ ಉದ್ದೇಶವಾದರೂ ಏನು ? ಟ್ಯಾಕ್ಸ್ ಕೊಡದೇ ಇದ್ದರೆ ಅಂಥ ವಾಹನಗಳನ್ನು ಸೀಸ್ ಮಾಡಿಕೊಳ್ಳಲಿ. ಅದನ್ನು ಒಪ್ಪಿಕೊಳ್ಳುತ್ತೇನೆ. ಡ್ರೈವಿಂಗ್‌ಲೈಸೆನ್ಸ್ ಇಲ್ಲದೆ ಹೋದರೆ ಅದರ ಮಾಲೀಕನ ಮೇಲೆ ಕ್ರಮ ತೆಗೆದುಕೊಳ್ಳಲಿ. ಆದರೆ ಹಾಗೆ ಮಾಡುವುದಿಲ್ಲ. ಲಾರಿ ಮತ್ತು ಬಸ್‌ನವರು ಏನಾದರೂ ದುಡ್ಡು ಕೊಟ್ಟರೆ ಅವರನ್ನು ಹೆಚ್ಚು ತನಿಖೆ ಮಾಡದೆ ಬಿಡುತ್ತಾರೆ. ದುಡ್ಡು ಕೊಡದೆ ಇದ್ದರೆ ಸುಮ್ಮನೆ ಅವರಿಗೆ ತೊಂದರೆ ಕೊಡುತ್ತಾರೆ. ಈ ರೀತಿ ಮಾಡದಂತೆ ಸೂಚನೆಯನ್ನು ಟ್ರಾಫಿಕ್‌ಗೆ ಸಂಬಂಧಪಟ್ಟವರಿಗೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನಾನು 25 ವರ್ಷಗಳಿಂದಲೂ ನೋಡಿದ್ದೇನೆ. ಹಿಂದೆ ಶ್ರೀಮಾನ್ ಸಿದ್ಧವೀರಪ್ಪನವರು ಗೃಹಮಂತ್ರಿಗಳಾಗಿದ್ದಾಗ ಒಂದು ಕಾಗದವನ್ನು ಅವರಿಗೆ ಬರೆದೆ, ಸಾರ್ಜೆಂಟರು ಲಾರಿ ಮತ್ತು ಬಸ್‌ಗಳವರಿಗೆ ತೊಂದರೆ ಕೊಡುತ್ತಾರೆಂದು. ಈ ಸಾರಿ ನಮ್ಮವರೇ ಇದ್ದಾರೆ. ಯಾರು ಬಂದರೂ ತೊಂದರೆ ಕೊಡುತ್ತಾರೆ. ಅದು ಹೋಗಬೇಕು. ಕಾನೂನಿಗೆ ವಿರೋಧವಾಗಿ ಏನಾದರೂ ಮಾಡಿದ್ದರೆ ಅವರನ್ನು ಬಲಿ ಹಾಕಿ. ಯಾರೋ ತಪ್ಪುಮಾಡುವುದಕ್ಕೆ ಕಾಂಗ್ರೆಸ್ಸಿನವರು ಬೈಸಿಕೊಳ್ಳಬೇಕಾಗಿದೆ. ಈ ರೀತಿ ಆಗುವುದಕ್ಕೆ ಅವಕಾಶ ಕೊಡಬಾರದು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ರಾತ್ರಿ ಹೊತ್ತು ನೈಟ್‌ಡ್ಯೂಟಿಯನ್ನು ಪೋಲೀಸಿನವರು ಮಾಡುತ್ತಿದ್ದರು. ಈಗ ಮಾಡುತ್ತಿಲ್ಲ. ಇದರಿಂದ ಕಳ್ಳ ಸಾಗಾಣಿಕೆ ಹೆಚ್ಚಾಗುತ್ತಿದೆ. ರಾತ್ರಿ ಹೊತ್ತು ಪೋಲೀಸರು ಗಸ್ತು ತಿರುಗುತ್ತಿದ್ದಾಗ ಲಾಠಿಯಿಂದ ಠಪ್, ಠಪ್ ಎಂದು ಹೊಡೆಯುತ್ತ ಹೋಗುತ್ತಿದ್ದರು. ಈಗ ಆ ರೀತಿ ರಾತ್ರಿ ಹೊತ್ತು ಪೋಲೀಸರು ಬರದೆ ಇರುವುದರಿಂದ ಕಳ್ಳತನಗಳು ಜಾಸ್ತಿಯಾಗುತ್ತಿವೆ. ರಾತ್ರಿಹೊತ್ತು ಯಾರೂ ಚೆಕ್ ಮಾಡುತ್ತಿಲ್ಲ. ಇದನ್ನು ಖಂಡಿತ ಸರಿಪಡಿಸಬೇಕು ಎಂದು ಸಲಹೆ ಮಾಡಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸ್ವಾಮಿ, ಪೋಲೀಸ್ ಮತ್ತು ಜೈಲುಗಳ ಬಗ್ಗೆ ತಂದಿರುವ ಈ ಬಜೆಟ್ಟನ್ನು ನಾನು ವಿರೋಧಿಸುತ್ತಾ ಕೆಲವು ಸಲಹೆಗಳನ್ನು ಆಡಳಿತದ ಹಿತದೃಷ್ಟಿಯಿಂದ ಮಾಡಬಯಸುತ್ತೇನೆ.

ಅನೇಕ ಜನ ಸ್ನೇಹಿತರು ಎರಡೂ ಬಾಜೂದವರು ಉಗ್ರವಾಗಿ ಆಡಳಿತೆಯನ್ನು ಟೀಕಿಸಿದ್ದಾರೆ. ಕೆಲವರು ರಚನಾತ್ಮಕವಾದ ಸಲಹೆಗಳನ್ನು ಮಾಡಿದ್ದಾರೆ. ಪೋಲೀಸ್ ಇಲಾಖೆಯ ಹೆಸರು ತೆಗೆದುಕೊಂಡಾಕ್ಷಣ ಇದು ಜನತೆಗೆ ವಿರೋಧವಾದ ಒಂದು ಇಲಾಖೆ ಎನ್ನುವ ಭಾವನೆ ಬೆಳೆದು ಬರಲಿಕ್ಕೆ ಹತ್ತಿದೆ. ನಿಜವಾಗಿಯೂ ಪೋಲೀಸ್ ಇಲಾಖೆ ಬಹಳ ನಮ್ರಪೂರ್ವಕವಾಗಿ ಕೆಲಸ ಮಾಡತಕ್ಕ ಮತ್ತು ಆಡಳಿತೆಯಲ್ಲಿ ಎಲ್ಲ ಇಲಾಖೆಗಳಲ್ಲಿನ ಆಗುಹೋಗುಗಳನ್ನೂ ಗಮನಿಸಿ ಸರಿಯಾದ ರೀತಿಯಿಂದ

ಮಾರ್ಗದರ್ಶನ ಮಾಡತಕ್ಕ ಇಲಾಖೆ. ದಾರಿ ತಪ್ಪಿದವರನ್ನು ಉಗ್ರವಾಗಿ ದಂಡಿಸತಕ್ಕ ದಂಡವನ್ನು ಹಿಡಿದಿರತಕ್ಕ ಪುಣ್ಯತಮ ಇಲಾಖೆ. 'ಶಿಷ್ಟರ ರಕ್ಷಣೆ, ದುಷ್ಟರ ಮರ್ದನ' ಇವು ಈ ಇಲಾಖೆಯ ಮುಖ್ಯವಾದ ಧ್ಯೇಯವಾಗಿರಬೇಕು. ನಿಜವಾಗಿಯೂ ಈ ರೀತಿ ಇಂದು ನಡೆದಿದೆಯೇ ಎಂದು ಗ್ರಹಿಸ ಬೇಕಾಗಿದೆ ಹಾಗೂ ಆಡಳಿತೆಯಲ್ಲಿರುವವರು ಹಾಗೂ ಈ ಸದನದ ಸದಸ್ಯರಾದವರೆಲ್ಲರೂ ಗಂಭೀರ ವಾಗಿ ಈ ಬಗ್ಗೆ ರಾಜ್ಯದ ಹಿತದೃಷ್ಟಿಯಿಂದ ಆಲೋಚಿಸಬೇಕು.

ಸ್ವಾಮಿ, ಮಾನ್ಯ ಸಚಿವರು ಪೋಲೀಸ್ ಇಲಾಖೆಯಲ್ಲಿ ಲಂಚರುಷುವತ್ತುಗಳು ನಡೆದಿರ ಬಹುದು, ಮನುಷ್ಯ ಸ್ವಭಾವ, ಪೋಲೀಸ್ ಇಲಾಖೆಯವರೂ ಮನುಷ್ಯಮಾತ್ರರಿಗೆ ಹೊರತಾಗಿಲ್ಲ ಆದುದರಿಂದ ಸಮಾಜದಲ್ಲಿರುವುದನ್ನೆಲ್ಲಾ ನೋಡಬಹುದು, ಅದನ್ನು ತನಿಖೆ ಮಾಡಿದೆ ಎಂದು ಅನೇಕ ಸಂಪ್ರದಾಯದ ವಾದಗಳನ್ನು ಹೇಳುತ್ತ ಬಂದಿದ್ದಾರೆ. ಶ್ರೀಮಾನ್ ರಾಮರಾಯರ ಪರಿಚಯ ನನಗೆ ಬಹಳ ಇಲ್ಲ. ಅವರನ್ನು ಬಾಹ್ಯದಲ್ಲಿ ಕಂಡಿರುವೆನೇ ವಿನಾ ಅವರೊಳಗಿನ ಅಂತರಂಗದ ಸಂಗತಿಗಳನ್ನು ಇನ್ನೂ ಅರಿತಿಲ್ಲ. ಆದುದರಿಂದ ನಾನು ಅವರ ವೈಯಕ್ತಿಕವಾದ ವಿಷಯದಲ್ಲಿ ಪ್ರವೇಶಿಸದೆ, ಗೃಹ ಸಚಿವರಾಗಿ ಅವರು ಅನೇಕ ಭಾಷಣಗಳನ್ನು ಮಾಡಿರುವುದನ್ನು ಕೇಳಿರುವುದ ರಿಂದ, ಆಡಳಿತೆಯ ಬಗ್ಗೆ ಅವರ ಗಮನವನ್ನು ಸೆಳೆಯ ಬಯಸುತ್ತೇನೆ. ಇಂದು ಈ ರಾಜ್ಯ ದಾದ್ಯಂತ ಪೋಲೀಸರು ಪ್ರತಿಯೊಂದು ಬಸ್ಸಿನವರಿಂದಲೂ ಹಣವನ್ನು "ಪಿ.ಸಿ." ಎಂಬ ಹೆಸರಿನಿಂದ ವಸೂಲ್ಮಾಡಿಕೊಳ್ಳುತ್ತಿದ್ದಾರೆ. ಇದು ತಮ್ಮ ನೀತಿಯೇ ? ಇನ್ನೊಬ್ಬರ ರೊಕ್ಕವಾದರೆ ಹೊಡಿ ಎನ್ನು ವುದು ಸರ್ಕಾರದ ನೀತಿಯೇ ? ಒಂದೊಂದು ಬಸ್ಸಿಗೆ ನಾಲ್ಕಾಣೆ, ಎಂಟಾಣೆ, ಒಂದು ರೂಪಾಯಿ ಸಹಿತ ವಸೂಲಾಗುತ್ತಿದೆ. ಈ ಹಣ ವಸೂಲಾಗುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೇ? ನಿಜ ವಾಗಿ ಪೋಲೀಸ್ ಅಧಿಕಾರಿಗಳ ಗಮನಕ್ಕೆ ಬಂದಿರಲಿಕ್ಕಿಲ್ಲವೇ? ಹಾಗಾದರೆ ಬಹಿರಂಗವಾಗಿ ಈ ತರಹ ಲಂಚ ರುಷುವತ್ತುಗಳನ್ನು ತೆಗೆದುಕೊಳ್ಳುವದು ಅಯೋಗ್ಯವಲ್ಲವೇ ? ಇದೆಲ್ಲವೂ ಸರ್ಕಾ ರಕ್ಕೂ ಹಾಗೂ ನಿಮಗೂ ಗೊತ್ತಿದ್ದರೂ ಸಹ ನಿಮ್ಮ ಪೋರ್ಷನ್ ಬಂದರೆ ತೆಗೆದುಕೊಂಡು ಸುಮ್ಮನೆ ಇರುವಿರೇ ಎಂದು ಕೇಳಿದರೆ ನಿಮ್ಮ ಉತ್ತರವೇನು ಸ್ವಾಮಿ ? ಖಟ್ಲೆ ಹಾಕಿ ತಪಾಸಣೆ ಮಾಡುವಾಗ ಏನಾದರೂ ಒಂದು ನೀತಿ ಇರಬೇಕು. ಸೂರ್ಯನು ಪೂರ್ವದಲ್ಲಿ ಮೂಡುವುದಕ್ಕೆ ತಪ್ಪಬಹುದು, ಆದರೆ ದಿನಂಪ್ರತಿ ಪೋಲೀಸರಿಗೆ ಕೊಡುವ ಹಣ ಯಾವ ಬಸ್ಸಿನಿಂದಲೂ ತಪ್ಪುವುದಿಲ್ಲ. ಇದು ಸಾವಿರಾರು ರೂಪಾಯಿ ಆಗುವುದಿಲ್ಲ, ಲಕ್ಷಾವಧಿ ಹಣವಾಗುತ್ತದೆ. ಮಾನ್ಯ ಸಚಿವರು ಇದರ ತನಿಖೆಯನ್ನು ಇನ್ನಾದರೂ ಮಾಡಲಿರುವರೇ ? ಹೋಗಲಿ, ಇದು ಸತ್ಯವಲ್ಲವಾದರೆ ಆ ರೀತಿ ಉತ್ತರವನ್ನಾದರೂ ಕೊಡುವ ಧೈರ್ಯ ತಾಳುವರೇ ? ಅನೇಕ ಶಹರಗಳಲ್ಲಿ ಇಂಥ ಕ್ಲಬ್ಬುಗಳು ನಡೆಯುತ್ತಿದೆ. ಪ್ರತಿ ಯೊಂದು ದೊಡ್ಡ ಷಹರಿನಲ್ಲಿಯೂ ಬೋರ್ಡುಗಳನ್ನು ಹಾಕಿಕೊಂಡು ರೊಕ್ಕದಾಟವಾಡುವ ಕ್ಲಬ್ಬು ಗಳಿವೆ. ಈ ಕ್ಲಬ್ಬುಗಳು ಏತಕ್ಕಾಗಿ ಇವೆ ಎನ್ನುವುದನ್ನು ನೋಡುವುದಕ್ಕೆ ನಿಮ್ಮ ಆಡಳಿತ ಕುರುಡಾ ಗಿದೆಯೇ ? ಪೋಲೀಸ್ ಅಧಿಕಾರಿಗಳು ಏನನ್ನೂ ಇಲ್ಲದೆ ಉತ್ತಮರಾದ ನಿರಪರಾಧಿ ಜನರನ್ನು ಖಟ್ಲೆ ಹಾಕಿ ತೊಂದರೆಪಡಿಸುವಾಗ ಅವರಿಗೆ ಈ ಕ್ಲಬ್ಬುಗಳನ್ನು ನೋಡುವುದಕ್ಕೆ ಆಗದಿದ್ದರೆ ಅವರು ಕಣ್ಣುಗಳಿಗೆ ಯಾವ ಕನ್ನಡಕವನ್ನು ಹಾಕಿದ್ದಾರೆ ಸ್ವಾಮಿ ? ಹಣದ ಬಾಬುಗಳು ಬರುವುದು ಇಲ್ಲದೆ ಇದ್ದರೆ ಇಂಥ ಸಂದರ್ಭಗಳು ಬಹಿರಂಗವಾಗಿ, ಬಟ್ಟಬಯಲಿನಲ್ಲಿ ನಡೆಯುತ್ತಿದ್ದರೂ, ಜೂಜಾಟ ಗಳು ಮಾರ್ಕೆಟ್‌ಗಳಲ್ಲಿ, ಜಾತ್ರೆಗಳಲ್ಲಿ ನಡೆದರೂ ನೋಡಲಾರದಂತೆ ಇರುವರೇ ! ಕೆಲವು ದರೋಡೆ ಗಳು, ಕಳುವುಗಳು ಯಾವ ರೀತಿಯಿಂದ ಆಗಲಿಕ್ಕೆ ಹತ್ತಿವೆ ಎನ್ನುವುದನ್ನು ಗಮನಿಸಿದರೆ "ಕಳ್ಳ ಹೊಕ್ಕ ಮನೆಗೆ ಎಣ್ಣೆ ದಂಡ" ಎಂಬಂತಾಗಿದೆ. ಕಳವು ಮುಂತಾದುವು ಆದಾಗ ಪೋಲೀಸರಿಗೆ ಫಿರ್ಯಾದು ಕೊಟ್ಟರೆ ಅವನೇ ಕಳ್ಳತನ ಮಾಡಿದನೋ ಎನ್ನುವಂತೆ ಪ್ರಶ್ನೆ ಮಾಡುತ್ತಾರೆ. ಪೋಲೀ ಸರು ತಪಾಸಣೆ ಮಾಡುವುದಕ್ಕಿಂತ ಹೆಚ್ಚಾಗಿ ಫಿರ್ಯಾದು ಕೊಟ್ಟವನನ್ನು ಕುರಿತು ಎಲ್ಲಿ ಹೋಯಿತು, ಎಲ್ಲಿ ಇಟ್ಟಿದ್ದೆ, ಯಾವಾಗ ಹೋಯಿತು, ಹೇಗೆ ಹೋಯಿತು ಹೋದದ್ದು ಸುಳ್ಳೋ ದಿಟವೋ ಎನ್ನುವ ಅನೇಕ ಪ್ರಶ್ನೆಗಳನ್ನು ಅವನಿಗೆ ಹಾಕುತ್ತಾರೆ ಮತ್ತು ಅವನನ್ನು ದಂಡಿಸಿ ಅವನ ಕಡೆಯಿಂದ ಹಣ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದನ್ನು ನೋಡಿ ನಾವು ಏಕೆ ಫಿರ್ಯಾದು ಕೊಡ ಬೇಕು ಎಂದು ಜನ ಭಾವಿಸುತ್ತಾರೆ, ಅಂಜುತ್ತಾರೆ. ಕಳ್ಳರನ್ನು ಹಿಡಿಯುವುದಕ್ಕೆ ಪೋಲೀಸಿ ನವರು ಹೋದಾಗ ಅದು ತಪಾಸಣೆಯಾಗಲಿಲ್ಲ ಎಂದು ಹೇಳಿದರೆ ಜನತೆಗೆ ಕೊಟ್ಟಂತಹ ಭಾವನೆ ಸರಿಯಾದುದೇ ? ಕಳ್ಳಕಾಕರನ್ನು ನಿರ್ಮೂಲ ಮಾಡುತ್ತೇವೆ ಕುಡುಕರನ್ನು ನಿರ್ಮೂಲ ಮಾಡುತ್ತೇವೆ ಎಂದು ಮಾನ್ಯ ರಾಮರಾಯರು ಹೇಳಿದಂತೆ ನಿಜವಾಗಿಯೂ ಇಲ್ಲಿ ತಪ್ಪಿದೆ ಎಂದು ಹೇಳಿದ್ದರೆ ನಾನು ಅವರು ನ್ಯಾಯವಾದಿಗಳೆಂದು ಹೇಳಬಹುದಿತ್ತು; ನಿಮಗೇ ತಿಳಿದಂತೆ ಇಂದು ಪ್ರತಿಯೊಂದು ಮೂಲೆ ಮೂಲೆಯಲ್ಲಿಯೂ ಕುಡುಕರ ಸಂಖ್ಯೆ ಹೆಚ್ಚಿದೆ, ಇಂದು ನಿಮ್ಮ ಪೋಲೀಸು ಇಲಾಖೆಯಲ್ಲಿರುವ ಅಧಿ ಕಾರಿಗಳಲ್ಲಿ ಕುಡುಕರಿಲ್ಲವೇ ? ಪೋಲೀಸು ಇಲಾಖೆಯಲ್ಲಿ ಕುಡಿಯಲಾರದಂತಹವರೂ ಇದ್ದಾರೆ, ನಿಮ್ಮ ಮಂತ್ರಿಮಂಡಲದಲ್ಲಿ ಕುಡಿಯುವವರು ಇಲ್ಲವೇ ಎನ್ನುವುದನ್ನು ನಮ್ಮ ಮಾನ್ಯ ಗೃಹಮಂತ್ರಿ

(ಶ್ರೀ ಕೆ. ಎಚ್. ಪಾಟೀಲ್)

ಗಳಾದ ಶ್ರೀಮಾನ್ ರಾಮರಾಯರು ತಮ್ಮ ಹೃದಯವನ್ನು ಮುಟ್ಟಿ ನೋಡಿ ಪರೀಕ್ಷೆ ಮಾಡಿಕೊಳ್ಳಲಿ ಇಲ್ಲವಾದರೆ ಧೈರ್ಯದಿಂದ ಇಲ್ಲವೆಂದು ಹೇಳಲಿ. ನಿಮ್ಮ ಗಮನವನ್ನು ಏಕೆ ಇಲ್ಲಿ ಸೆಳೆಯುತ್ತಿದ್ದೇನೆಂದರೆ ನಿಮ್ಮ ಸುತ್ತಮುತ್ತ ಇರುವವರು ಯಾರೂ ಕುಡುಕರು ಅಲ್ಲದಿದ್ದರೆ ಅಂತಹವರು ಇಲ್ಲ ಎಂದೂ ಖಡಾಖಂಡಿತವಾಗಿ ಇಲ್ಲ ಎಂದು ಇಲ್ಲಿ ಹೇಳಲಿ, ಇದರಿಂದ ಎಷ್ಟು ಜನ ಸತ್ಯವಂತರು ಇದ್ದಾರೆ ಎನ್ನುವುದು ಎಲ್ಲರಿಗೂ ತಿಳಿಯುತ್ತದೆ, ಆದ್ದರಿಂದ ಸತ್ಯವನ್ನು ಖಂಡಿತವಾಗಿ ಹೇಳಲಿ.

ಶ್ರೀ ಕೆ. ವಿ. ಶಂಕರಗೌಡ.—ಯಾರೂ ಕುಡಿಯುವವರು ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ಎಜುಕೇಷನ್ ಮಿನಿಸ್ಟರು, ನಮ್ಮ ಗೃಹ ಸಚಿವರು ಆ ಬಗ್ಗೆ ಸತ್ಯ ಹೇಳಲಿ, ಪೋಲೀಸಿನವರು ಶಾಂತಿ ಪಾಲನೆ ಮಾಡುವವರು ಎಂದು ನೀವು ಮಂತ್ರಿಗಳಾಗಿ ಎಲ್ಲೆಲ್ಲ ಹೋಗಿ ಹೇಳಿಕೆಗಳನ್ನು ಕೊಡುತ್ತೀರಿ ನಿಮ್ಮೊಡನೆಯೇ ನಿಮ್ಮ ರಕ್ಷಣೆಗಾಗಿ ಪೋಲೀಸಿನವರನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತೀರಿ. ಇದರೊಳಗೆ ತಾವು ಕರೆದುಕೊಂಡು ಹೋಗುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಪೋಲೀಸರು ಕಳ್ಳಬಟ್ಟಿ ಸಾರಾಯಿ ಮಾಡುವವರನ್ನು ಹಿಡಿಯುವವರನ್ನು ಬಿಟ್ಟು ನಿರಪರಾಧಿ ಜನರನ್ನು ವಿನಾಕಾರಣ ಹಿಡಿದು ಶಿಕ್ಷೆಗೆ ಒಳಪಡಿಸಲು ಅವರನ್ನು ಕೋರ್ಟಿಗೆ ತಂದು ಅವರನ್ನು ಯಾವರೀತಿಯಾಗಿ ಹಿಂಸೆಗೆ ಒಳಪಡಿಸುತ್ತಿದ್ದಾರೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ. ಅಲ್ಲದೆ ಮಂತ್ರಿಗಳಾದವರು ಇದನ್ನೆಲ್ಲ ನೋಡಿಯೂ ಕೇಳಿಯೂ ಸುಮ್ಮನಿದ್ದರೆ, ಇಂದು ರಾಜ್ಯದಲ್ಲಿ ಸಜ್ಜನರು ಎಲ್ಲಾ ಕಡೆಗೂ ಅಡ್ಡಾಡುವುದಕ್ಕೆ ಆಗುವುದಿಲ್ಲ, ಭಯಾನಕವಾಗಿದೆ. ಸತ್ಯವಂತರು ಎಲ್ಲಿ ಹೋದರೂ ನ್ಯಾಯ ದೊರಕದಾಗಿದೆ. ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದಿದ್ದವರು ಪೋಲೀಸರ ತೊಂದರೆಯಿಂದಾಗಿ ಅವರಿಗೆ ಅಲ್ಲಿ ಕೆಲಸಗಳನ್ನು ಮಾಡಲು ಆಗುತ್ತಿಲ್ಲ; ಇನ್ನು ತೊಂದರೆಗಳನ್ನು ಜನಸಾಮಾನ್ಯರಿಗೆ ಕೊಡುವ ರೀತಿ ನೋಡಿದರೆ ಬಹಳ ವಿಚಿತ್ರವಾಗಿರುತ್ತದೆ, ಇದರಿಂದ ನಿಮ್ಮ ಇಲಾಖೆಯಲ್ಲಿ ಇನ್‌ಎಫಿಷಿಯನ್ಸಿ ಎನ್ನುವುದು ಯಾವ ಮಟ್ಟದಲ್ಲದೆ ಎಷ್ಟು ವರ್ಷಗಳಿಂದ ಇದೆ ಎನ್ನುವುದನ್ನು ನೋಡಬಹುದು ಅಲ್ಲದೆ ನಿಮಗೆ ಗೊತ್ತಿರುವ ಹಾಗೆ ತಪಾಸಣೆಗಾಗಿ ತೆಗೆದುಕೊಂಡ ಪ್ರಶ್ನೆಗಳಲ್ಲಿ ಇನ್ನೂ ಎಷ್ಟು ಕೇಸುಗಳಲ್ಲಿ ಎನ್‌ಕ್ವೈರಿಯಾಗದೇ ಉಳಿದಿದೆ ಎನ್ನುವುದನ್ನಾದರೂ ತಿಳಿಸುತ್ತೀರಾ ? ನಿಮ್ಮ ಪೋಲೀಸಿನವರನ್ನು ಸತ್ಯವಂತರನ್ನಾಗಿ ಲಂಚದಿಂದ ದೂರವಿರುವಂತೆ ಮಾಡಲು ಸಮಾಜದ ನಿರ್ಮಾಣದ ಕಾರ್ಯದಲ್ಲಿ ನೀವು ಮಾಡಿರುವ ಪ್ರಯತ್ನವೇನು ? ಸುಮಾರು ಆರೇಳು ವರ್ಷಗಳಿಂದಲೂ ನಿಮ್ಮಲ್ಲಿರುವ ಸತ್ಯವಂತರಾದ ಅಧಿಕಾರಿಗಳಲ್ಲಿ ಎಫಿಷಿಯನ್‌ಸೀ ಎನ್ನುವುದು ಮಾಯವಾಗಿ ಹೋಯಿತೇ ! ಇವೆಲ್ಲಾ ಮಾಯವಾಗಬೇಕಾದರೆ ಮೊದಲು ಆಡಳಿತದಲ್ಲಿರುವ ಅಧಿಕಾರಿಗಳು ಪ್ರಾಮಾಣಿಕರಾಗಿರಬೇಕು, ಹಿರಿಯ ಜನರು ಪ್ರಾಮಾಣಿಕರಾಗಿದ್ದರೆ ಕಿರಿಯರೂ ಕೂಡ ಅದನ್ನೇ ಅನುಸರಿಸುತ್ತಾರೆ, ಎಂದು ಮಾನ್ಯ ಗೃಹಸಚಿವರಿಗೆ ಅವರ ಗಮನಕ್ಕೆ ಇಲ್ಲಿ ತರಬೇಕಾಗಿದೆ. ಮತ್ತು ಮಾನ್ಯ ಗೃಹ ಸಚಿವರ ಗಮನಕ್ಕೆ ಇಲ್ಲ ಇನ್ನೂ ಒಂದು ವಿಚಾರವನ್ನು ತರಬೇಕಾಗಿದೆ, ಇಲ್ಲಿ ಅವರ ಸ್ವಂತದ ವಿಚಾರವನ್ನೇ ವಿಚಾರಿಸಲಿ. ಇವರ ಹೆಸರಿನಲ್ಲಿ ಎಂ.ಪಿ.ಸಿ.ಸಿ. ಯವರ ಅಕೌಂಟಿನಲ್ಲಿ ಸುಮಾರು ಮೂರು ಲಕ್ಷಕ್ಕೂ ಮೀರಿದ ರೂಪಾಯಿಗಳಷ್ಟು ಹಣ 1962ರಲ್ಲಿ ಇತ್ತು ಎನ್ನುವುದು ನನಗೆ ಚೆನ್ನಾಗಿ ತಿಳಿದಿದೆ. ಇದು ಹೇಗೆ ಬಂತು. ಲಂಚ ರುಷುವತ್ತುಗಳ ಮೂಲಕ ಬಂದ ಹಣವಲ್ಲವೆನ್ನುವುದನ್ನಾದರೂ ವಿಚಾರಣೆ ಮಾಡಿಕೊಳ್ಳಲು ಸಿದ್ಧರೇ !

ಅಧ್ಯಕ್ಷರು.—ಇದು ಬಡ್ಜೆಟ್ಟಿನಲ್ಲಿ ಬರುತ್ತದೆಯೇ ?

ಶ್ರೀ ಕೆ. ಹೆಚ್. ಪಾಟೀಲ್.—ಈ ಹಣ ಒಂದು ಪಕ್ಷದ ಚುನಾವಣೆಗಾಗಿ ಖರ್ಚಾಗಿದೆ. ಮತ್ತು ಚುನಾವಣೆಗಳಲ್ಲಿ ಒಂದು ಪಕ್ಷಕ್ಕಾಗಿ ಕೊಡವ ಹಣ ಹಾಗೂ ಪೋಲಸಿನವರಿಗಾಗಿ ಕೊಡತಕ್ಕ ಕೆಲವು ಬಾಬುಗಳೂ ಇವೆ. ಇದನ್ನು ನಾವು ಕೇಳುವ ಹಾಗಿಲ್ಲ. ಕೆಲವು ಸಂದರ್ಭಗಳಲ್ಲಿ ಇದನ್ನು ಇಲ್ಲ ಉದಾಹರಣೆಯಾಗಿ ಏಕೆ ಹೇಳಬೇಕಾಗಿದೆ ಎಂದರೆ ಇದು ಪೋಲೀಸಿನವರ ಆಡಳಿತದಲ್ಲಿ ಸಿ.ಐ.ಡಿ. ಬಾಬಿನಲ್ಲಿ ತಮಗೆ ಬೇಕಾದ ಹಾಗೆ ಕಾಂಗ್ರೆಸ್ಸಿನ ಅಧಿಕಾರಾರೂಢರು ಖರ್ಚು ಮಾಡಲು ಅವಕಾಶ ಇದೆ. ಇದರ ವಿವರಗಳನ್ನು ನಾವು ಕೇಳುವಂತಿಲ್ಲ, ಇಂತಹ ಬಾಬುಗಳ ವಿಚಾರ ಚರ್ಚೆಗೆ ಪಬ್ಲಿಕ್ ಅಕೌಂಟ್ಸ್ ಸಮಿತಿ ಮುಂದೆ ಕೂಡ ಬರುವಂತಿಲ್ಲ. ಇಂತಹವರಿಗಾಗಿ ಕೊಟ್ಟ ಹಣವನ್ನು ಹೇಗೆ ಉಪಯೋಗಿಸಿದಿರಿ ಎಂದೂ ಕೂಡ ನಾವು ಕೇಳುವ ಹಾಗಿಲ್ಲ, ಇದಕ್ಕಾಗಿ ಇಲ್ಲಿ ನಾನು ಇಲ್ಲಿ ಕೇಳಬೇಕಾಗಿದೆ. ಬಡ್ಜೆಟ್ಟಿನಲ್ಲಿ ಇದು ಇಲ್ಲದಿದ್ದರೂ ಇದಕ್ಕೆ ಸಂಬಂಧವಿದೆ. ಇದು ಯಾರ ಹೆಸರಿನಲ್ಲಿದೆ. 1962 ರಿಂದಲೂ ಇಟ್ಟಿದ್ದಾರೆ. ನನಗೆ ಗೊತ್ತಿದ್ದ ಮಟ್ಟಿಗೆ ಹೇಳುವುದಾದರೆ ನನ್ನ ಮಾಹಿತಿಯಂತೆ ಸುಮಾರು ಮೂರು ಲಕ್ಷ ಚಿಲ್ಲರೆಯಷ್ಟು ಹಣ ಶ್ರೀ ರಾಮರಾಯರ ಹೆಸರಿನಲ್ಲಿಟ್ಟಿದ್ದಾರೆ.

ಅದು ಅವರ ಹಣವಲ್ಲ. ಶ್ರೀಮಾನ್ ರಾಮರಾಯರು ಸತ್ಯವಂತರಾಗಿದ್ದರೆ ಇದುವರೆಗೂ ಇಷ್ಟು ಹಣಕ್ಕೂ ಇನ್‌ಕಂಟ್ಯಾಕ್ಸನ್ನು ಕೊಟ್ಟಿದ್ದಾರೆಯೇ ಎಂದು ನಾನು ಇಲ್ಲಿ ಕೇಳಬೇಕಾಗಿದೆ, ಯಾಕೆಂದರೆ ಅವರೇ ಗೃಹಸಚಿವರಾಗಿದ್ದು ನ್ಯಾಯವಂತರಿರಬೇಕಾದದ್ದು ಅವಶ್ಯ.

Sri S. D. KOTHAVALE (Sankeshwar).—On a point of order, Sir. Hon'ble Member is making a personal charge against the Home Minister who is a member of this House. Such a charge cannot be made. Rule 288 (2) says:

"A member while speaking shall not make a personal charge against a member"

Mr. SPEAKER.—The Chair has not been able to follow what the relevancy is with regard to M.P.C.C. so far as budget is concerned.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಇಲ್ಲಿ ವೈಯುಕ್ತಿಕವಾಗಿ ಮಾನ್ಯ ಸಚಿವರ ಮೇಲೆ ಹೇಳುತ್ತಿಲ್ಲ.

ಅಧ್ಯಕ್ಷರು.—ಇದರಲ್ಲಿ ಹೇಗೆ ಇದು ಬರುತ್ತದೆ?

ಶ್ರೀ ಕೆ. ಹೆಚ್. ಪಾಟೀಲ್.—ಇಲ್ಲಿ ಇಷ್ಟು ಹಣವನ್ನು ಯಾರು ಇಟ್ಟರು? ಇದರ ಮಾಹಿತಿ ನನಗೆ ತಿಳಿದಿರುವ ಪ್ರಕಾರ ಪೋಲೀಸು ಇಲಾಖೆಯವರಿಂದಲೂ ಕೂಡಿಸಿ ಇದನ್ನು ಚುನಾವಣೆಗೋಸ್ಕರ ಉಪಯೋಗ ಮಾಡಿದ್ದಾರೆಂದು ನನಗೆ ತಿಳಿದಿದೆ, ಇದು ತಪ್ಪಲ್ಲವೇ?

ಇನ್ನು ಪೋಲೀಸು ಅಧಿಕಾರಿಗಳು ನಾನಾ ರೀತಿಯ ತಪ್ಪುಗಳನ್ನು ಮಾಡುತ್ತಿದ್ದಾರೆ. ಇಲ್ಲಿ ಅಧಿಕಾರಿಗಳಲ್ಲಿ ಯಾರೂ ಕುಡಕರಿಲ್ಲವೇ, ಇಂತಹ ಕುಡುಕರು ಇದ್ದರೆ ಇವರಿಂದ ಯಾವ ರೀತಿಯಾಗಿ ಕಟ್ಟಳೆಗಳನ್ನು ಸರಿಯಾಗಿ ತಪಾಸಣೆ ಮಾಡಲು ಸಾಧ್ಯ ಮತ್ತು ಅದಳತದಲ್ಲಿ ಇಂತಹ ಹೀನವೃತ್ತಿಯವರು ಇದ್ದರೆ ಇವರಿಂದ ಮಹತ್ವವಾದ ಸಮಸ್ಯೆಗಳು ಬಗೆಹರಿಯುವವೇ? ಇಂತಹ ಪೋಲೀಸಿನವರಿಗೆ ಧಿಕ್ಕಾರ ಎಂದು ಹೇಳಲೇ ಬೇಕಾಗುತ್ತದೆ. ಅದೆ ಅನೇಕ ನನ್ನ ಸ್ನೇಹಿತರು ಹೇಳಿದ ಹಾಗೆ ಪೋಲೀಸಿನವರಲ್ಲಿ ಪ್ರಾಮಾಣಿಕರೂ ಸತ್ಯವಂತರೂ ಇರುತ್ತಾರೆ. ಪೋಲೀಸು ಅಧಿಕಾರಿಗಳಿಗೆ ಅವರ ಪಗಾರವನ್ನು ಹೆಚ್ಚಿಸಬೇಕು ಎಂದು ಇಲ್ಲಿ ಕೆಲವರು ಹೇಳಿದ ಹಾಗೆ ನಾನೂ ಹಾಗೆ ಹೇಳುವವರಲ್ಲಿ ಒಬ್ಬನಾಗಿದ್ದೇನೆ. ಪೋಲೀಸಿನವರಿಗೆ ಪಗಾರ ಹೆಚ್ಚು ಮಾಡಬೇಕು. ಆದರೆ ಹಣ ತಿನ್ನಲು ಬಿಡಬೇಡಿ. ಅವರ ಹೊಟ್ಟೆಗೆ ಬೇಕಾದಷ್ಟು ಪಗಾರ ಹೆಚ್ಚು ಮಾಡಿರಿ ಅವರಿಗೆ ಬೇಕಾದ ಮನೆಗಳನ್ನು ಕಟ್ಟಿಸಿಕೊಡಿ. ಸಾರ್ವಜನಿಕರಂತೆ ಅವರ ಮಕ್ಕಳಿಗೆ ವಿದ್ಯಾಬುದ್ಧಿಗಳನ್ನು ಕಲಿಸಲು ಅವಕಾಶಗಳನ್ನು ಮಾಡಿಕೊಡಿ. ಅವರ ಮಕ್ಕಳೂ ಸತ್ಪುತ್ರರಾಗಿ ಬಾಳಲಿ ಮತ್ತು ಎಲ್ಲ ವಿಧವಾದ ಸೌಕರ್ಯಗಳನ್ನೂ ಅವರಿಗೆ ಕೊಡಿ. ಇಂದು ಅನೇಕ ದುರ್ನಡತೆಯ ಪೋಲೀಸ್ ಅಧಿಕಾರಿಗಳು ಕಿಂಗ್ಸ್ ಮೆಡಲ್ ಪಡೆಯುತ್ತಿರುವುದು ಸತ್ಯ ನಿಷ್ಠಾವಂತ ಅಧಿಕಾರಿಗಳು ತಮ್ಮ ಪ್ರಮಾಣಿಕ ವರ್ತನೆ ಪರಿಣಾಮದಿಂದ ಉಪವಾಸ ಬೀಳುತ್ತಿರುವುದು ಬಹು ದುಃಖದಿಂದ ನಾವು ಗಮನಿಸುವಂತಾಗಿದೆ.

Mr. SPEAKER.—I will leave it at that. I will not pursue it; It will be pursued at the proper time.

ಶ್ರೀ ಕೆ. ಎಚ್. ಪಾಟೀಲ್.—ಇಷ್ಟೆಲ್ಲಾ ಕೊಟ್ಟು ಪುಣ್ಯಾತ್ಮರಾಗಿ ನೀವು ಅಧಿಕಾರಿಗಳ ಮೇಲೆ ಬಿಟ್ಟು ಹೋಗುವಂತೆ ಅವರಲ್ಲಿ ಹಸ್ತಕ್ಷೇಪ ಮಾಡಲು ಹೋಗಬೇಡಿ. ನಿಮ್ಮ ಎಲ್ಲ ತಿಳುವಳಿಕೆಗಳನ್ನೂ ಅವರಿಗೆ ಸದುಪಯೋಗವಾಗುವಂತೆ ಮಾಡಿ ನ್ಯಾಯದಿಂದ ಕೆಲಸ ಮಾಡುವ ದಾರಿಯನ್ನು ಅವರಿಗೆ ತೋರಿಸಿ ಕೊಡಿ. ಇಷ್ಟೇ ಅಲ್ಲ ನಮ್ಮ ಮಿನಿಸ್ಟರಾದವರು ತಪ್ಪುಮಾಡಿದರೂ ಕೂಡ ನಿಮ್ಮ ಪೋಲೀಸು ಇಲಾಖೆಯಲ್ಲಿರುವ ಅಧಿಕಾರಿಗಳು ನಿಮ್ಮನ್ನೂ ವಿಚಾರಣೆ ಮಾಡಲು ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆಂದು ಸರಿಯಾಗಿ ಮಾರ್ಗದರ್ಶನ ನೀಡಿ ಮತ್ತು ಹಾಗೆ ತೋರಿಸುವ ಸೌಜನ್ಯವನ್ನೂ ನೀಡಿ ಎಂದು ಹೇಳಿ ಇಷ್ಟು ಸಮಯವನ್ನು ಮಾನ್ಯ ಅಧ್ಯಕ್ಷರು ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Regarding the point order, I would like to know..........

Sri H. SIDDAVEERAPPA.—Which point of order, Sir? Is it the point of order raised by Sri Kothavale? I want to know whether you are giving a ruling with regard to that point of order?

Mr. SPEAKER.—Why should I not?

SRI H. SIDDAVEERAPPA.—If that is so, I want to say a word about it.

MR. SPEAKER.—The Chair is bound to give a ruling when a point of order is raised. What is it that Sri H. Siddaveerappa wants to say?

SRI H. SIDDAVEERAPPA.—I think, it is not a correct reading of 288 (2) because Sri Patil did not make any allegations against Sri Rama Rao in his individual capacity. Otherwise, it would be impossible to refer to anybody. Sri Rama Rao is different from being the Home Minister; but it is synecdoche—it is something like the container put for the content. Without Sri Rama Rao, there is no Home Minister. We have nothing to do against the personal affairs of Sri Rama Rao. We are only interested in his work as the Home Minister.

MR. SPEAKER.—Point of order raised by Sri S. D. Kothavale is with regard to certain observations made by Sri K. H. Patil. Sri Kothavale contends that under rule 288 (2), hon'ble member Sri Patil has committed a breach of the rule and therefore the point of order arises. Explanation is rendered by hon'ble member Sri H. Siddaveerappa that it is not a personal charge and Sri Patil does not deny it. If there is no personal charge, there is no violation of the rule. That is why I was saying, whenever personal allegations are made, to keep distinctly clear, when members say anything about the member in the capacity of the Minister by holding that office, then members are entitled to criticise. By bringing in irrelevant matters of what is found in some accounts which is uncovered by this and say that that amount has been misappropriated and so on, it is certainly outside and irrelevant to the Debate. I have to over-rule it. Any how, it is the best thing to leave the matter at that.

5-30 P.M.

SRI M. A. AMALORPAVAM (Bharathinagar).—Mr. Speaker, I rise with your kind permission to support the Demands placed by the Hon'ble Minister for Home and Labour.

A few days ago the hon'ble member Sri H. Siddaveerappa while defining democracy said democracy in Mysore is for the Congress, by the Congress and of the Congress. Thereby he meant that it was the Congressmen that are actually dominating the show. I wish that were true. But unfortnuately that is not so. I beg to differ from the hon'ble member and we Congressmen feel this is the Government of the people by the representatives of the people, for the benefit of the opposition more than it is for the Congressmen. Whenever we approach our Ministers or other officers we the Congressmen are not treated with the courtesy which we deserve. We feel that the members of the opposition receive greater courtesy and consideration than the members of the ruling party. Though they have been fearlessly attacking the police and actually identifying themselves with the policemen, the true state of affairs is the policemen are trying to placate the members of the opposition rather than the Congressmen. I think it is because of this reason that we Congressmen do not attack the police as much as the

others do. We do not interfere as much as others do; we do not intervene as much as others do and for this reason, I believe, even the police officers and the policemen are not giving the respect which we do deserve. I do not know on what grounds and for what reason the hon'ble members of the opposition are criticising the police as if they are extending greater co-operation to us rather than to them. Mr. Speaker, liberty cannot be and should not be confused with licence. With the greatest difficulty we managed to get independence for our country and when all of us sacrificed so much inorder to achieve freedom, we were not interested only in the political freedom. We wanted to achieve economic freedom for this country. After 20 years of Congress rule now we have got many of the parties ruling in various parts of the country and we have not been able to get economic freedom for which we laboured so much. Many of the students left their colleges; many lawyers left their practice and many doctors and other professionals lost their lucrative practice and sacrificed all that they had in order that we could be free from the shackles of slavery and establish a society which would be free from hunger, disease, famine, illiteracy and so many other undesirable things. Despite the fact that the Congress Government has done quite a bit during its 20 years of rule, we have still to go a long way to see that we achieve economic freedom. This is an underdeveloped country as every one knows. I do not doubt the patriotic feelings of the members of the opposition. Many of them really contributed quite a lot for the freedom of this country. Their ability, their service and their sacrifices are not doubted by us. But unfortunately the members of the opposition are never tried of criticising Congressmen as if there is not a single virtue in them; they begin to imagine that everything they say is right and everything we do or say is wrong. This kind of an attitude and approach, I am afraid, will never conduce to harmony or good understanding between the two wings. We, on the Congress side as gentlemen, do concede that there are many draw backs in the administration; we have committed blunders as a result of lack of experience. But the hon'ble members of the opposition instead of appreciating and supporting what is right, they run down all the things that have been done by the Congress Government during the last 20 years. In spite of the fact that we have completed three Plans, in spite of the fact that we have built so many factories, inspite of the fact that we have improved the conditions in the field of agriculture, commerce industry, technology, science, education, and in so many other fields, still our country is in such a backward state. At this juncture, the patriotic gentlemen who cry hoarse from the housetops that this country is in a very backward are indulging in the most unconstitutional gheraos and actually standing as an impediment to the progress of the country. Let them by all means demonstrate in a constitutional manner; let them protest as the opposition ought to protest. And unless the opposition finds fault with the wrong actions of the Government the country can never prosper. If democracy is to succeed, if democracy has to thrive in the country, it is only through an effective, a sound, a sensible and

(SRI M. A. AMALORPAVAM)

sober opposition. But, here, knowing fullwell there is scarcity, there is famine, there is disease, there is pestilence and there are very many difficulties, they indulge in gheraos. How can we ever expect this country to grow in a constitutional manner? Just because democracy has come it does not mean at every stage there should be demonstration and running down the administration. Sir, let us take the case of Naxalbari. Those gentlemen who instigated this kind of gheraos ..

SRI K. H. RANGANATH (Mudigere).—Sir, I rise on a point of order. My hon'ble friend is raising the qnestion of Naxalbari. Can the hon'ble Member say anything against West Bengal ?

MR. SPEAKER.—A point of order has been raised that reference to Naxalbari violates the rules framed by the Mysore Legislature. I am aware of the contents ; it may be irrelevant and if irrelevancy is the test, then there is a breach. But, if on the other hand he refers to something incidental, I do not think there is any point of order.

SRI K. H. RANGANATH.—If you can kindly bear with us, he is referring to some people who instigated there.

MR. SPEAKER.—Order, order.

SRI S. SIVAPPA.—Sir, the hon'ble Member cannot quote the instance of Naxalbari; it is anti-national. He does not know what is happening there?

MR. SPEAKER,—I wanted to give a ruling on the point of order raised by Sri Ranganath. In the meanwhile, he interjected ; that is bad enough. The Hon'ble the Leader of the Opposition Sri Sivappa doing the samething is something I cannot understand. I will hear him, if necessary. If he simply gets up and says, "I want this and I don't want that", it becomes difficult.

SRI H. SIDDAVEERAPPA.—Sir, when I mentioned about Madras, you were pleased to say—I am not questioning your ruling—that it should not be brought in here. The point that I made was that just as in Madras they burnt the records, please do not burn it when you go out of office ; let it be on record.

MR. SPEAKER.—Thereby the hon'ble members cast a reflection upon the Government of a State which is not here to defend.

SRI H. SIDDAVEERAPPA.—It is a statement of fact.

MR. SPEAKER.—According to the member it is a fact but I will not call it a fact on the floor of the House. It contains, an insinuation against a Government.

SRI H. SIDDAVEERAPPA.—Then, is not Naxalbari an insinuation against the West Bengal Government ?

MR. SPEAKER.—Whether Naxalbari amounts to an insinuation against the West Bengal Government, I will deeply think over it and give a ruling tomorrow.

SRI M. A. AMALORPAVAM.—Mr. Speaker, Sir, by ignoring the incidents which do not contribute to the development of the economy of this country, are actually doing a positive disservice. Our rouse

against the Home Minister and the Police Department is that, whenever they take any action, they do not take it firmly. If the people of this country, particularly the people of the State of Mysore have gained confidence in the agitational approach, it is mainly due to the fact that the Government when it had to put down certain turbulent elements, it has been weak-kneed and has acted in a half-hearted manner. Therefore, we appeal to the Minister for Home and Labour that whenever he has to take action in the interest of peace and order of this State, he must be stern and try to tackle the situation in such a manner that it will evoke respect from the constitutional-minded and law-abiding citizen. The Congress is not going to be in power eternally. Everyone is given the power to vote and when the people chose the Congress, we are not guilty of getting into power. It is no use unnecessarily arraigning the Congress Party of getting the support of the police or anybody else. We appeal to the Minister for Home and Labour that when the interests of the law-abiding citizen are at state, he should not bother about what is happending in the country. Let him in a calm manner take such steps as would create in the minds of the people that we are law-abiding. We do not want that the Minister for Home and Labour should take such steps as would undermine the democratic conventions of the country. But we are all feeling very often that we have been sadly let down by the Government. Wherever a stern action is necessary, the Government have always taken half-hearted action and I hope that at least in future they will try to realise the position and act in a manner that would help the law-abiding citizen of this State. We do not want these gheraos,and our heads to be broken.

I congratulate the Home Minister on the wonderful manner in which he handled the 26th incident in Bangalore City. With these words, I thank you, Mr. Speaker, for allowing me to speak.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಅಧ್ಯಕ್ಷರೇ, ಬಂದೀ ಖಾನೆ ಪೋಲೀಸ್, ಕಾರ್ಮಿಕ ಹಾಗೂ ಉದ್ಯೋಗ ಮತ್ತು 41 (ಎ) ಈ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈಗತಾನೆ ಮಾತನಾಡಿದ ಕಾಂಗ್ರೆಸ್ ಸದಸ್ಯರು ಶಾಂತಿಭಂಗ ಮಾಡತಕ್ಕವರ ವಿರುದ್ಧ ಕ್ರೂರವಾಗಿ ಕ್ರಮ ಕೈಕೊಳ್ಳಬೇಕೆಂದು ಹೇಳಿ 26ನೇ ತಾರೀಖು ರಾಜ್ಯದ ಗೃಹಖಾತೆ ಯವರು ಮಾಡಿದಂತಹ ಪೋಲೀಸ್ ಬಂದೋಬಸ್ತು ಮತ್ತು ಅವರ ವಿರುದ್ಧವಾಗಿ ಮೆರವಣಿಗೆ ಹೊರಟಂತಹ ಜನರ ಮೇಲೆ ಅವರು ತೆಗೆದುಕೊಂಡಂತಹ ಕಾರ್ಯಕ್ರಮ ಬಹಳ ಶ್ಲಾಘನೀಯ ವಾಗಿದೆ ಎಂದು ಹೇಳಿ ಗೃಹಸಚಿವರನ್ನು ಮೆಚ್ಚಿ ಮಾತನಾಡಿದ್ದಾರೆ. ಕಾಲದ ಪರಿವೇ ಕೂಡ ನಮಗೆ ಇರಬೇಕು. ಹಮ್ಮುರಬಿ, ಬಿಸ್ಮಾರ್ಕ್, ಹಿಟ್ಲರ್ ಅಂತಹವರು ಹೋಗಿಬಿಟ್ಟಿದ್ದಾರೆ. ಇವತ್ತು ನಕ್ಸಲ್‌ಬಾರಿ, ಘೇರಾವೋಗಳು ಆಗುತ್ತಾ ಇರಬಹುದು, ಇದೇ ರೀತಿ ಕಾಂಗ್ರೆಸ್‌ನ ಅಧಃಪತನ, ಅನೀತಿಯುತವಾದ ಆಡಳಿತ ಮುಂದುವರಿಯುತ್ತಾ ಹೋದರೆ ಅಂತಹ ನಕ್ಸಲ್‌ಬಾರಿಗಳು, ಘೋರಾವೋಗಳು ದೇಶದಲ್ಲಿ ಎಲ್ಲ ಎಡೆ ಅನಿವಾರ್ಯವಾಗಬಹುದು. ಅದಕ್ಕೆ ಯಾರು ಕಾರಣರು ಎನ್ನುವುದನ್ನು 20 ವರ್ಷ ನಿರಂತರವಾಗಿ ಆಡಳಿತ ನಡೆಸಿದಂತಹ ತಾವುಗಳೆಲ್ಲಾ ಎದೆಮುಟ್ಟಿ ವಿಚಾರ ಮಾಡಬೇಕಾದ ಸಮಯ ಬಂದಿದೆ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳಬಹುದು. ಮತ್ತು ಅದರ ಜೊತೆಗೇ ಹೇಳಬಹುದು ಕೆಲವು ಮಾನ್ಯ ಸದಸ್ಯರು ಜೈಲಿನಲ್ಲಿ ಊಟ ಚೆನ್ನಾಗಿದೆ ಇತ್ಯಾದಿ ಎಲ್ಲಾ ಮಾತನಾಡಿದ್ದಾರೆ. ಕಾಂಗ್ರೆಸ್ ಸದಸ್ಯರು ಭೋಗದ ಕಾಲವನ್ನು ಮುಗಿಸಿ, ಇನ್ನು ತಾವು ಅಸ್ತಿತ್ವವನ್ನು ಉಳಿಸಿಕೊಳ್ಳಬೇಕು ಎಂದು ಕಂಡುಬಂದರೆ ಜೈಲಿಗೆ ಹೋಗುವಂತಹ ಕಾಲವೂ ಸನ್ನಿಹಿತವಾಗಿದೆ, ನಮ್ಮ ರಾಜ್ಯದಲ್ಲಿ ಅಲ್ಲವೇ ಇದ್ದರೂ ಕೇರಳದಲ್ಲಿ, ಮದ್ರಾಸಿನಲ್ಲಿ, ಪಶ್ಚಿಮ ಬಂಗಾಳದಲ್ಲಿ ತಮ್ಮ ಪಕ್ಷದವರು ತಮ್ಮ ಅಸ್ತಿತ್ವಕ್ಕೆ ರಾಜಕೀಯ ಹೋರಾಟ ಮಾಡಿ ತಾವು

(ಶ್ರೀ ಎಸ್. ಗೋಪಾಲ ಗೌಡ)

20 ವರ್ಷದ ಹಿಂದೆ ನೋಡಿದಂತಹ ಸೆರೆಮನೆಗಳನ್ನು ಪುನಃ ನೋಡುವಂತಹ ಅವಕಾಶ ಶೀಘ್ರವಾಗಿ ಬರುತ್ತಿದೆ, ಅದಕ್ಕೆ ತಾವೆಲ್ಲಾ ಸಿದ್ಧವಾಗಿರಬೇಕು. ತಾವು ಸ್ವತಃ ನೋಡಬಹುದು ಜೈಲಿನ ಸುಧಾರಣೆ ಎಷ್ಟರಮಟ್ಟಿಗೆ ಎನ್ನುವುದನ್ನು.

ಸ್ವಾಮಿ, 26ನೇ ತಾರೀಖು ನಡೆದಂತಹ ವಿಧಾನಸೌಧ ಚಲೋ ಮೆರವಣಿಗೆಯನ್ನು ಮುರಿಯುವುದಕ್ಕೆ ಈ ರಾಜ್ಯ ಸರ್ಕಾರದವರು ಬಹಳ ಕ್ರಮಗಳನ್ನು ತೆಗೆದುಕೊಂಡರು, ಕೆಲವರನ್ನು ಮೊದಲಿಗೆ ಬಂಧಿಸಿದರು, ಕೆಲವರು ಮೆರವಣಿಗೆ ಹೋಗುವವರನ್ನು ಬಂಧಿಸಿದರು, ಅವರ ಮೇಲೆ ಅಕ್ರಮ ಸಭೆ ನಡೆಸಿದ್ದಾರೆ ಎಂದು, ಆಯುಧಗಳನ್ನು ಧರಿಸಿದ್ದಾರೆ ಎಂದು ಇತ್ಯಾದಿ ಇತ್ಯಾದಿ ಕೆಲವು ವಿಧಿಗಳನ್ನು ಹಾಕಿ ಕೇಸು ಹಾಕಿದರು. ಮಾನ್ಯ ಗೃಹಸಚಿವರು ಸಭೆಗೆ ಒಂದು ಹೇಳಿಕೆ ಕೊಟ್ಟಿದ್ದನ್ನು ನಾನು ಓದಿದ್ದೇನೆ. ಈ ಕ್ರಮಗಳನ್ನು ತೆಗೆದುಕೊಳ್ಳದೇ ಹೋಗಿದ್ದರೆ ವಿಧಾನ ಸೌಧವನ್ನು ಅವರು ಉರುಳಿಸುತ್ತಾ ಇದ್ದರು, ಮುಖ್ಯ ಮಂತ್ರಿಗಳ ತಲೆಯನ್ನು ಸಹಸ್ರ ಹೋಳು ಮಾಡುತ್ತಾ ಇದ್ದರು ಅಂತ ಹೇಳಿದ್ದಾರೆ. ಇಂತಹ ವರದಿಗಳನ್ನು ಯಾರಾವರೂ ಪೋಲೀಸ್ ಅಧಿಕಾರಿಗಳು, ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿನವರು ಕೊಟ್ಟಿದ್ದರೆ ಅವರು ಶಿಕ್ಷಾರ್ಹರು ಎಂದು ಹೇಳುತ್ತೇನೆ. ಅಥವಾ ಅವರು ಕೊಟ್ಟ ವರದಿ ಮೇಲೆ ಮಾನ್ಯ ಗೃಹ ಸಚಿವರು ತೀರ್ಮಾನಕ್ಕೆ ಬಂದಿದ್ದರೆ ಅವರಿಗೆ ನಾನು ಹೆಚ್ಚು ಹೇಳುವುದಿಲ್ಲ, ಈ ತರಹ ಒಂದು ವಿಷಯವನ್ನು ತಪ್ಪು ತಿಳಿದುಕೊಂಡು ಭೂತಾಕಾರವಾಗಿ ಮಾಡಬಾರದು. ಇದನ್ನು ಪುಕ್ಕಲುತನದ ಪ್ರದರ್ಶನ ಎಂದು ಹೇಳಬಹುದು. ಕೋಳಿ ಮೈಮೇಲೆ ಎಲ್ಲೋ ಎಲೆ ಬಿದ್ದರೆ ಆಕಾಶವೇ ಕಳಚಿ ಬಿತ್ತು ಅಂತ ಓಡಿಹೋಯಿತು. ಅನ್ನುವ ಹಾಗೆ, ಕೋಳೀ ಹೃದಯ ಇರುವಂತಹವರು ಈ ರಾಮರಾಯರು ಅಂತ ನಾನು ಹೇಳುತ್ತಿಲ್ಲ, ಈ ತೀರ್ಮಾನವನ್ನು ತೆಗೆದುಕೊಳ್ಳುವ ಕಾಲದಲ್ಲಿ ಪುಕ್ಕಲುತನದ ಪ್ರದರ್ಶನ ಅವರದು ಆಯಿತೇ ಹೊರತು ವಾಸ್ತವಸ್ಥಿತಿಯ ಚಿತ್ರ ಪೋಲೀಸ್ ಇಲಾಖೆ ಮೂಲಕ ಗೃಹಖಾತೆಗೆ ಬರಲಿಲ್ಲ ಅಂತ ಮಾತನ್ನು ಆಡುತ್ತಾ ಇದ್ದೇನೆ. ಜೊತೆಗೆ ಮಾನ್ಯ ಮುಖ್ಯ ಮಂತ್ರಿಗಳು ಗೃಹ ಖಾತೆಯವರು ಮಾಡಿದಂತಹ ಬಂದೋಬಸ್ತನ್ನು ಮೆಚ್ಚಿಕೊಳ್ಳುತ್ತಾ 2-3 ಜನ ಇದರಲ್ಲಿ ಈ ಮಾನ್ಯ ಸಭೆಯ ಸದಸ್ಯರೂ ಕೂಡ ಇದ್ದಾರೆ ಎಂದು ಹೇಳಿದ್ದಾರೆ. ಯಾವುದರಲ್ಲಿ? ತಲೆ ಒಡೆಯುವುದರಲ್ಲಿ! ಇದು ತುಂಬಾ ದೂರ ಹೋಗತಕ್ಕ ಮಾತು ಅಷ್ಟೆ ಅಲ್ಲ ಇದು ಆಕಲ್ಪಿತವಾದ ಮಾತು ಆಗಿದೆ. ಇವರು ಹೀಗೆ ಹೇಳಿದರೆ ಜನಗಳು ಯಾರೂ ಇವರನ್ನು ಪ್ರಶ್ನೆ ಮಾಡುವುದಿಲ್ಲ ಅಂತ ಇವರು ಹಾಗೆ ಹೇಳಿರಬಹುದು. ಆದರೆ ಇದು ವಾಸ್ತವಾಂಶಕ್ಕೆ ಬಹಳ ದೂರವಾದ ಮಾತು. ವಾಸ್ತವಾಗಿಯೂ ಆ ದಿವಸ ಅಲ್ಲಿ ಯಾರ ತಲೆಹೊಡೆಯತಕ್ಕ ಪ್ರಸಂಗವೂ ನಡೆಯಲಿಲ್ಲ, ಯಾರನ್ನು ಕೊಲೆ ಮಾಡುವ ಪ್ರಸಂಗವೂ ನಡೆಯಲಿಲ್ಲ, ಮತ್ತು ವಿಧಾನಸೌಧವೂ ಸಹಾ ಪುಡಿ ಪುಡಿಯೇನೂ ಆಗೊ ಪ್ರಸಂಗ ನಡೆಯಲಿಲ್ಲ. ಇಂಥಾ ಯಾವುದೇ ಒಂದು ಪ್ರಸಂಗವಲ್ಲಾಗಲೀ ಅಲ್ಲಿ ಅದನ್ನು ತಡೆಗಟ್ಟಲು ಎಷ್ಟು ಶಕ್ತಿಯನ್ನು ಬಳಿಸಬೇಕೋ ಅಷ್ಟನ್ನು ಮಾತ್ರ ಬಳಿಸಬೇಕು. ಅಗತ್ಯಕ್ಕೆ ಮೀರಿ ಶಕ್ತಿಯನ್ನು ಬಳಿಸದಿರುವುದು ವಿವೇಕ, ಅವಶ್ಯಕತೆಗಿಂತ ಮೀರಿ ಹೆಚ್ಚಿನ ಶಕ್ತಿಯನ್ನು ಬಳಸುವುದು ಅದು ಅವಿವೇಕ, ಹುಚ್ಚುತನ ಹಾಗೂ ಮೂರ್ಖತನವಾಗುವುದು. ಕಳೆದ 20 ವರ್ಷಗಳಿಂದೀಚೆಗೆ ಪೋಲೀಸ್ ಇಲಾಖೆಯೇನೋ ಗಾತ್ರದಲ್ಲಿ ಬೆಳೆದಿದೆ ಆದರೆ ಗುಣದಲ್ಲಿಯೂ ಬೆಳೆದಿದೆಯೋ ಎಂಬುದನ್ನು ಪರೀಕ್ಷೆ ಮಾಡತಕ್ಕ ಕಾಲ ಈಗ ಬಂದಿದೆ. ಆ ಬ್ರಿಟಿಷರಿದ್ದ ಕಾಲದಲ್ಲಿ ಅವರೇನು ಒಂದು ನ್ಯಾಯಾಲಯ—ಕೋರ್ಟ್ ಪೋಲೀಸು ಅಂತ ಮಾಡಿದ್ದರೋ ಅವುಗಳನ್ನು ಅವರು ಹೋಗತಕ್ಕ ಕಾಲದಲ್ಲಿ ಇವರಿಗೆ ಬಿಟ್ಟು ಕೊಟ್ಟು ಹೋದರು. ಅವು ಈಗಲೂ ಹಾಗೆ ಉಳಿದಿವೆ ಈಗಿರತಕ್ಕ ಜೈಲ್ ಮ್ಯಾನ್ಯುಯಲ್ ಕೂಡ ಅವರ ಕಾಲದ್ದೇ. ಆದರೆ ಅವರಿದ್ದ ಕಾಲದಲ್ಲಿ ನಾವು ಯಾವುದನ್ನು ಯುರೋಪಿಯನ್ ಬ್ಯಾರಾಕ್ ಎಂದು ಕರೆಯುತ್ತಿದ್ದೆವೋ ಈ ದಿವಸ ಅದಿಲ್ಲ. ಅಷ್ಟೇ ಈ ದಿವಸ ಜಾರಿಯಿರತಕ್ಕ ಇಂಡಿಯನ್ ಪೀನಲ್‌ಕೋಡ್, ಇಂಡಿಯನ್ ಕ್ರಿಮಿನಲ್ ಪ್ರೊಸೀಜರ್ ಕೋಡ್, ಇಂಡಿಯನ್ ಎವಿಡೆನ್ಸ್ ಆಕ್ಟ್ ಹಾಗೂ ಪೋಲೀಸ್ ಆಕ್ಟ್ ಆ ಸೆಕ್ಷನ್ 107 ಮತ್ತು ಪೋಲೀಸ್ ಆಕ್ಟಿನಲ್ಲಿರತಕ್ಕ ಕೆಲವು ವಿಧಿಗಳು—ಇವೆಲ್ಲಾ ಆ ದೊರೆಗಳಿದ್ದ ಕಾಲದಲ್ಲೇ ರಚಿಸಲ್ಪಟ್ಟವುಗಳು. ಆದರೆ ಜನರಿಗೆ ಈ ದಿವಸ ಒಂದು ನಿರ್ದೇಶವನ್ನು ಕೊಡತಕ್ಕಂಥ ಕಲಂಗಳು ಅವಲ್ಲ. ಇದೇ ಸಂದರ್ಭದಲ್ಲಿ ನಮ್ಮ ಐ.ಜಿ.ಪಿ. ಅವರು ಹೇಳಿರತಕ್ಕ ಒಂದು ಮಾತನ್ನು ಇಲ್ಲಿ ತಿಳಿಸಬೇಕಾಗಿದೆ. ಚಿತ್ರದುರ್ಗದಲ್ಲಿ ಒಂದಾವರ್ತಿ ನಮ್ಮ ಐ.ಜಿ.ಪಿ. ಅವರು ಮಾಡಿದ ಭಾಷಣದ ಒಂದು ವರದಿಯನ್ನು ನಾನು ಓದಿದೆ. ಅವರು ತಮ್ಮ ಭಾಷಣದಲ್ಲಿ ಏನು ಒಂದು ಮಾತನ್ನು ಹೇಳಿದ್ದಾರೆ ಎಂದರೆ : ಈ ದಿವಸ ಈ ಇಲಾಖೆಯ ತಪ್ಪುಗಳನ್ನೆಲ್ಲಾ ಪೋಲೀಸರ ಮೇಲೆ ಹಾಕುತ್ತಿದ್ದಾರೆ. ಆದರೆ ರಾಜ್ಯದಲ್ಲಿ ಅನೇಕ ಆಂಟಿ ಸೋಷಿಯಲ್ ಲೆಜಿಸ್ಲೇಷನ್‌ಗಳನ್ನು ಜಾರಿಗೆ ತರುತ್ತಿದ್ದಾರೆ. ಅವು

ಗಳನ್ನು ಜಾರಿಗೆ ತರತಕ್ಕ ವಿಚಾರದಲ್ಲಿ ಇಲಾಖೆಯವರಿಗೆ ಸಾರ್ವಜನಿಕರಿಂದ ಸಕ್ರಿಯ ಸಹಾಯಗಳು ದೊರೆಯದೆ ಹೋದರೆ ಅವುಗಳನ್ನು ಯಶಸ್ವಿಗೊಳಿಸುವುದಕ್ಕಾಗುವುದಿಲ್ಲ ಎಂಬುದಾಗಿ—ಈ ಶಬ್ದಗಳನ್ನು ಉಪಯೋಗಿಸಿದಿದ್ದರೂ ಇದೇ ಅರ್ಥ ಬರುವಂತೆ ಮಾತನಾಡಿದ್ದಾರೆ. ಅವರು ಹೀಗೆ ಹೇಳಿರುವುದರಲ್ಲಿ ಸತ್ಯಾಂಶ ಇದೆ. ನಮ್ಮ ಕಡೆ ಅಂದರೆ ವಿರೋಧಪಕ್ಷದಲ್ಲಿ ಇಬ್ಬರು ಮಾಜಿ ಸಚಿವರುಗಳಿದ್ದಾರೆ. ಆ ಪೈಕಿ ಒಬ್ಬ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಹಾಗೆ ಅವರು ಮಾತನಾಡತಕ್ಕ ಕಾಲದಲ್ಲಿ ಆಡಳಿತವನ್ನು ನಡೆಸತಕ್ಕವರು ಹಸ್ತಕ್ಷೇಪವನ್ನು ತಪ್ಪಿಸಬೇಕು ಎಂಬುದಾಗಿ ಹೇಳಿದ್ದಾರೆ. ನಮ್ಮಲ್ಲಿ ದಕ್ಷತೆಯುಳ್ಳ ಅಧಿಕಾರಿಗಳು ಇಲ್ಲ ಅಂತ ಹೇಳುವಹಾಗಿಲ್ಲ. ಆದರೆ ರಾಜ್ಯದ ಆಡಳಿತದಲ್ಲಿ ಕಾಂಗ್ರೆಸ್ಸಿನವರು ನಿತ್ಯ ಹಸ್ತಕ್ಷೇಪದಿಂದ—ಅಂದರೆ ಇವನನ್ನು ಹಿಡಿ, ಅವನನ್ನು ಬಿಡು, ಇವನ ಮೇಲೆ ಕೇಸನ್ನು ಹಾಕು, ಅವನ ಮೇಲೆ ಹಾಕಿರುವ ಕೇಸನ್ನು ವಾಪಸ್ಸು ತೆಗೆದುಕೋ ಎಂದು ಈ ಇಲಾಖೆಯ ದಿನವಹಿ ಕೆಲಸಕಾರ್ಯಗಳಲ್ಲಿ ಪ್ರವೇಶ ಮಾಡುತ್ತಿರುವುದರಿಂದ ಈ ದಿವಸ ಈ ಇಲಾಖೆಯ ಆಡಳಿತದಲ್ಲಿ ಇಷ್ಟು ಅವ್ಯವಸ್ಥೆ ದುರವಸ್ಥೆಗಳುಂಟಾಗಿವೆ ಎಂಬುದಾಗಿ ಅವರು ಹೇಳಿದ್ದಾರೆ. ಕಳೆದ 20 ವರ್ಷಗಳ ಅವಧಿಯಲ್ಲಿ ಶ್ರೀಮಾನ್ ಸಿದ್ದವೀರಪ್ಪನವರೂ ಮತ್ತು ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರೂ ಬೇರೆ ಬೇರೆ ಅವಧಿಗಳಲ್ಲಿ ಗೃಹಸಚಿವರಾಗಿದ್ದರು. ಆದರೆ ಆಗ್ಗೂ ಈಗ್ಗೂ ಈ ಇಲಾಖೆಯ ನೌಕರರ ಸಂಬಳಸಾರಿಗೆಗಳಲ್ಲಿ ಅಂಥಾ ಬದಲಾವಣೆಗಳೇನೂ ಆಗಿರುವುದಿಲ್ಲ. ಪೋಲೀಸ್ ಇಲಾಖೆಯಲ್ಲಿ ಅದರಲ್ಲೂ ಮುಖ್ಯವಾಗಿ ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಕೊಡುತ್ತಿರುವ ಸಂಬಳ ತೀರಾ ಕನಿಷ್ಠ ಪರಿಮಿತಿಯ ಸಂಬಳ. ಆದುದರಿಂದ ಅವರು ನಡೆಸುತ್ತಿರುವ ಜೀವನ ಬಹಳ ನಿಕೃಷ್ಟವಾದ ಜೀವನ. ಇಷ್ಟು ಕನಿಷ್ಠ ವೇತನವನ್ನು ಪಡೆದು ಅಷ್ಟು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತು ಕೆಲಸಮಾಡತಕ್ಕ ಇಲಾಖೆ ಮಂತೊಂದಿಲ್ಲವೆಂದು ಹೇಳಬಹುದು. ಹೊರತಕ್ಕ ಜವಾಬ್ದಾರಿ ಬಹಳ ದೊಡ್ಡದಾದರೂ ಪಡೆಯತಕ್ಕ ಸಂಬಳ ಮಾತ್ರ ಬಹಳ ಕಡಮೆ. ಇದರಿಂದ ಅವರಲ್ಲಿ ಜಿಗುಪ್ಸೆ ಮೂಡಿದೆ. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಮೊನ್ನೆ ದೆಹಲಿಯಲ್ಲಿ ನಡೆದ ಪೋಲೀಸರ ಮುಷ್ಕರವೇ ಸಾಕು. ದೆಹಲಿಯ ನಗರ ಬಹಳ ವಿಸ್ತಾರವಾದದ್ದು. ಅಲ್ಲಿನ ಕಾನ್‌ಸ್ಟೇಬಲ್‌ಗಳು ಅವನು 20 ಮೈಲಿಗಳ ದೂರದಲ್ಲಿರಲಿ, 30 ಮೈಲಿಗಳ ದೂರದಲ್ಲೇ ಇರಲಿ ಎಲ್ಲೇ ಇರಲಿ ಅವನು ತಾನು ಡ್ಯೂಟಿ ಮಾಡತಕ್ಕ ಸ್ಥಳಕ್ಕೆ ಕಾಲಿಗೆ ಬಟ್ಟೆಯನ್ನು ಸುತ್ತಿಕೊಂಡು ಬೆಳಗಿನ ಆರು ಗಂಟೆಗೆ ಸಿದ್ಧವಾಗಿರಬೇಕು, ಅವನಿಗೆ ಬಸ್ ವಗೈರೆ ವಾಹನ ಸೌಕರ್ಯ ಇರಲಿ ಇಲ್ಲದಿರಲಿ ಅವನು ಮಾತ್ರ ಕಾಲಕ್ಕೆ ಸರಿಯಾಗಿ ಅಲ್ಲಿ ಹಾಜರಿರಬೇಕು. ಇಲ್ಲದಿದ್ದರೆ ಕೂಡಲೆ ಅವನ ಮೇಲೆ ಶಿಸ್ತಿನ ಕ್ರಮ. ಇದನ್ನೆಲ್ಲಾ ಸಹಿಸದೆ ಕಡೆಗೆ ಪೋಲೀಸಿನವರು ತಮ್ಮ ಸರ್ಕಾರದ ವಿರುದ್ಧ ಮುಷ್ಕರವನ್ನು ಹೂಡತಕ್ಕ ಪ್ರಸಂಗವುಂಟಾಯಿತು. ಆದರೆ ಇತ್ತೀಚೆಗೆ ಅವರಿಗೆ ವಾಸದ ಮನೆಗಳನ್ನೇನೋ ಕಟ್ಟಿಸಿಕೊಡತಕ್ಕ ಪ್ರಯತ್ನ ನಡೆಯುತ್ತಿದೆ. ಆದರೆ ಆ ಮನೆಗಳನ್ನು ಅಲಾಟ್ ಮಾಡತಕ್ಕ ವಿಚಾರದಲ್ಲಿ ಒಂದು ಸರಿಯಾದ ನೀತಿಯಿಲ್ಲ. ಅಂತೂ ಇವರ ಜೀವನ ಸ್ಥಿತಿ ಬಹಳ ನಿಕೃಷ್ಟ ಸ್ಥಿತಿಯಲ್ಲಿದೆ. ಇಷ್ಟೆಲ್ಲಾ ಕಷ್ಟಗಳಿದ್ದರೂ ಸಹಿಸಿಕೊಂಡು ಅವುಗಳನ್ನೆಲ್ಲಾ ಮಾಡಿ ಅವರು ಒಂದು ಹೆಸರನ್ನು ಪಡೆಯಬೇಕಾಗಿದೆ. ಈ ಇಲಾಖೆಯಲ್ಲಿ ಏನಾದರೂ ಒಂದು ಕೆಲಸ ಆಗಬೇಕಾಗಿದ್ದರೆ ಮೊದಲು ಐ.ಜಿ.ಪಿ.ಗೆ ಆ ವಿಚಾರ ಹೋಗುತ್ತದೆ. ಅನಂತರ ಅವರು ಅದನ್ನು ತಮ್ಮ ಕೈಕೆಳಗಿನ ಅಧಿಕಾರಿಗೆ ಹೇಳುತ್ತಾರೆ, ಅವರು ಮತ್ತೆ ತಮ್ಮ ಕೈಕೆಳಗಿನ ಅಧಿಕಾರಿಗೆ ಅದನ್ನು ತಿಳಿಸುತ್ತಾರೆ, ಹೀಗೆ ಅದು ಸುತ್ತುತ್ತಾ ಕಡೆಗೆ ಬಂದು ಆ ಪೋಲೀಸ್ ಕಾನ್‌ಸ್ಟೇಬಲ್ಲನ ತಲೆಯಮೇಲೆ ಕುಳಿತುಕೊಳ್ಳುತ್ತದೆ. ಕಾನ್‌ಸ್ಟೇಬಲನು ತನ್ನ ಮೇಲಿರತಕ್ಕ ದಫೇದಾರನ ಆಜ್ಞೆಯನ್ನು ಸಹಾ ಮೀರುವಂತಿಲ್ಲ, ಡಿಸೊಬೆ ಮಾಡುವುದಕ್ಕಾಗುವುದಿಲ್ಲ. ಈ ಇಲಾಖೆಯನ್ನು ಸುಧಾರಣೆ ಮಾಡಬೇಕಾದರೆ ಈ ವಿಷಯಗಳನ್ನೆಲ್ಲಾ ಪರಿಶೀಲಿಸಬೇಕಾಗುವುದು. ಈ ದಿವಸ ಈ ಹಸ್ತಕ್ಷೇಪದಿಂದ ಕೋಟ್ಯಾಂತರ ರೂಪಾಯಿಗಳ ಹಣ ದುರುಪಯೋಗವಾಗುತ್ತಿದೆ. ಇಲಾಖೆಯಲ್ಲಿ ವಿಶೇಷ ಸಿಬ್ಬಂದಿಯೇನೋ ಇದೆ. ಆದರೆ ಆಗಬೇಕಾದರೆ ಕೆಲಸಗಳು ನ್ಯಾಯವಾಗಿ ಆಗುತ್ತಿಲ್ಲ. ಇದಕ್ಕೆ ಒಂದು ಉದಾಹರಣೆ ಎಂದರೆ ಆ ಬಾಗಲು ಕೋಟೆ ಸಿಮೆಂಟ್ ಕಾರ್ಖಾನೆಯಲ್ಲಿ ಲಕ್ಷಾಂತರ ರೂಪಾಯಿಗಳ ಹಣ ಪೋಲಾಗಿ ಹೋಗುತ್ತಿದೆ ಎಂದು ದೂರು ಬಂದ ಮೇಲೆ, ವಿಚಾರಣೆಗಾಗಿ ಅಲ್ಲಿಗೆ ವಿಶೇಷ ಸಿಬ್ಬಂದಿಯನ್ನು ಹಾಕಲಾಯಿತು. ಅಲ್ಲಿಯ ಮೇನೇಜಿಂಗ್ ಡೈರೆಕ್ಟರಮೇಲೆ 32-33 ಕೇಸುಗಳನ್ನೂ ಹಾಕಲಾಯಿತು. ಸೆಷನ್‌ಕೋರ್ಟಿನಲ್ಲಿ ವ್ಯಾಜ್ಯ ನಡೆಯುತ್ತಿತ್ತು. ಅಷ್ಟರಲ್ಲೇ ಗೃಹಮಂತ್ರಿಗಳು, ಅಂದರೆ ಈಗಿರತಕ್ಕವರಲ್ಲ ಆಗಿದ್ದ ಗೃಹ ಮಂತ್ರಿಗಳು ಆ ಕೇಸುಗಳನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದರು. ಅವುಗಳನ್ನು ವಾಪಸ್ಸು ತೆಗೆದುಕೊಂಡರು. ಹಸ್ತಕ್ಷೇಪಕ್ಕೆ ಇದಕ್ಕಿಂತಲೂ ಲಜ್ಜಾಸ್ಪದವಾದ ನಿದರ್ಶನ ಬೇಕೇ ? ಇಂಥಾ ನಿದರ್ಶನಗಳು ಇನ್ನೂ ಬೇಕಾದಷ್ಟಿವೆ. ಅವುಗಳನ್ನು ಇಲ್ಲಿ ಹೇಳುವುದಕ್ಕೆ ಸಾಕಷ್ಟು ಕಾಲಾವಕಾಶವಿಲ್ಲ.

(ಶ್ರೀ ಎಸ್. ಗೋಪಾಲ ಗೌಡ)

ಇನ್ನು ಕೊಲೆ ಅಪಾದನೆಗಳಿಗೆ ಬಂದರೆ—ನಮ್ಮ ರಾಜ್ಯದಲ್ಲಿ ಒಬ್ಬ ಉಪಾಧ್ಯಾಯರ ಕೊಲೆಯಾಯಿತು. ತತ್ಸಂಬಂಧದಲ್ಲಿ ಮತ್ತೊಬ್ಬ ಉಪಾಧ್ಯಾಯರು ಮತ್ತು ಆತನ ಹೆಂಡತಿ ಹೀಗೆ ಇಬ್ಬರನ್ನು ಬಂಧಿಸಲಾಯಿತು. ಹೆಂಡತಿ ಆಗ ಗರ್ಭಿಣಿ. ಸಬ್ ಇನ್‌ಸ್ಪೆಕ್ಟರ್ ವಿಚಾರಣೆ ಮಾಡುತ್ತಿದ್ದಾರೆ. ಆ ಕೂಡಲೇ ಆ ಗಂಡಹೆಂಡರಿಬ್ಬರೂ ಸತ್ತು ಬೀಳುತ್ತಾರೆ. ಹಾಗೆ ಆ ಇಬ್ಬರು ವ್ಯಕ್ತಿಗಳು ಸತ್ತು ಹೋದುದಕ್ಕೆ ಕಾರಣ ಏನೆಂಬುದನ್ನು ತಿಳಿಸುವುದಕ್ಕಾಗಿ ಒಂದು ಕಥೆಯನ್ನೇ ಕಟ್ಟಿದರು. ಆ ಸತ್ತು ಹೋದ ಇಬ್ಬರಿಗೂ ಜೀವನದಲ್ಲಿ ತೀರಾ ಜಿಗುಪ್ಸೆ ಹುಟ್ಟಿ ಬಹಳ ಬೇಸರವಾಗಿತ್ತೆಂದೂ, ಅವರಿಗೆ ಬದುಕಿರಲು ಇಷ್ಟವಿರಲಿಲ್ಲ ಎಂದೂ, ಆದಕ್ಕಾಗಿ ಅವರಿಗೆ ಕುಡಿಯಲು ಕಾಫಿಯನ್ನು ಕೊಟ್ಟಾಗ ಅವರಲ್ಲಿಟ್ಟುಕೊಂಡಿದ್ದ ವಿಷವನ್ನು ಆ ಕಾಫಿಯಲ್ಲಿ ಬೆರೆಸಿ ಕುಡಿದು ಅವರು ಸತ್ತುಬಿದ್ದಿದ್ದಾರೆ ಎಂಬುದಾಗಿ ಪೋಲೀಸಿನವರಿಗೆ ಅವರ ಬಳಿ ಸಿಕ್ಕಿದ ಒಂದು ಚೀಟಿಯಿಂದ ಈ ವಿಚಾರಗಳು ಪೋಲೀಸಿನವರಿಗೆ ತಿಳಿದುಬಂದಹಾಗೂ ಇವರು ಆ ಬಗ್ಗೆ ಒಂದು ಕಥೆಯನ್ನೇ ಕಟ್ಟಿದರು. ಅಲ್ಲಿಗೆ ಆ ಕೇಸು ಮುಗಿಯಿತು. ಅದೇ ರೀತಿ ಹಿಂದೆ ಇದೇ ಬೆಂಗಳೂರು ನಗರದಲ್ಲಿ ಡ್ರೈಟನ್ ಎಂಬ ಒಬ್ಬ ಮಹಿಳೆಯ ಕೊಲೆಯಾಯಿತು. ಆ ಕೊಲೆ ಯಾರಿಂದಾಯಿತು ಎಂಬುದು ಇಲ್ಲಿಯವರೆಗೂ ಇನ್ನೂ ಪತ್ತೆಯಾಗಿಲ್ಲ. ಈಗ ಇದೇ ಬೆಂಗಳೂರಿನಲ್ಲಿ ಜಯಮ್ಮ ಎಂಬುವವರ ಕೊಲೆಯಾಯಿತು. ಆ ಕೊಲೆಯನ್ನು ಪತ್ತೆ ಮಾಡಲು ಮದ್ರಾಸಿನಿಂದ ನಾಯಿಗಳನ್ನು ತಂದರು. ಅವು ಬಂದು ಇಲ್ಲಿ ಯಾರು ಯಾರನ್ನೋ ಮೂಸಿ ನೋಡಿದವು, ವಾಪಸ್ಸು ಹೋದುವು. ನಾನು ಹೇಳುತ್ತಿರುವುದು ಈ ದಿವಸ ರಾಜ್ಯದ ಜನತೆಗೆ ತಮ್ಮ ಪ್ರಾಣ ಮತ್ತು ವಿತ್ತಗಳ ಬಗ್ಗೆ ಕಾನೂನು ಪರಿಮಿತಿಯೊಳಗೆ ಕೆಲಸಮಾಡತಕ್ಕ ಪೋಲೀಸರ ರಕ್ಷಣೆ ಸಿಗುತ್ತದೆ ಎಂಬ ವಿಶ್ವಾಸ ನಾಗರೀಕರಲ್ಲಿ ಉಳಿದಿಲ್ಲ.

6-00 P.M.

ಪೋಲೀಸಿನವರಿಗೆ ಹೇಳಿದರೆ ಸಾಕು, ಅವರು ನಮ್ಮ ಮನೆ, ಆಸ್ತಿ, ಎಲ್ಲವನ್ನು ರಕ್ಷಣೆ ಮಾಡುತ್ತಾರೆಂಬ ವಿಶ್ವಾಸ ಸ್ವಲ್ಪವೂ ಅನುಮಾನವಿಲ್ಲದ ರೀತಿಯಲ್ಲಿ ನಮಗೆ ಇರಬೇಕು ಅದೇ ವಿಶ್ವಾಸ ಪೋಲೀಸ್ ಇಲಾಖೆಯಲ್ಲಿಯೂ ಉಂಟಾಗಬೇಕು. ಕಾನೂನು ಕಟ್ಟಳೆಗಳನ್ನು ಜಾರಿಗೆ ಕೊಡುವ ಪೋಲೀಸ್ ಇಲಾಖೆಗೂ ಕೂಡ ಬರಬೇಕು. ಪೋಲೀಸ್ ಕೆಲಸದಲ್ಲಿರತಕ್ಕವನು ತಾನು ನ್ಯಾಯವಾಗಿ ವರ್ತಿಸಿದರೆ ಆದರಿಂದ ಯಾವ ರೀತಿಯಲ್ಲಿಯೂ ಕೇಡು ಆಗುವುದಿಲ್ಲ, ವರ್ಗಾವಣೆಯಾಗುವುದಿಲ್ಲ, ಏನು ತೊಂದರೆಯೂ ಆಗುವುದಿಲ್ಲ ಎನ್ನುವ ವಿಶ್ವಾಸ ಭಾವನೆ ಆತನಲ್ಲಿ ಬರಬೇಕು. ಈಗಿನ ಒಂದು ಸನ್ನಿವೇಶದಲ್ಲಿ ಇವೆರಡೂ ಲೋಪವಾಗಿದೆ. ಪೋಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಡಲು ಕೂಡಾ ಜನ ಅಂಜುತ್ತಾರೆ. ನಿನ್ನೆಯೋ ಅಥವಾ ಮೊನ್ನೆಯೋ ಇದೇ ಮನೆಯಲ್ಲಿ ಒಂದು ಪ್ರಶ್ನೆ ಬಂತು. ''ಶವ ಸಿಗದೆ ಎಲುಬುಗಳು ಬಿದ್ದಿದ್ದುವು'' ಎಂದು ಉತ್ತರ ಬಂತು. ಪೋಲೀಸ್ ವ್ಯಾಖ್ಯಾನ ಪ್ರಕಾರ ಅದನ್ನು ನಾವು ಪರೀಕ್ಷೆಗೆ ಕಳುಹಿಸಿದ್ದೇವೆಂಬುದಾಗಿಯೂ ಉತ್ತರ ಹೇಳಿದರು. ಯಾವ ಒಂದು ವಿಷಯವೇ ಆಗಲಿ, ಆತ್ಮಹತ್ಯ ಅಥವಾ ಕೊಲೆಗಳಾಗಲೀ ಅದನ್ನು ಪರೀಕ್ಷೆ ಮಾಡುವುದಕ್ಕೆ ಕಳುಹಿಸಿದ್ದೇವೆ, ಡಾಕ್ಟರ್ ಹತ್ತಿರ ವರದಿಗಾಗಿ ಕಳುಹಿಸಿದ್ದೇವೆ, ಆಮೇಲೆ ಕೆಮಿಕಲ್ ಎಗ್ಸಾಮಿನರ್ ಹತ್ತಿರ ಕಳುಹಿಸಿದ್ದೇವೆಂದು ಹೇಳಿ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ವರದಿ ಬರೆಸಿಕೊಂಡು ಹೋಗಿ ಅಲ್ಲಿ ಬಿ. ಷೀಟ್ ಕೊಡುವ ವ್ಯವಸ್ಥೆಯಾದರೂ ಏನು ಎಂಬುದಾಗಿ ನಾನು ಕೇಳುತ್ತೇನೆ. ಕೊಲೆಗಳನ್ನು ತಪಾಸಣೆ ಮಾಡುವುದರಲ್ಲಿ ಬಹಳ ವಿಚಕ್ಷಣೆ ಬೇಕು, ದಕ್ಷತೆಬೇಕು, ಆ ಪ್ರವೃತ್ತಿಬೇಕು. ಅದಿಲ್ಲದೆ ಸುಮ್ಮನೆ ಬೇರೆ ದೇಶಗಳ ಉದಾಹರಣೆ ಹೇಳಿಕೊಳ್ಳುವುದು ಸರಿಯಲ್ಲ. ಒಬ್ಬ ತಾಯಿಯಾದವಳು ತನ್ನ ಮಗ ಕೊಲೆ ಮಾಡಿದ್ದಾನೆ, ಅಲ್ಲಿ ಇದ್ದಾನೆಂದು ಹೇಳಿ ಪೋಲೀಸ್ ಸ್ಟೇಷನ್ನಿಗೆ ದೂರುಕೊಡುವ ನೀತಿ ನಮ್ಮಲ್ಲಿ ಬೆಳೆಯದಿದ್ದರೆ ಹೇಗೆ? ವಕೀಲರು ರಕ್ಷಣೆ ಕೊಡುತ್ತಾರೆನ್ನುವುದು ಅದು ಕಾನೂನಿನ ವಿಷಯ. ಆದರೆ ಈ ವಿಚಾರಗಳಲ್ಲಿ ಅವರು ವಾದ ಮಾಡುವುದು ಸರಿ. ಆದರೆ ಅಂತಹುಗಳನ್ನು ತಡೆಗಟ್ಟುವುದಕ್ಕೆ ಏನೇನು ಕ್ರಮವನ್ನು ತೆಗೆದುಕೊಂಡಿದ್ದೀರೆಂದು ನಾನು ಕೇಳುತ್ತೇನೆ.

ಒಂದು ಉದಾಹರಣೆಯನ್ನು ಈಗ ಕೊಡಬೇಕಾಗಿದೆ. ಮೊನ್ನೆ ಕೊಳ್ಳೇಗಾಲದಲ್ಲಿ ಕಾಮಗೆರೆ ಎಂಬಲ್ಲಿ ಒಬ್ಬ ಪಿ.ಸಿ. 957 ಎಂಬುವನು, ಆತ ಎಂ. ಎ. ಆರ್. ಪಿ.ಯಲ್ಲಿ ಕೆಲಸ ಮಾಡುವವನೇ ಬಾವಿಯಲ್ಲಿ ಅವನ ಹೆಣ ಸಿಕ್ಕಿದೆ ಎಂದು ನನಗೆ ದೂರು ಬಂದಿದೆ. ಅದರ ಬಗ್ಗೆ ನನಗೆ ಒಂದು ವರ್ತಮಾನ ಏನು ಬಂದಿದೆಯೆಂದರೆ, ಜೊತೆಯಲ್ಲಿದ್ದ ಪೋಲೀಸರೇ ಕೊಲೆ ಮಾಡಿರುವುದಾಗಿ ತಿಳಿದು ಬಂದಿದೆ

ಇನ್ನು ವಾಹನಗಳ ವಿಷಯ. ಅಲ್ಲಿ ಡಿಕ್ಕಿ ಹೊಡೆಯಿತು, 10 ವರ್ಷ ವಯಸ್ಸಿನವನ ಮೇಲೆ ಲಾರಿ ಹರಿಯಿತು, ಮಲಗಿದ್ದವನ ಮೇಲೆ ಲಾರಿ ಹೋಯಿತು, ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ. ಡ್ರೈವರನ್ನು ಮತ್ತು ಕಂಡಕ್ಟರನ್ನು ಅರೆಸ್ಟ್ ಮಾಡುತ್ತಿದ್ದಾರೆಂದು ಪ್ರತಿ ದಿವಸವೂ ಪೇಪರ್‌ನಲ್ಲಿ ಬರುತ್ತಿರುವುದನ್ನು ನೋಡುತ್ತಿದ್ದೇವೆ. ಇತ್ತೀಚೆಗೆ ಪತ್ರಿಕೆಗಳವರೂ ಕೂಡ ಪ್ರತಿದಿವಸವೂ ಆ ವಿಚಾರವಾಗಿ ಏನು ಬರೆಯುವುದು ಎಂದು ಬೇಜಾರಾಗಿ ಅದಕ್ಕೆ ಸಾಕಷ್ಟು ಜಾಗವಿಲ್ಲವೆಂದು ಕೈ ಬಿಡುತ್ತಿದ್ದಾರೆ. ಮಾನ್ಯ ಶ್ರೀ ಚನ್ನಬಸಪ್ಪನವರು ಆಡಳಿತ ಪಕ್ಷದಲ್ಲಿದ್ದಾಗ್ಗೆ ಕೆಲವು ಅಧಿಕಾರಿಗಳ ಬಗ್ಗೆ ಕ್ರಮವನ್ನು ತೆಗೆದುಕೊಂಡು ಕೆಲವರನ್ನು ಕೆಲಸದಿಂದ ತೆಗೆದುಹಾಕಿದ್ದರು. ನಮ್ಮ ಸ್ನೇಹಿತರು ಆಡಳಿತಕ್ಕೆ ಬಂದಮೇಲೆ ಇಂತಹವರನ್ನೆಲ್ಲಾ ಪುನಃ ನೇಮಿಸಿಕೊಂಡಿದ್ದಾರೆ. ಇನ್ನು ಪ್ರತಿದಿವಸ 300 ಕ್ವಿಂಟಾಲ್, 600 ಕ್ವಿಂಟಾಲ್ ಅಕ್ಕಿ ಜಪ್ತಿ ಆಯಿತು ಎಂದು ಹೇಳತಕ್ಕ ಕಥೆಗಳನ್ನು ನಾನು ಬೇಕಾದಷ್ಟು ನೋಡಿದ್ದೇನೆ. ಆ ಭಾಗದಿಂದ 30 ಸಾವಿರ ಉತ್ಪತ್ತಿ ತೋರಿಸಿದ್ದೇವೆ, ಕಳ್ಳತನದ ಮಾಲುಗಳ ಮಾರಾಟದಿಂದ ಇಷ್ಟು ಉತ್ಪತ್ತಿ, ಅಷ್ಟು ಉತ್ಪತ್ತಿ ಎಂದು ತೋರಿಸುತ್ತಿದ್ದಾರೆ. ಭಂಗಾರಗಟ್ಟಿಗಳನ್ನು ಬೇಕಾದಷ್ಟು ಬೆಂಗಳೂರಿನಲ್ಲಿ ಕಾಳಸಂತೆಯಲ್ಲಿಯೂ ಮತ್ತು ಕಳ್ಳ ಸಾಗಾಣಿಕೆಯಲ್ಲಿಯೂ ಹಿಡಿದಿದ್ದೇವೆಂದು ಹೇಳುತ್ತಾರೆ, ಇನ್ನು ಬೇಕಾದಷ್ಟು ಗಡಿಯಾರಗಳನ್ನು ಕದ್ದುಕೊಂಡು ಹೋಗಿರುವವರನ್ನು ಹಿಡಿಯಲಾಯಿತು ಎಂದು ಹೇಳುತ್ತಾರೆ. ಅವೆಲ್ಲಾ ಎಲ್ಲಿ ಹೋಯಿತು, ಯಾರ ವಶದಲ್ಲಿ ಕೊಟ್ಟಿದ್ದೀರಿ, ಅವೇನಾಯಿತು ಎಂಬುದೇ ಇಲ್ಲ. ಇದರ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು. ಈ ರೀತಿಯಾಗಿ ಜನರ ಕಣ್ಣಿಗೆ ಮಣ್ಣು ಎರಚುವ ಹಾಗೆ ಕೆಲವರನ್ನು ಹಿಡಿಯುವುದು ಮತ್ತೆ ಕೆಲವರನ್ನು ಹಾಗೆಯೇ ಬಿಡುವುದು ಹೀಗೆ ತಮಗೆ ಬೇಕಾದ ಹಾಗೆ ಮಾಡುವ ವಿಧಾನ ಏನಿದೆ ಅದನ್ನು ಮಾನ್ಯ ಶ್ರೀ ಅಮಲೋರ್ಪವಂ ಆಗಲೀ ಅಥವಾ ಇತರ ಯಾವ ಮಾನ್ಯ ಸದಸ್ಯರೇ ಆಗಲೀ ಸರಿಯೆಂದು ಹೇಳುವುದಕ್ಕಾಗುತ್ತದೆಯೇ ? ಇನ್ನು ಉಗ್ರವಾದ ಶಿಕ್ಷೆ ಎಂದು ಹೇಳುತ್ತಾರೆ. ಉಗ್ರ ಶಿಕ್ಷೆ ಕೊಡಲು ನನ್ನನ್ನು ಹಿಡಿಯುತ್ತಾರೆಯೇ ? ಸಮಾಜದಲ್ಲಿ ಯಾವಾಗಲೂ ಮೇಲು ಕೀಳು ಎಂಬ ಭಾವನೆ ಇರುತ್ತದೆ. ಏರುಪೇರುಗಳೂ ಸಹ ಇರುತ್ತವೆ. ಅವು ಸಮಾಜದಲ್ಲಿರುವುದರಿಂದ ಅವರೂ ಯಾರನ್ನು ಹಿಡಿಯಬೇಕು ಯಾರನ್ನು ಹಿಡಿಯಬಾರದು ಎಂದು ಯೋಚನೆಮಾಡುತ್ತಾರೆ. ಅಲಸೂರ್ ಗೇಟ್ ಪೋಲೀಸ್ ಸ್ಟೇಷನ್ನಿನವರು ರಿಕ್ಷಾ ಡ್ರೈವರುಗಳನ್ನೂ ಮತ್ತು ಟ್ಯಾಕ್ಸಿ ಡ್ರೈವರುಗಳನ್ನೂ ಅರೆಸ್ಟ್ ಮಾಡುವುದು ಮತ್ತು ಟ್ಯಾಕ್ಷಿಯವರನ್ನು ತಮಗೆ ಬಾಯಿಗೆ ಬಂದಹಾಗೆ ಬೈಯ್ಯುವುದು ಇದು ಸರಿಯಲ್ಲ. ಈಗ ಅಲಸೂರಿನಲ್ಲಿ ಒಂದು ಪೋಲೀಸ್ ಸ್ಟೇಷನ್ನನ್ನು ಕಟ್ಟಿಸಿದ್ದಾರೆ. ಪೋಲೀಸ್ ಸ್ಟೇಷನ್ ಉತ್ತಮವಾಗಿದ್ದರೂ ಅಲ್ಲಿ ಬಂಧಿಗಳನ್ನಿಡುವ ಲಾಕ್‌ಅಪ್‌ಗಳಿವೆ. ಅದನ್ನು ನೋಡಲು ಮೊನ್ನೆ ಒಂದು ಅವಕಾಶ ಸಿಕ್ಕಿತು. ಒಳಗಡೆ ಫೀಮೇಲ್ ಲಾಕಪ್ ಎಂದು ಒಂದು ಬೋರ್ಡ್ ಬರೆದಿದ್ದಾರೆ. ಅದರಲ್ಲಿ ನಮಗೆ ಗೊತ್ತಾದ್ದು ಏನೆಂದರೆ, ಎಷ್ಟೋ ಹುಡುಗರು ಫುಟ್‌ಪಾತ್‌ನಲ್ಲಿ ಮಲಗಿ ನಿದ್ರೆ ಮಾಡುತ್ತಿದ್ದವರನ್ನು ಹಿಡಿದುಕೊಂಡು ಹೋಗಿ ಅಲ್ಲಿ ಕೂಡಿರುವುದನ್ನು ನಾವು ನೋಡಿದೆವು. ಎಷ್ಟು ಜನರನ್ನು ಇವರು ಆ ರೀತಿ ಹಿಡಿದುಕೊಂಡು ಹೋಗಿದ್ದಾರೋ ಅವರ ಹೆಸರುಗಳನ್ನೇ ಅಲ್ಲಿ ಬರೆದುಕೊಂಡಿಲ್ಲ. ಇನ್ನು ಶ್ರೀ ವಾಟಾಳ್ ನಾಗರಾಜ್ ಮತ್ತು ನನ್ನಂಥವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಇನ್ನೆಷ್ಟರಮಟ್ಟಿಗೆ ರಕ್ಷಣೆ ಮಾಡುತ್ತಾರೋ ನನಗೆ ಗೊತ್ತಿಲ್ಲ. ಮುಖ್ಯವಾಗಿ ನಮ್ಮ ಮನೆಗಳಲ್ಲಿ ಸಿಕ್ಕುವ ಉಪಚಾರ ಅಲ್ಲಿ ಏನೂ ಸಿಗುವುದಿಲ್ಲ. ಅಲ್ಲಿ ಅನೇಕರನ್ನು ಅಂದರೆ ಗೂಂಡಾಗಳನ್ನು ಮತ್ತು ಅಂಟಿ ಸೋಷಿಯಲ್ ಎಲಿಮೆಂಟ್ಸ್‌ಗೆ ಸೇರಿದವರು ಎಂದು ಕೂಡಿಹಾಕಿದ್ದಾರೆ. ಅದರೊಳಗೆ ಶ್ರೀ ವಾಟಾಳ್ ನಾಗರಾಜ್ ಮತ್ತು ನಾನು, ಇಬ್ಬರೂ ಅನೇಕವೇಳೆ ಬಂದಿರಬಹುದು.

ಶ್ರೀ ವಾಟಾಳ್ ನಾಗರಾಜ್.—107ನೇ ಸೆಕ್ಷನ್ ಕೇಸುಗಳು ನನ್ನ ಮೇಲೆ ಬೇಕಾದಷ್ಟು ಹಾಕಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಅದನ್ನು ನನ್ನ ಮೇಲೆಯೂ ಬೇಕಾದಷ್ಟು ಹಾಕಿದ್ದಾರೆ. 420ನೇ ಸೆಕ್ಷನ್ನೂ ಸಹ ನನಗೆ ಗೊತ್ತು. ಇವತ್ತು ಅವನ್ನು ನಮ್ಮ ಮೇಲೆ ಹಾಕುತ್ತಾರೆ. ನಾಳೆ ನಾವು ಅದನ್ನೇ ಅವರ ಮೇಲೆ ಹಾಕೋಣ.

ಆದ್ದರಿಂದ ತಾವು ಏನು ಕ್ಲೇಮ್ ಮಾಡಿದ್ದೀರಿ, ಒಳ್ಳೆಯ ಸುಧಾರಣೆಗಳನ್ನು ಜೈಲಿನಲ್ಲಿ ಮಾಡಿದ್ದೇವೆಂದು ಹೇಳಿದ್ದೀರಿ, ಅದು ಏನೇನೂ ಸಾಲದು. ಇನ್ನೂ ಬಹಳ ಸುಧಾರಣೆಯಾಗಬೇಕು. ಮಲಗುವಲ್ಲಿ ಮೂತ್ರ ವಿಸರ್ಜನೆ ಹಾಗೂ ಪಾಯಿಖಾನೆ ಕೊಠಡಿಗಳು ಇವೆ ಬಹಳ ಕೆಟ್ಟರೀತಿಯಲ್ಲಿ ಆಹಾರ ಕೊಡುತ್ತಾರೆ. ಆದ್ದರಿಂದ ಅದರ ಕಡೆಗೆ ಸರ್ಕಾರದವರು ಗಮನಿಸಬೇಕು. ರಾಜಕಾರಿಣಿಗಳಾಗಿ, ಅದರಲ್ಲಿಯೂ ಪೊಲಿಟಿಕಲ್ ಪ್ರಿಜನರ್ಸ್ ಆಗಿ ಹೋದವರು ಈಗಿನ ಒಂದು ಅನುಕೂಲತೆಯಿಂದ ಏನೂ ತೃಪ್ತಿ ಹೊಂದಲಾರರು. ಅವರಿಗೆ ಈಗಿನ ಕಾನೂನಿನಲ್ಲಿ ಬೇರೆ ವ್ಯವಸ್ಥೆ ಇಲ್ಲ.

(ಶ್ರೀ ಎಸ್. ಗೋಪಾಲಗೌಡ)

ನಾನು ಈ ವಿಚಾರವಾಗಿ ಹಿಂದೆ ಪ್ರಸ್ತಾಪ ಮಾಡಿದಾಗ ಇದಕ್ಕೆ ಪ್ರತ್ಯೇಕ ಕಾನೂನು ಅವಶ್ಯಕತೆ ಇದೆಯೆಂದೂ ಸಹ ಹೇಳಿದ್ದೆ. ಆದರೂ ಕಾಂಗ್ರೆಸ್ ಸ್ನೇಹಿತರು ಮಾಡಿಲ್ಲ. ಮತ್ತೆ ಅವರೇ ಬಂದೀಖಾನೆಗಳಿಗೆ ಹೋಗಲಿದ್ದಾರೆ. ಅವರಿಗೇ ಇದರಿಂದ ತೊಂದರೆಯಾಗುತ್ತದೆ. ಇಲ್ಲಿ ಜೀವಾವಧಿ ಶಿಕ್ಷೆಗೊಳಗಾದವರಿಗೆ ಒಂದು ನಿಯಮವಿದೆ, ಅದಕ್ಕಾಗಿ ಒಂದು ಬೋರ್ಡ್ ಇದೆ. ಅದು 8-10 ವರ್ಷಗಳಾದಮೇಲೆ ಅವರ ಒಂದು ಒಳ್ಳೆಯ ನಡತೆಯ ಮೇಲೆ ಬಿಡುಗಡೆಮಾಡಬೇಕೆಂಬುದು. ಕೆಲವು ರೆಮಿಷನ್ ಸಹ ಕೊಡುತ್ತಾರೆ. ಮುಂಬಾಯಿ ಕರ್ಣಾಟಕದಲ್ಲಿ ಈ ಬಂದಿಗಳಿಗೆ ಪೆರೋಲ್ ಇದೆ. ಆದರೆ ಜೈಲುಗಳ ಕಾನೂನಿನಲ್ಲಿ ಸಮನ್ವಯವಿಲ್ಲ. ಬೆಂಗಳೂರು, ಬಳ್ಳಾರಿ, ಗುಲ್ಬರ್ಗಾದಲ್ಲಿ ಒಂದೊಂದು ರೀತಿಯ ಹಳೆಯ ಸಂಪ್ರದಾಯ, ಪರಂಪರೆ ನಡೆಯುತ್ತಿದೆ. ಇದುವರೆಗೆ ಎಷ್ಟು ಜನ ಗೃಹಮಂತ್ರಿಗಳು ಬಂದು ಹೋದರು. ನಾವು ಎಷ್ಟೋ ಟೀಕೆ ಮಾಡಿದ್ದೇವೆ ಆದರೆ ಏನೂ ಬದಲಾವಣೆಯಾಗಿಲ್ಲ. ಈ ಇಲಾಖೆಯಲ್ಲಿ ಮೆಡಲ್ ಕೊಡುತ್ತಾರೆ. ಯಾರಿಗೋ ಒಬ್ಬರಿಗೆ ಕೊಡುವುದಾಗಿದೆ. ಆದರೆ ಅವರು ಎಲ್ಲಿಯೂ ದಕ್ಷರಾಗಿ ನಡೆಯುತ್ತಾ ಇಲ್ಲ. ಆದ್ದರಿಂದ ಅವರಲ್ಲಿ ದಕ್ಷತೆಯನ್ನು ತರಬೇಕು, ಪ್ರಾಮಾಣಿಕತೆಯನ್ನು ತರಬೇಕು. ಪೋಲೀಸಿನವರು ಪೋಲೀಸಿನವರಂತೆ ನಡೆದುಕೊಳ್ಳಬೇಕು. ಇದರ ಬಗ್ಗೆ ಇನ್ನೂ ಹೆಚ್ಚು ಪ್ರಯತ್ನ ಮಾಡಬೇಕು. ಈಗಿನ ಸನ್ನಿವೇಶದಲ್ಲಿ ಅದು ಬಹಳ ಅವಶ್ಯಕತೆ ಇದೆಯೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಸಮಯ ಹೆಚ್ಚು ಇಲ್ಲದೇ ಇರುವುದರಿಂದ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now adjourn to meet to-morrow at 1 P.M.

The House adjourned at Fifteen Minutes past Six of the Clock to meet again at One of the Clock on Thursday, the 13th July 1967.

WD 9035—GPB—500—14.9·1967